ಡಿಸೆಂಬರ
೧೯೬೬

ಕಲ್ಯಾಣ ಕಿರಣ

ಬೆಲೆ
೪ ರೂ



ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಶರಣ ಮೇಳ
೧೯೬೭ ಜನವರಿ ೧೨, ೧೩, ೧೪, ೧೫ ರಂದು

★ ಕಲ್ಯಾಣ ಕಿರಣ ★

ಸಂಪುಟ ೨೬ | ಬಸವ ಶಕೆ ೮೬೩ | ಆಜೀವ ಸದಸ್ಯತ್ವ ೪೦೦ ರೂ
ಸಂಚಿಕೆ ೪ | ಡಿಸೆಂಬರ್ ೧೯೯೬ | ವಾರ್ಷಿಕ ಚಂದಾ ೪-೦೦ ರೂ

ಲೇಖನಗಳು ಕಿರಣಗನ್ನಡಿ	ಲೇಖಕರು	ಪುಟ ಸಂಖ್ಯೆ
೧. ಶರಣ ಮೇಳಕ್ಕೆ ಸ್ವಾಗತ	ಪೂಜ್ಯ ಮಾತಾಜಿ	೧
೨. ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳಿಗೆ ನಮನ	ಅನ್ನಪೂರ್ಣ ಮನ್ನಾಪುರ	೨
೩. ಶರಣ ಮೇಳದ ವಿವರ	ಪೂಜ್ಯ ಮಾತಾಜಿ	೩
೪. ಶರಣ ಮೇಳಕ್ಕೆ ಸ್ಥಿರಾಹ್ವಾನ	ಪೂಜ್ಯ ಮಾತಾಜಿ	೪-೫
೫. ದೈವೀ ಪ್ರೇರಣೆಯ ವಾಕ್ಯಗಳು	ಮಲ್ಲಿಕಾರ್ಜುನ. ಮ. ಕಡಬಿ	೬
೬. ಶರಣ ಮೇಳ- ಯಾರಿಂದ, ಯಾರಿಗಾಗಿ, ಯಾರದ್ದು	ಬಸವಾತ್ಮಜೆ	೭-೧೦
೭. ಧರ್ಮಪಿತರ ಕರೆಯೋಲೆ	ಬಸವಾತ್ಮಜೆ	೧೭-೨೦
೮. ಶರಣ ಮೇಳಕ್ಕೆ ಬಸ್ ವ್ಯವಸ್ಥೆಯ ಬಗ್ಗೆ- ಸಾರಿಗೆ ಸಂಸ್ಥೆಯ ಸುತ್ತೋಲೆ		೨೧-೨೨
೯. ಬಸವ ಗಂಗೋತ್ರಿ ನಗರ ಯೋಜನೆ	ಶರಣ ವಿಜಯಾನಂದರು	೨೩-೨೪
೧೦. ಶರಣ ಮೇಳದ ಕೆಲವೊಂದು ವಿಶೇಷ ವಿವರಗಳು		೩೪
೧೧. ಬಸವರ ನೋಟ ಕುರಿತು- ಬೀದರ್‌ನ ಪ್ರಕಟಣೆ		೩೫-೩೬
೧೨. ವೀರಶೈವ ಸಮಾಜದಲ್ಲಿ ಮನವಿ	ಶರಣ ವಿಜಯಾನಂದರು	೩೭-೩೮
೧೩. ಲಿಂಗದೇವಾ ವಚನಾಂಕಿತ ಕುರಿತು ಸ್ಪಷ್ಟೀಕರಣ- ಕೃತಿಚೌರ್ಯವಲ್ಲ	ಪೂಜ್ಯ ಮಾತಾಜಿ	೩೯
೧೪. ರಾಷ್ಟ್ರೀಯ ಬಸವ ದಳಗಳವರಿಗೆ ಮತ್ತು ಇತರ ಬಸವ ಭಕ್ತರಿಗೆ ಸೂಚನೆ	ಪೂಜ್ಯ ಮಾತಾಜಿ	೪೦-೪೧
೧೫. ಬಸವ ಧರ್ಮಪೀಠದ ಪ್ರಥಮ ಪೀಠಾಧಿಶರಾದ ಲಿಂ॥ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು		೪೨
೧೬. ನಿಸ್ವಾರ್ಥ ದಾಸೋಹಿ, ಶರಣೆ. ಟಿ. ಎಲ್. ಶಾರದಮ್ಮ		೪೩
೧೭. ಮಂಗಲ ಪದ್ಯಗಳು	ಶರಣೆ ಭಾರತಿ ಕೆಂಪಯ್ಯ	೪೪
೧೮. ರಾಷ್ಟ್ರೀಯ ಬಸವ ದಳಗಳವರಿಗೆ ಸೂಚನೆ	ಪೂಜ್ಯ ಚನ್ನಬಸವರಾಜ ಸ್ವಾಮಿಗಳು	೪೫
೧೯. ೧೯೯೭ ನೇ ಸಾಲಿನ ಹಬ್ಬ ಹುಣ್ಣಿಮೆ ಉತ್ಸವಗಳು		೪೬
೨೦. ಸಂಕಲ್ಪ ಗೀತೆ, ಧ್ವಜ ಗೀತೆ, ಪ್ರತಿಜ್ಞಾ ಗೀತೆ	ಮಾತಾಜಿ	೪೭-೪೮

ಮುಖಪುಟ : ವಿಶ್ವಗುರು ಬಸವಣ್ಣನವರು , ಐಕ್ಯ ಮಂಟಪ

ಹಿಂಬದಿಯ ಪುಟ : ಶ್ರೀ ಬಸವಣ್ಣನವರ ಐಕ್ಯ ಮಂಟಪ, ಸಂಗಮೇಶ್ವರ ದೇವಾಲಯದ ಪ್ರತಿಬಿಂಬ

KALYANA KIRANA- Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgod, Bangalore-560074. Phone : 8437234, 3325335

★ ಕಲ್ಯಾಣ ಕಿರಣ ★

ಸಂಪುಟ ೨೬ | ಬಸವ ಶಕೆ ೮೬೩ | ಆಜೀವ ಸದಸ್ಯತ್ವ ೪೦೦ ರೂ
ಸಂಚಿಕೆ ೪ | ಡಿಸೆಂಬರ ೧೯೯೬ | ವಾರ್ಷಿಕ ಚಂದಾ ೪೦ ರೂ

ಶರಣ ಮೇಳಕ್ಕೆ ಸ್ವಾಗತ

ಬನ್ನಿ ಬನ್ನಿ ನೋಡಬನ್ನಿ ಸಂಗಮದ ಕ್ಷೇತ್ರವ
ಬನ್ನಿ ಬನ್ನಿ ನೋಡಬನ್ನಿ ಶರಣ ಮೇಳವ ॥ ಪಲ್ಲವಿ॥

ಶ್ರೀ ಸಂಗಮೇಶನ ಭವ್ಯ ತಾಣ ಸಂಗಮ
ವಿಶ್ವಗುರು ಬಸವಣ್ಣನ ಐಕ್ಯ ಕ್ಷೇತ್ರ ಸಂಗಮ
ಗಣಲಿಂಗವ ಹೊಂದಿರುವ ಮಹಾಮನೆಯ ಸಂಗಮ
ಶರಣ ಮೇಳ ನಡೆಯುತಿರುವ ಧರ್ಮಕ್ಷೇತ್ರ ಸಂಗಮ ॥ ೧॥

ಕಲ್ಯಾಣ ನಾಡಿನೊಳು ಅಂದು ಒಂದು ಕ್ರಾಂತಿಯಾಗಿ
ಬಸವ ಸುತರು ಚದುರಿದರು ಹತ್ತು ಹಲವು ದಿಕ್ಕಿಗೆ
ನೆಲೆಯು ಇರದ ಮಕ್ಕಳಂತೆ ಸೋತು ಬಳಲಿ ಬಾಳುತಿರೆ
ಶರಣ ಮೇಳ ತೌರ ತೋರಿ ನಲುಮೆಯಿಂದ ಕರೆಯುತಿದೆ ॥ ೨॥

ಬಸವ ಕ್ರಾಂತಿ ದಿವ್ಯ ದಿನದಿ ನಡೆಯುತಿದೆ ಶರಣ ಮೇಳ
ನಾಡ ಮೂಲೆ ಮೂಲೆಯಿಂದ ಸೇರುತಿದೆ ಶರಣ ಬಳಗ
ನಮ್ಮ ನಿಮ್ಮ ಬಾಳಿನ ಬನ್ನವನ್ನು ಕಳೆಯುವ
ವಚನ ಮೇಳ, ತತ್ತ್ವ ಮೇಳ, ಕಮ್ಮನೆಯ ಶರಣ ಮೇಳ ॥ ೩॥

ತಮಿಳುನಾಡು, ತೆಲುಗುನಾಡು, ಮಹಾರಾಷ್ಟ್ರ, ಹಿಂದಿನಾಡು
ಕರುನಾಡಿನ ಮೂಲೆಯಿಂದ ಬರುತಿಹರು ಸಂಗಮಕೆ
ಬಸವ ಲತೆಯು ಅರಳಿಸಿರುವ ಶರಣ ಸುಮಗಳಿವರ ನೋಡಿ
ಮಾಲೆ ಮಾಡಿ ಇಟ್ಟಿದೆ ಸಂಗಮದ ಶರಣ ಮೇಳ ॥ ೪॥

ರಚನೆ :- ಜಗದ್ಗುರು ಮಾತೆ ಮಹಾದೇವಿ

ಕಪಿಲ ಸಿದ್ಧ ಮಲ್ಲಿಕಾರ್ಜುನಾ
ನಿಮ್ಮ ಸಂಗನ ಬಸವಣ್ಣ ಬಂದು
ಮರ್ತ್ಯಲೋಕದಲ್ಲಿ ಮಹಾಮನೆಯ ಕಟ್ಟಿದಡೆ
ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತು

-ಶಿವಯೋಗಿ ಸಿದ್ಧರಾಮೇಶ್ವರ

ಲಿಂ|| ಬಸವ ಧರ್ಮದ ಮಹಾಜಗದ್ಗುರು ಪೀಠಾಧೀಶ ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳಿಗೆ ನಮನ

ಜೈ ಗುರುವೆ ಜೈ ಗುರುವೆ
ಲಿಂಗಾನಂದ ಗುರು ಜೈ ಜೈ ||ಪಲ್ಲವಿ||

ಹಾಡಿದೆವು ಅಂದು ಸಂತೋಷದಿಂದ
ಶರಣರ ಬಳಗಕ್ಕೆ -ಪರಮಾನಂದ
ಬಸವ ಧರ್ಮದ ಪೀಠ ಏರುತ್ತಲಂದು
ತಂದಿರೆಲ್ಲರಿಗೂ ಚಂದದಾನಂದ || ಜೈ ಗುರುವೆ ||

ಶರಣೆ ಕಲ್ಲಮ್ಮ-ಮಲ್ಲಪ್ಪರ ಒಡಲಲ್ಲಿ
ಜನಿಸಿದಿರಿ ನೀವು ಮಣಿಗವಳ್ಳಿಯಲಿ
ಸಂಗಮೇಶನೆಂಬ ನಾಮವ ತಳೆದು
ಬೆಳೆದಿರಿ ಬಸವನ ಚಿತ್ಕಿರಣವಾಗಿ || ೧||

ಬಲ್ಲಿದ ಬಸವನ ಹೆಸರನು ಉಳಿಸಲು
ವಚನ ವಾಙ್ಮಯದ ಸೌರಭವ ಹರಡಲು
ಸಂಚರಿಸಿ ನೀವು ದಿವ್ಯ ಜಂಗಮವಾಗಿ
ಶರಣ ಧರ್ಮದ ಮಹಿಮೆ ಬೀರಿದ ಯೋಗಿ || ೨||

ಅನುಭವ ಮಂಟಪಕೆ ಅಕ್ಕ ಮಹಾದೇವಿ
ಬಸವ ಮಂಟಪಕಿಂದು ಮಾತೆ ಮಹಾದೇವಿ
ಮೂಡಿ ನಿಂತಿತು ಆ ಬಸವ ಕಲ್ಯಾಣ
ಕೂಡಲ ಸಂಗಮವಾಯ್ತು ನವ ಕಲ್ಯಾಣ || ೩||

ಬಸವ ಮಹಾಮನೆಯ ಕಟ್ಟಿದಿರಿ ತಾವು
ಬಸವ ಭಕ್ತರಿಗೆಲ್ಲ ದೊರಕಿತು ಠಾವು
ನಾವೆಲ್ಲ ಕೂಡಿ ಜಯಘೋಷ ಮಾಡಿ
ನಲಿವೆವು ತಮ್ಮನ್ನು ಹಾಡಿ ಕೊಂಡಾಡಿ || ೪||

- ಅನ್ನಪೂರ್ಣ ಮನ್ನಾಪುರ
ಧಾರವಾಡ.

||ಓಂ ಶ್ರೀ ಗುರು ಬಸವಲಿಂಗಾಯ ನಮಃ||

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಬಸವ ಧರ್ಮ ಸಂಸ್ಥಾಪನಾ ದಿನದ
ಅಂಗವಾಗಿ ಹತ್ತನೆಯ

ಶರಣ ಮೇಳ

೧೯೯೭ನೆಯ ಜನವರಿ ೧೨,೧೩,೧೪ ಮತ್ತು ೧೫ರಂದು

ಶರಣ ಬಂಧುಗಳೇ,

ಮಹಾಮಾನವತಾವಾದಿ ಮಂತ್ರಪುರುಷ, ವಿಶ್ವವಿಭೂತಿ ಬಸವಣ್ಣನವರ ತತ್ವಗಳಲ್ಲಿ ಶ್ರದ್ಧೆ-ವಿಶ್ವಾಸವಿರುವ ಬಸವ ಭಕ್ತರು, ಬಸವ ತತ್ವಾಭಿಮಾನಿಗಳು, ಬಸವ ಧರ್ಮೀಯರು, ಲಿಂಗವಂತರು ಎಲ್ಲರೂ ವರ್ಷಕ್ಕೊಮ್ಮೆಯಾದರೂ ಒಂದು ಸ್ಥಾನದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಪರಸ್ಪರರಲ್ಲಿ ಸಮಾನತ್ವ, ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಲಿಂಗೈಕ್ಯ ಕ್ಷೇತ್ರ ಕೂಡಲಸಂಗಮದಲ್ಲಿ ೧೯೮೮ನೆಯ ಇಸವಿ ಜನವರಿ ೧೪,೧೫,೧೬ ರಂದು ಪ್ರಥಮ ಚಾರಿತ್ರಿಕ ಶರಣ ಮೇಳವು ಜರುಗಿತಷ್ಟೇ. ಮೊಟ್ಟ ಮೊದಲನೆಯ ಈ ಐತಿಹಾಸಿಕ ಬೃಹತ್ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನಸಮೂಹವನ್ನು ಆಕರ್ಷಿಸಿತು. ತುಂಬಿ ನಿಂತ ಬಸವ ಸಾಗರದ ಅಲೆಗಳೊಡನೆ ಸ್ಪರ್ಧಿಸುವಂತೆ ಜನಸಾಗರದ ಸಮೂಹವು ಸಮಾವೇಶವಾಗಿ ಬಸವೋದ್ಯಾನದಲ್ಲಿ ನಿರ್ಮಿತವಾದ ಬಸವ ಮಂಟಪದಲ್ಲಿ ಸಮುದಾಯ ಪ್ರಾರ್ಥನೆಯನ್ನು ಮಾಡಿತು.

ಇಂತಹ ಶರಣ ಮೇಳವು ಪ್ರತಿವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಹತ್ತನೆಯ ಶರಣ ಮೇಳವು ೧೯೯೭ನೇ ಇಸವಿಯ ಜನವರಿ ೧೨,೧೩,೧೪ ಮತ್ತು ೧೫ ರಂದು ಏರ್ಪಾಟಾಗಲಿದೆ. ಹಲವಾರು ಭಕ್ತಿಪೂರ್ಣ ಕಾರ್ಯಕ್ರಮಗಳು, ಜ್ಞಾನಾನುಭವಗೋಷ್ಠಿ, ಪ್ರತಿಜ್ಞಾ ಸ್ವೀಕಾರ, ಉಪನ್ಯಾಸ, ಆಶೀರ್ವಚನಗಳು ನಡೆಯುವುವು. ಮುಸ್ಲೀಮ್ ಧರ್ಮೀಯರಿಗೆ ಮೆಕ್ಕಾ ಧರ್ಮಕ್ಷೇತ್ರವಾದಂತೆ, ಸಿಖ್ಖರಿಗೆ ಅಮೃತಸರವು ಪವಿತ್ರ ಕ್ಷೇತ್ರವಾದಂತೆ, ಬಸವ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲಸಂಗಮವೇ ಧರ್ಮಕ್ಷೇತ್ರ. ಇಂತಹ ಪವಿತ್ರ ತಾಣದಲ್ಲಿ ಸಹೋದರ ಭಾವನೆಯಿಂದ ಪೂಜಿಸಲು, ಪ್ರಾರ್ಥಿಸಲು, ಗಣಲಿಂಗದ ದರ್ಶನ ಪಡೆಯಲು ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರವೆಮಗೆ ಪ್ರಾಣ ಜೀವಾಳ

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲ ಸಂಗಮ- ೫೮೭ ೧೧೫
ತಾ-ಹುನಗುಂದ, ಜಿಲ್ಲೆ-ಬಿಜಾಪುರ
ದೂರವಾಣಿ STD 08351-74-838

ಬೆಂಗಳೂರು ವಿಳಾಸ:
ಬಸವ ಮಂಟಪ, ೨೦೩೫,
೨ನೇ ಬ್ಲಾಕ್, ಕಾರ್ಡ್ ರಸ್ತೆ,
ರಾಜಾಜಿನಗರ, ಬೆಂಗಳೂರು-೫೬೦೦೧೦
ದೂರವಾಣಿ : ೩೩೨೫೪೩೩೫

ಆಮಂತ್ರಣ ಪತ್ರಿಕೆ ಇರದು; ವಿಶೇಷ ಆಹ್ವಾನ ಇರದು
ಎಲ್ಲರಿಗೂ ಶರಣ ಮೇಳಕ್ಕೆ ಸ್ಥಿರಾಹ್ವಾನ

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಶರಣ ಮೇಳವು ನಡೆಯುತ್ತಲಿದೆಯಷ್ಟೆ. ೧೯೮೮ರಲ್ಲಿ ಆರಂಭವಾದ ಈ ವಾರ್ಷಿಕ ಗಣ ಸಮಾವೇಶವು ೧೯೯೭ಕ್ಕೆ ೧೦ನೆಯ ಗಣ ಸಮಾವೇಶವಾಗುತ್ತಲಿದೆ. ಮೊಟ್ಟ ಮೊದಲ ಶರಣ ಮೇಳದಿಂದಲೂ ಕೆಲವು ಮಠಾಧೀಶರೂ ಮತ್ತು ಪುರೋಹಿತಶಾಹಿ ಜನರು ಅಡೆತಡೆಗಳನ್ನು ಒಡ್ಡುತ್ತ ಬಂದರೂ ಶರಣ ಬಂಧುಗಳ ಸಂಕಲ್ಪ, ಸೇವೆ, ಛಲ, ನಿಷ್ಠೆಯಿಂದ ಶರಣ ಮೇಳವು ವರ್ಷದಿಂದ ವರ್ಷಕ್ಕೆ ನಿರ್ವಿಘ್ನವಾಗಿ ವಿಸ್ತಾರಗೊಳ್ಳುತ್ತ ಸಾಗಿ ಬರುತ್ತಲಿದೆ.

ಮೊದಲಿನಿಂದಲೂ ನನ್ನದೊಂದು ಸಂಕಲ್ಪವಿದೆ. ಶರಣ ಮೇಳವು ಕೇವಲ ಭಾಷಣಗಳ ಸರಮಾಲೆಯಾಗಬಾರದು, ಔಪಚಾರಿಕ ಸನ್ಮಾನ-ಸತ್ಕಾರ, ಪರಸ್ಪರ ಹೊಗಳಿಕೆಗಳ ಆಡುಂಬೊಲವಾಗಬಾರದು. ಲೌಕಿಕತೆಯ ಕೃತಕ ಆವರಣ ಹೊದೆಯದೆ ದಾರ್ಶನಿಕ ಚೌಕಟ್ಟಿನಲ್ಲಿ ರೂಪುಗೊಳ್ಳಬೇಕು ಎಂಬುದೇ ಆ ಸಂಕಲ್ಪ. ಮುಸ್ಲಿಂ ಧರ್ಮಾನುಯಾಯಿಗಳು ಪವಿತ್ರ 'ಹಜ್' ಯಾತ್ರೆ ಕೈಗೊಳ್ಳುವರು. ಅವರು ಕರ್ತನ ಕರೆಗೆ ಓಗೊಟ್ಟು, ಪ್ರವಾದಿ ಮೊಹಮ್ಮದರ ಕರೆಗೆ ಓಗೊಟ್ಟು ಹೋಗುವರೇ ವಿನಾ ಅಲ್ಲಿ ಯಾವುದಾದರೂ ಸ್ಥಾನಮಾನ ಸಿಗುವುದೆಂದಲ್ಲ. ಮುಸ್ಲಿಮರ ಕರ್ತವ್ಯವಿದೆಂದು ಅವರು ಹೋಗುವರೇ ವಿನಾ ಪ್ರತಿಫಲವಾಗಿ ಏನಾದರೂ ಲಾಭ ದೊರೆಯುವುದೆಂದಲ್ಲ. ಸಿಖ್ಖರ ಖಾಲ್ಸಾವಾದರೂ ಅಷ್ಟೆ. ಅದೇ ರೀತಿ ಶರಣ ಮೇಳವು ಶುದ್ಧ ಭಕ್ತಿಯಿಂದ, ಕರ್ತವ್ಯ ಪ್ರಜ್ಞೆಯಿಂದ ಬರುವ ಜನರ ಸಮಾವೇಶವಾಗಬೇಕು; ಇದೊಂದು ಪವಿತ್ರ ಧಾರ್ಮಿಕ ವಿಧಿಯಾಗಬೇಕು. ಜ್ಞಾನ ಪ್ರಧಾನ, ಭಕ್ತಿ ಪ್ರಧಾನವಾಗಿ ಸಾಗಬೇಕು.

ಗುರು(ಧರ್ಮಕರ್ತ) ಬಸವಣ್ಣ, ಲಿಂಗ(ಸೃಷ್ಟಿಕರ್ತ)ದೇವ, ಜಂಗಮ(ಶರಣರು)- ಇವರ ಸ್ತುತಿಗೆ ಶರಣಮೇಳದ ಕಾರ್ಯಕ್ರಮ ಮೀಸಲಾಗಬೇಕು.

ಇದೆಲ್ಲ ನಮ್ಮ ಜನರಿಗೆ ಹೊಸದಿದ್ದು ಅವರುಗಳು ಒಂದು ವಿಶಿಷ್ಟ ರೀತಿಯ ಸಭಾ ಶಿಷ್ಟಾಚಾರಕ್ಕೆ ಹೊಂದಿಕೊಂಡುದರಿಂದ ಒಮ್ಮೆಗೇ ನಮ್ಮ ಅನಿಸಿಕೆಗಳನ್ನು ಅನುಷ್ಠಾನಕ್ಕೆ ತರುವುದು ಸುಲಭಸಾಧ್ಯವಲ್ಲ ಎಂಬಂತೆ, ಕೆಲವರು ನಮ್ಮ ಆತ್ಮೀಯರು, "ಇನ್ನಷ್ಟು ಕಾಲ ಸಾಗಲಿ" ಎನ್ನುತ್ತಿದ್ದರು. ಇದೀಗ ಕಾಲವು ಕೂಡಿ ಬಂದಿದೆ.

ಯಾರ್‍ಯಾರು....

೧. ಸೃಷ್ಟಿಕರ್ತನು ಒಬ್ಬನು, ಅವನು ಪರಮೋನ್ನತ ಶಕ್ತಿಯು.

೨. ಆ ಸೃಷ್ಟಿಕರ್ತನು ಲೋಕೋದ್ಧಾರಕ್ಕಾಗಿ ಕಳಿಸಿದ ಪ್ರತಿನಿಧಿ ವಿಶ್ವಗುರು ಬಸವಣ್ಣನವರು.

೩. ನಿರಾಕಾರ ದೇವರನ್ನು ಅರ್ಚಿಸಲೆಂದು ವಿಶ್ವಗುರು ಬಸವಣ್ಣನವರು

ಗೋಲಾಕಾರದ ಇಷ್ಟಲಿಂಗವನ್ನು ಕೊಟ್ಟಿರುವರು. ಅದರ ಸಂಕೇತವಾಗಿ ಪ್ರತಿಷ್ಠಾಪಿಸಲ್ಪಟ್ಟ ಗಣಲಿಂಗವು ಬಸವ (ಲಿಂಗಾಯತ) ಧರ್ಮೀಯರನ್ನು ಒಟ್ಟುಗೂಡಿಸುವ ಸಾಕ್ಷಿ.

೪. ಆ ಇಷ್ಟಲಿಂಗವೆಂಬ ಗಣಲಾಂಛನವನ್ನು ಧರಿಸಿ ೧೨ನೆಯ ಶತಮಾನದಿಂದ ಇಲ್ಲಿಯವರೆಗೆ ಸಾಗಿ ಬಂದಿರುವ ಶರಣರ ಪರಂಪರೆಯ ವಾರೀಸುದಾರರು ನಾವು.

೫. ವಿಶ್ವಗುರು ಬಸವಣ್ಣನವರು ಮತ್ತು ಅವರ ಸಮಕಾಲೀನ ಶರಣರು ಕೊಟ್ಟ ವಚನ ಸಾಹಿತ್ಯವೇ ಧರ್ಮಶಾಸ್ತ್ರ.


೬. ಧರ್ಮಪಿತ ಬಸವಣ್ಣನವರು ಬಯಲಾದ ಕೂಡಲ ಸಂಗಮವೇ ಧರ್ಮಕ್ಷೇತ್ರ;

ಎಂದು ನಂಬುವರೋ ಅವರುಗಳಿಗೆ ಶರಣ ಮೇಳಕ್ಕೆ ಸ್ಥಿರಾಹ್ವಾನವಿದೆ. ಅವರು ಶರಣ ಮೇಳಕ್ಕೆ ಬಂದು ಗಣಲಿಂಗದ ದಿವ್ಯದರ್ಶನವನ್ನು ಪಡೆದು ಧಾರ್ಮಿಕ ಸಹೋದರತ್ವವನ್ನು ಪ್ರದರ್ಶಿಸಿ ತಾವು ಬಸವ (ಲಿಂಗಾಯತ) ಧರ್ಮಾನುಯಾಯಿಗಳೆಂದು ಸ್ಥಿರೀಕರಿಸಬೇಕು. ಪ್ರತಿವರ್ಷ ಜನವರಿ ೧೪ರಂದು ಗಣಲಿಂಗದ ದರ್ಶನ ಪಡೆದು, ಪಥ ಸಂಚಲನದಲ್ಲಿ ಭಾಗವಹಿಸಿ, ಸಮುದಾಯ ಪ್ರಾರ್ಥನೆ-ಶರಣ ಸಂಗಮದಲ್ಲಿ ಪಾಲ್ಗೊಂಡು ಅಂದು ಸಂಜೆ ಬಸವ ಧರ್ಮದ ಮಹಾಜಗದ್ಗುರು ಪೀಠಾಧೀಶರು ಮಾಡಿತೋರಿಸುವ ಸಾಮೂಹಿಕ ಇಷ್ಟಲಿಂಗಾರ್ಚನೆಯಲ್ಲಿ ಭಾಗವಹಿಸುವುದು ಶರಣ-ಮೇಳದ ಯಾತ್ರಿಯ ಪವಿತ್ರ ಕರ್ತವ್ಯವಾಗಿರುತ್ತದೆ.

ನಿಷ್ಠಾವಂತ ಅನುಯಾಯಿಗಳ ಶ್ರದ್ಧೆ-ನಿಷ್ಠೆಗಳ ಬಲದ ಮೇಲೆಯೇ ಈ ಶರಣಮೇಳವು ವೃದ್ಧಿಯಾಗುತ್ತ, ವಿಸ್ತಾರಗೊಳ್ಳುತ್ತ ಹೋಗಬೇಕು.

ಶರಣ ಬಂಧುಗಳಿಗೆ ಸದಾಕಾಲದ ಸ್ಥಿರಾಹ್ವಾನವನ್ನು ಸೃಷ್ಟಿಕರ್ತ ಪರಮಾತ್ಮ ಮತ್ತು ಧರ್ಮಗುರು ಬಸವಣ್ಣನವರ ಆಜ್ಞಾನುಸಾರವಾಗಿ ಈ ಮೂಲಕ ನೀಡುತ್ತಿದ್ದೇವೆ.

ಪೂಜ್ಯಶ್ರೀಮನ್ ನಿರಂಜನ
ಮಹಾಜಗದ್ಗುರು ಮಾತೆ ಮಹಾದೇವಿ



ಗಣಲಿಂಗ

ಕೂಡಲ ಸಂಗಮದಲ್ಲಿ
ಮಹಾಮನೆ ಮಹಾಮಠದ
ಲಿಂಗದೇವ ಮಂಟಪದಲ್ಲಿ
ಸ್ಥಾಪನೆಗೊಂಡಿರುವ ಗಣಲಿಂಗ.
ಗಣಲಿಂಗ ದರ್ಶನ
ಬಸವ ಧರ್ಮೀಯರ
ಪವಿತ್ರ ಕರ್ತವ್ಯ

ದೈವೀಪ್ರೇರಣೆಯ ವಾಕ್ಯಗಳು

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರ
ದಿವ್ಯ ಸನ್ನಿಧಿಗೆ ಪಾದ ಪ್ರಣಾಮಗಳು

ನವಂಬರ್ ೧೯೯೬ರ ಕಲ್ಯಾಣ ಕಿರಣ ಪತ್ರಿಕೆ ತಲುಪಿದೆ. ಓದಿ ತುಂಬಾ ಆನಂದವಾಯಿತು. ಸದರಿ ಪತ್ರಿಕೆಯಲ್ಲಿ ''ಶರಣ ಬಂಧುಗಳ ಗಮನಕ್ಕೆ'' ಶೀರ್ಷಿಕೆಯಡಿಯಲ್ಲಿ ಭಕ್ತ ಓದುಗರನ್ನು ಕುರಿತು, 'ಪ್ರತಿಜ್ಞಾಗೀತೆ' 'ಕರ್ತನ ಸೃಷ್ಟಿ' ಹಾಗೂ 'ಹೇ ಶರಣ ಬಂಧುಗಳೇ' ಎಂಬ ಧ್ವಜಾರೋಹಣಗೀತೆ - ಮೂರು ಗೀತೆಗಳು ನಿಜವಾಗಿಯೂ ಪ್ರಸಿದ್ಧ ಗೀತೆಗಳೇ.

''ತತ್ತ್ವನಿಷ್ಠರು'' ಎಂಬ ಪದವನ್ನು ತೆಗೆದು ಹಾಕದೆ ಅದೇ ಪದವನ್ನು ಇಟ್ಟೇ, ಆ ಪದ್ಯ ಇದ್ದಂತೆಯೇ ಮುಂದುವರಿಸಬೇಕು ಎಂದು ವಿನಂತಿಸುವೆ.

''ಬಸವ ಧರ್ಮ ಪೀಠದ ಆದೇಶದಂತೆ ನಡೆವೆವು'' ಈ ವಾಕ್ಯವನ್ನು ಇದ್ದಕ್ಕಿದ್ದಂತೆಯೆ ಮುಂದುವರಿಸಬೇಕಾಗಿ ವಿನಂತಿ.

ಬಸವ ದಳದ ಸದಸ್ಯರಾದ ನಾವು ಬಸವಣ್ಣನವರು ಹುಟ್ಟು ಹಾಕಿದ 'ಲಿಂಗವಂತ' ಧರ್ಮದ ಕಟ್ಟಾ ಅನುಯಾಯಿಗಳು. ನಿಮ್ಮ ಜೀವನದುದ್ದಕ್ಕೂ ಬಸವ ತತ್ತ್ವಗಳನ್ನು ಪ್ರಚಾರ ಮಾಡುತ್ತ ಆಚಾರಗೊಳಿಸುತ್ತ ಅದೇ ನಿಮ್ಮುಸಿರಾಗಿದ್ದಾಗ ಆ ಬಸವ ಪೀಠ ಅಲಂಕರಿಸಿದ ನಿಮ್ಮ ಮೇಲೆ ಸಂಪೂರ್ಣ ವಿಶ್ವಾಸವಿಟ್ಟು ನಂಬಿ ದುಡಿಯುವುದೇ ನಮ್ಮ ಆದ್ಯ ಕರ್ತವ್ಯವಾಗಬೇಕು. ನಿಮ್ಮ ಬೋಧನೆ-ಆದೇಶ (Commandment)ಕ್ಕೆ ಅಧೀನರಾಗಿ ವರ್ತಿಸುವುದು ನಮ್ಮೆಲ್ಲರ ಧ್ಯೇಯವಾಗಿರಬೇಕು; ಕಾರಣ ''ಬಸವ ಧರ್ಮ ಪೀಠದ ಆದೇಶದಂತೆ ನಡೆವೆವು'' ಎಂಬ ವಾಕ್ಯವೂ ಇದ್ದಂತೆಯೇ ಮುಂದುವರಿಯಬೇಕು. ಇದು ನನ್ನ ಸ್ಪಷ್ಟ ಅನಿಸಿಕೆ.

ಇಲ್ಲಿ ನನಗೆ, ವಿದ್ಯಾರ್ಥಿ ಇದ್ದಾಗ ಓದಿದ ಒಂದು ಚುಟುಕು ನೆನಪಿಗೆ ಬರುತ್ತಿದೆ. ಕೆಲವು ಸಂಸ್ಕೃತ ಪಂಡಿತರು ಕಾಳಿದಾಸನ ನಾಟಕಗಳಲ್ಲಿ ಕೆಲವೊಂದು ಸನ್ನಿವೇಶಗಳಲ್ಲಿ ಕೆಲವು ಪಾತ್ರಗಳ ಮಾತುಗಳನ್ನು ಬದಲಿಸಿದರೆ ಹೆಚ್ಚಿನ ಮೆರುಗು, ಅರ್ಥವತ್ತತೆ-ಸ್ಪಷ್ಟತೆ ಬರುತ್ತದೆಂದು ವಾದಿಸಿದಾಗ ಮತ್ತೆ ಕೆಲವು ಪಂಡಿತರು-ವಿದ್ವಾಂಸರು ಅವರ (ಕಾಳಿದಾಸರ) ವಾಕ್ಯಗಳಲ್ಲಿ ಯಾವುದೇ ಪದ ವಾಕ್ಯಗಳನ್ನು ಬದಲಾಯಿಸಿದರೆ ಮೂಲ ಸನ್ನಿವೇಶಕ್ಕೆ ಹೊಂದಿಕೊಳ್ಳಲಾರವು ಎಂಬ ತಿಳುವಳಿಕೆಗೆ-ನಿಲುವಿಗೆ ಬಂದು, ಎಲ್ಲ ವಿದ್ವಾಂಸರು ಕಾಳಿದಾಸರ ಶಬ್ದ ಜೋಡನೆ ವಾಕ್ಯರಚನೆಗಳು ದೈವೀಪ್ರೇರಣೆಯಿಂದೊಡಗೂಡಿದಂತಿವೆ ಎಂದು ಒಪ್ಪಿಕೊಂಡಿದ್ದರು. ಏಕಾಭಿಪ್ರಾಯಪಟ್ಟಿದ್ದರು. ಅದೇ ತರಹ ತಮ್ಮ ಕೃತಿಗಳು! ಅವು ದೈವೀಪ್ರೇರಣೆಯಿಂದೊಡಗೂಡಿವೆ. ಇದು ನನ್ನ ಅನಿಸಿಕೆ.

ಇಂತೀ ನಮಸ್ಕಾರಗಳು.

ಬೈಲಹೊಂಗಲ
೫-೧೨-೧೯೯೬

ತಮ್ಮ ನಿಷ್ಠಾವಂತ ಸೇವಾಕಾಂಕ್ಷಿ
ಮಲ್ಲಿಕಾರ್ಜುನ ಮ. ಕಡಬಿ.
ಬಸವ ನಗರ, ಮುರಗೋಡ ರೋಡ
ಪೋ-ತಾ: ಬೈಲಗೊಂಗಲ. ಜಿ-ಬೆಳಗಾಂವ

ಶರಣ ಮೇಳ
ಯಾರಿಂದ, ಯಾರಿಗಾಗಿ, ಯಾರದ್ದು?

1. ಕಾಗೆಯೊಂದಗುಳ ಕಂಡಡೆ
ಕರೆಯದೆ ತನ್ನ ಬಳಗವನು?
ಕೋಳಿ ಒಂದು ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ! - ಬ. ವ. ದೀಪ್ತಿ ೪೩೫

2. ಕರ್ಮವೆಂಬ ಅಂಕದೊಡನೆ ತೊಡರಿದೆ;
ಬಿನ್ನಪವ ಅವಧಾರು! ನಿಮ್ಮಾಳಿನ ಭಾಷೆಯ
ಕಡೆಗಳಕ್ಕೆ ನೂಂಕುವೆ, ಕೆಡಹುವೆನಂಕವ
ನಡುವೆ ಓಸರಿಸಿದೊಡೆ ನಿಮ್ಮಾಳಲ್ಲ!
ಶಿವ ಶರಣೆಂಬ ದಂಡೆಯ ಹೂಡಿ
ಗಣ ಮೇಳಾಪವೆಂಬ ಅಲಗಿನಿಂದಿರಿವೆ, ಲಿಂಗದೇವಾ! - ಬ. ವ. ದೀಪ್ತಿ ೬೯೭

3. ಶ್ರೀ ವಿಭೂತಿಯ ಪೂಸದವರ
ಶ್ರೀ ರುದ್ರಾಕ್ಷಿಯ ಧರಿಸದವರ
ನಿತ್ಯ ಲಿಂಗಾರ್ಚನೆಯ ಮಾಡದವರ
ಜಂಗಮವೇ ಲಿಂಗವೆಂದರಿಯದವರ
ಸದ್ಭಕ್ತರ ಸಂಗದಲ್ಲಿ ಇರದವರ
ಎನಗೊಮ್ಮೆ ತೋರದಿರಯ್ಯ ಲಿಂಗದೇವಾ
ಸೆರಗೊಡ್ಡಿ ಬೇಡುವೆ! - ಬ. ವ. ದೀಪ್ತಿ ೪೫೨

ಶರಣ ಬಂಧುಗಳೇ,

ಗಣ ಧರ್ಮವನ್ನು ಬೋಧೆ ಮಾಡಿದ ಧರ್ಮಪಿತ ಬಸವಣ್ಣನವರು ಧರ್ಮದ ಗುರಿ ಕೇವಲ ಸಂಸ್ಕಾರವೊಂದೇ ಅಲ್ಲ ಸಮಾಜ ನಿರ್ಮಾಣ, ಸಮಾಜ ಸಂಘಟನೆ ಕೂಡ ಎಂದು ಮನಗಂಡು ಭಕ್ತಿಪಕ್ಷ, ಅದರಲ್ಲಿ ನಡೆಯುವ ಗಣಮೇಳಾಪಕ್ಕೆ ಬಹುಮುಖ್ಯ ಸ್ಥಾನ ಕೊಟ್ಟರು. ಅಷ್ಟಾವರಣ ಧಾರಣೆಯಷ್ಟೇ ಶರಣರ ಸಂಗದಲ್ಲಿ ಒಡನಾಡುವುದು ಅತ್ಯಂತ ಅನಿವಾರ್ಯ ಅಗತ್ಯ ಎಂದು ಘೋಷಿಸಿದರು.

ಧರ್ಮಕರ್ತ ಬಸವತಂದೆಯವರ ಅಂತರಂಗದ ಆಶಯ ಅವರ ಆತ್ಮಕಥೆ, ದಿನಚರಿಯಂತೆ ಬರೆಯಲ್ಪಟ್ಟ ವಚನಗಳ ಮೂಲಕ ಅಭಿವ್ಯಕ್ತವಾಗಿರುವ ಆದೇಶವನ್ನು ಗ್ರಹಿಸಿಕೊಳ್ಳಲು ಆಗದೆ ೮೦೦ ವರ್ಷ ಅಂಧಕಾರದಲ್ಲಿ ಇದ್ದುದಾಗಿದೆ. ಆ ಕತ್ತಲೆಯ

ಕೂಪದಿಂದ ಹೊರಬಂದು ಈಗ ತಾನೆ ಕಣ್ಣು ತೆರೆಯುತ್ತಿದ್ದೇವೆ. ಆದ್ದರಿಂದ ದೇವನಿಗೆ ಶರಣಾಗಿ ಬಸವ ಗುರುವಿನ ಕಾರಣಿಕತ್ವದಲ್ಲಿ ನಂಬಿಕೆ ಇಟ್ಟ ಎಲ್ಲರೂ ಇದೀಗ ಭಕ್ತಿಪಕ್ಷವಾಗಿ ಒಟ್ಟಾಗಬೇಕಾಗಿದೆ; ಗಣ ಮೇಳಾಪವನ್ನು ನಡೆಸಬೇಕಾಗಿದೆ. ಇದೇ ಉದ್ದೇಶದಿಂದ ಹುಟ್ಟಿದ್ದು ಶರಣ ಮೇಳ .

ಶರಣ ಮೇಳ - ನಿಮ್ಮ ಮೇಳ

ಇದು ಶರಣರ ಮೇಳ, ಶರಣರಿಂದ ಶರಣರಿಗಾಗಿ ಶರಣರೇ ನಡೆಸುವ ಧಾರ್ಮಿಕ ಸಮಾವೇಶ. ಆದ್ದರಿಂದ ಇದರಲ್ಲಿ ನಿಮ್ಮೆಲ್ಲರ ಪಾಲುದಾರಿಕೆ, ಭಾಗೀದಾರತ್ವವಿದೆ. ಶರಣ ಮೇಳ ಜಾತ್ರೆಯಲ್ಲ, ಸಂತೆಯಲ್ಲ, ಜನರು ದುಡು ದುಡು ಬಂದು ದಡದಡ ಓಡುವ ಜಾತ್ರೆಯಲ್ಲ, ಬಸವ ಮಾರ್ಗಕ್ಕೆ ವ್ಯಕ್ತಿಯನ್ನು ಅಣಿಗೊಳಿಸುವ ಕಾರ್ಯಾಗಾರ. ಭಾರತೀಯರು ಮುಖ್ಯವಾಗಿ ಹಿಂದುಗಳು ಉತ್ಸವ ಪ್ರಿಯರು, ತತ್ತ್ವಪ್ರಿಯರಲ್ಲ. ಗುಡಿ-ಗುಂಡಾರ, ತೀರ್ಥಯಾತ್ರೆ, ಪ್ರವಾಸ ಕೈಗೊಳ್ಳುವರಾದರೂ ಹೋದಾಗ ಹೇಗಿರುವರೋ ಬರುವಾಗಲೂ ಹಾಗೆಯೇ ಇರುವರು. ಶರಣಮೇಳ ಅಂಥ ಒಂದು ಯಾಂತ್ರಿಕ ಸಮಾವೇಶವಾಗಬಾರದು. 'ಬೆಳೆಯುವ ಭೂಮಿಯಲ್ಲಿರುವ ಪ್ರಳಯಾಂತಕ ಕಸವನ್ನು ತೆಗೆದು ಸಸಿಯು ಸುಳಿದೆಗೆದು ಬೆಳೆವಂತೆ ಮಾಡು' ಎಂದು ಧರ್ಮಕರ್ತರು ದೇವರಲ್ಲಿ ಬೇಡುವಂತೆ, ಶರಣ ಮೇಳದ ನಾಲ್ಕು ದಿನದ ಕಮ್ಮಟದಲ್ಲಿ ಭಾಗಿಗಳಾದವರು ಹೊಸ ಚೈತನ್ಯ, ಹೊಸ ವ್ಯಕ್ತಿತ್ವ ಪಡೆದು ಹೋಗುವಂತಾಗಬೇಕು.

ಬಸವ ಕ್ರಾಂತಿಯ ದಿನದಿ ಸಂಗಮಕೆ ನೀ ಬಂದು
ಬಸವ ಸಾಗರದೊಳಗೆ ಮಿಂದು ಪುಳಕಿತನಾಗು

ಬಸವ ಕ್ರಾಂತಿ ದಿನ-ಅದು ಬಸವ ಧರ್ಮ ಸಂಸ್ಥಾಪನಾ ದಿನವೂ ಅಹುದು. ಅಗ್ರಹಾರದ ಪುರೋಹಿತಶಾಹಿ, ದೇವಾಲಯದ ದೇಗುಲಶಾಹಿ ಎರಡನ್ನೂ , ಅಂದು ಧರ್ಮಕರ್ತರು ಜನಸಾಮಾನ್ಯರನ್ನು, ಮುಗ್ಧ ಭಕ್ತರನ್ನು ದೇಗುಲದ ಗರ್ಭಗುಡಿಯೊಳಗೆ ಕರೆದೊಯ್ದು ಪ್ರತಿಭಟಿಸಿದ ದಿನ, ಕೇವಲ ಪ್ರತಿಭಟನೆಯಷ್ಟೇ ಆಗಿ ನೆಗೆಟಿವ್ ರಿಸಲ್ಟ್ ಉಳಿಯಲಿಲ್ಲ. ಅಂದೇ ಅವರಿಗೆ ಇಷ್ಟಲಿಂಗದ ಪರಿಕಲ್ಪನೆ ಉಂಟಾಗಿ, ದಾರ್ಶನಿಕ ದಿಗ್ಗಜ ಧರ್ಮಪಿತ ಬಸವಣ್ಣನವರು ಲೋಕಕ್ಕೆ ಹೊಸಧರ್ಮವನ್ನು ನೀಡಿದರು.

ಶರಣ ಬಂಧುಗಳೇ, ಆ ದಿನ ನಮ್ಮ ನಿಮ್ಮೆಲ್ಲರ ಜೀವನದ ಮಾತ್ರವಲ್ಲ; ಜಗತ್ತಿನ ಭಾಗ್ಯದ ಬಾಗಿಲು ತೆರೆದ ದಿನ. ಅಂದು **ಸಂಗನ ಬಸವರಸ ಶ್ರೀಗುರು ಬಸವಲಿಂಗ** ಆದ ದಿನ ಇದರ ಮಹತ್ವವನ್ನು ಅರಿಯುವ ದಾರ್ಶನಿಕ ದೃಷ್ಟಿಯನ್ನು ಬೆಳೆಸಿಕೊಳ್ಳಿ. ಹೀರಾದ ಗುಹೆಯಲ್ಲಿ ಮಹಮ್ಮದರಿಗೆ ಆದ ದಿವ್ಯ ಅನುಭವ ಅವರನ್ನು ಪ್ರವಾದಿಯನ್ನಾಗಿ ಮಾಡಿತು. ಜಾನ್ ದಿ ಬ್ಯಾಪ್ಟಿಸ್ಟ್‌ನಿಂದ ಜೋರ್ಡಾನ್ ನದಿಯ ನಂಡೆಯಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡ ನಜರೇತಿನ ಏಸುವನ್ನು ಜೀಸಸ್ ದಿ ಕ್ರೈಸ್ಟ್ ಎಂಬ ಪ್ರವಾದಿಯನ್ನಾಗಿ ಮಾಡಿತು. ಬೋಧಿವೃಕ್ಷದ ಅಡಿಯಲ್ಲಿ ಸಿದ್ಧಾರ್ಥ ಕಂಡ ಬೆಳಕು ಗೌತಮ ಬುದ್ಧನನ್ನಾಗಿ ಮಾಡಿತು. ಅದೇ ದೇವಕೃಪೆ, ದಿವ್ಯಾನುಭವ ಬಾಗೇವಾಡಿಯ ಬಸವರಸನನ್ನು ಕಾರಣಿಕ ವಿಭುವನ್ನಾಗಿ, ವಿಶ್ವವಿಭೂತಿಯನ್ನಾಗಿ ಮಾಡಿತು. ಆದ್ದರಿಂದ ಇದನ್ನು ಅರಿಯಿರಿ. ಆ ಸೃಷ್ಟಿಕರ್ತ ಲಿಂಗದೇವನನ್ನು ಧರ್ಮಕರ್ತ ಬಸವಣ್ಣನನ್ನು ನಾವು ನೀವು ಒಂದಾಗಿ ಕೃತಜ್ಞತೆಯಿಂದ ಕೊಂಡಾಡೋಣ ಬನ್ನಿರಿ.

ಶರಣ ಮೇಳಕೆ ಬಂದು ಶರಣರೊಡನೆ ಆಡಿ
ಬಸವ ಧರ್ಮದ ಕಿರಣ ನೀನಾಗಿ ಸಾಗು

ಬಸವ ಧರ್ಮದ ಕಿರಣಗಳಾಗಿ ಎಲ್ಲರೂ ಸಾಗಬೇಕು, ಪುನಃ ಆ ಬೆಳಕನ್ನು ಹಬ್ಬಿಸುತ್ತಾ ಹೋಗಬೇಕು. ಶರಣ ಮೇಳವು ಒಂದು ತತ್ತ್ವದ ಸೂತ್ರ ಹಿಡಿದು, ಎಲ್ಲರನ್ನೂ ಬಂಧಿಸುವ, ಬೆಸೆಯುವ ಸಾಧನವಾಗಬೇಕು. ಜಾತ್ರೆಯಲ್ಲಿ ಸೇರುವಂತೆ ಭಿನ್ನಭಿನ್ನ ವಿಚಾರದವರು ಒಂದು ಕಡೆ ಸೇರಿ, ಮತ್ತೆ ಚದುರಿದರೆ ಸಾಲದು. ನ್ಯೂಕ್ಲಿಯಸ್ಸಾಗಿ ಬಸವ ಗುರುವನ್ನು ಇರಿಸಿಕೊಂಡು, ಅದರ ಸುತ್ತಲೂ ಬೆಳೆಯುತ್ತಾ ಬಲಗೊಳ್ಳುತ್ತಾ ಹೋಗಬೇಕು. ಅದು ನಿಜವಾದ ಬೆಳವಣಿಗೆ, ಅದರಲ್ಲಿ ಸಂಘಟನೆ ಮತ್ತು ಸಂಘಟನೆಯ ಪ್ರತಿಫಲವಾಗಿ ಅದಮ್ಯ ಶಕ್ತಿ ಸಂಚಯವಾಗುತ್ತದೆ.

ಯಾರಿಗಾಗಿ ಬರಬೇಕು?

ಯಾವ ವ್ಯಕ್ತಿಗಾಗಿಯೂ ಅಲ್ಲ, ಒಂದು ತತ್ತ್ವಕ್ಕಾಗಿ ನೀವೆಲ್ಲರೂ ಬರಬೇಕು. ಅಪ್ಪ ಬಸವಣ್ಣನ ಕರುಳ ಕರೆಗೆ ಓಗೊಟ್ಟು ಬರಬೇಕು. ಶರಣರ ತ್ಯಾಗವನ್ನು ಸ್ಮರಿಸಿಕೊಂಡು ನಿಮ್ಮ ಹೃದಯ ಮಿಡಿದು ಬರಬೇಕು. ಇದು ಎಂದೋ ಆಗಬೇಕಿತ್ತು. ಈಗ ಆಗಿದೆ, ಆಗುತ್ತಿದೆ. ಆದಿ ಶರಣರು ಧರ್ಮಕರ್ತರು ಕಲ್ಯಾಣದಿಂದ ನಿರ್ಗಮಿಸಿದ 770 ವರ್ಷಗಳ ನಂತರ, 13 ಬಾರಿಗೆ ಆನಂದ ನಾಮ ಸಂವತ್ಸರ ಸರಿದು ಹೋದ ಮೇಲೆ ಬರುವುದಾಗಿ ಏಕೆ ಸಂಕಲ್ಪಿಸಿದರೋ ಗೊತ್ತಿಲ್ಲ. ಆ ಕಾಲವೀಗ ಕೂಡಿ ಬಂದಿದೆ. ಆದ್ದರಿಂದ ಬಸವಾದಿ ಪ್ರಮಥರ ಕರುಳಿನ ಕರೆ ನಿಮ್ಮನ್ನೀಗ ತಟ್ಟಿ, ಎಬ್ಬಿಸಿ ಕರೆತರಬೇಕಾಗಿದೆ. ಒಂದು ಆನೆ ಬಿದ್ದರೆ ಅದನ್ನು ಎತ್ತಲು ದೊಡ್ಡ ಕ್ರೇನ್ ಬೇಕು; ಅದೇ ಆನೆಯಲ್ಲಿ ಚೈತನ್ಯಶಕ್ತಿ ಇದ್ದರೆ ಎಷ್ಟು ಸುಲಭವಾಗಿ ಎದ್ದು ನಿಲ್ಲಬಲ್ಲದು, ಓಡಬಲ್ಲದು; ಹಾಗೆಯೇ ಬಸವ ತತ್ತ್ವಾನುಯಾಯಿಗಳ ಲಿಂಗಾಯತ ಸಮಾಜವು ಈಗ ರೋಗ ಗ್ರಸ್ತವಾಗಿ ಬಿದ್ದಿರುವ ಆನೆಯ ದೇಹದಂತಿದೆ. ಅದರೊಳಗೆ ಧಾರ್ಮಿಕ ಸತ್ವ, ತತ್ತ್ವನಿಷ್ಠೆ, ಧರ್ಮಗುರು ಶ್ರದ್ಧೆ ಮುಂತಾದವು ಮೈಗೂಡಿದರೆ ಒಂದು ಅಸೀಮ ಬಲದಿಂದ ಎದ್ದು ನಿಲ್ಲುವುದು. ಆದ್ದರಿಂದ ಧಾರ್ಮಿಕ ಶ್ರದ್ಧೆ-ತತ್ತ್ವನಿಷ್ಠೆ ನಿಮ್ಮಲ್ಲಿ ಪುಟಿದೇಳಬೇಕು.

ಮಲಮಕ್ಕಳು

ಇಂದು ಈ ದೇಶ ಬ್ರಹ್ಮದೇಶ; ಮೂಲತಃ ಪಶುಪತಿ ನಾಥ, ಶಿವನ ಸಂತತಿಯಾಗಿ ಈ ನೆಲದ ಮಕ್ಕಳು ಜನಿಸಿದರೂ ಕಾಲಾನಂತರ ಪರಕೀಯ ಸಂಸ್ಕೃತಿಯ ದಬ್ಬಾಳಿಕೆಗೆ ಒಳಗಾಗಿ ಅವರು ದುರ್ಬಲರಾದರು. ವೈದಿಕ ಧರ್ಮವು ಇನ್ನಿತರ ಎಲ್ಲ ಧರ್ಮ-ಸಂಸ್ಕೃತಿಗಳನ್ನು ತುಳಿದು ಆಳುತ್ತಿದೆ. ಪ್ರಸಾರ ಮಾಧ್ಯಮಗಳೆಲ್ಲ ಕೆಲವೇ ಕೆಲವರ ಹಿಡಿತದಲ್ಲಿವೆ. ಧ್ರುವ ಹಿರಿಯ ಹೆಂಡತಿಯ ಮಗ; ಅಪ್ಪನು ಕಿರಿಯ ಹೆಂಡತಿಯ ಕೈಗೊಂಬೆ. ಆಗ ಪ್ರೀತಿಯಿಂದ ಬಂದು ಅಪ್ಪನ ತೊಡೆಯ ಮೇಲೆ ಕುಳಿತ ಮಗನನ್ನು, ಮಲತಾಯಿ ಬಂದು ಕೆಳಗಿಳಿಸಿದಳು. ಅದೇ ರೀತಿ ಇಂದು ವೈದಿಕ ಸಂಸ್ಕೃತಿ ಎಂಬ ಮಲತಾಯಿ ವೈದಿಕೇತರ ಎಲ್ಲ ಸಂಸ್ಕೃತಿಗಳನ್ನು ಬದಿಗೆ ಒತ್ತುತ್ತಿದೆ. ಇದನ್ನರಿಯುವ ಬುದ್ಧಿಯಾಗಲೀ, ಪ್ರತಿಭಟಿಸುವ ತಾಕತ್ತಾಗಲಿ ಅಸಂಘಟಿತ ಸಮಾಜಗಳಿಗಿಲ್ಲ. ಭಾರತ ದೇಶವು ತನ್ನ ದೋಷವನ್ನು ಕಳೆದುಕೊಂಡು ಸರ್ವಾಂಗೀಣವಾಗಿ ಬೆಳೆಯಬೇಕೆಂದು ಶ್ರಮಿಸಿದ ಪ್ರಗತಿಪರ ಚಿಂತಕ, ಸಮಾಜ ಸುಧಾರಕ ಬಸವಣ್ಣನಂತಹವರ ಪ್ರಗತಿಪರ, ಪ್ರಖರ

ವಿಚಾರಗಳು ಬೆಳಕಿಗೆ ಬರಬಾರದು, ಪ್ರಚಾರಗೊಳ್ಳಬಾರದು ಎಂದು ಬಯಸುವ ಪುರೋಹಿತಶಾಹಿ ಬಹು ಶಕ್ತಿಶಾಲಿಯಾಗಿದೆ. ಶ್ರೀ ಸಾಮಾನ್ಯನ ಹಿತ ಸಂರಕ್ಷಿಸುವ, ಅವನ ಹಕ್ಕುಗಳಿಗಾಗಿ ಹೋರಾಡುವ ಬಸವ ಧರ್ಮಕ್ಕೆ ತನ್ನ ಹುಟ್ಟಿನಿಂದ ಈವರೆಗೂ ರಾಜಾಶ್ರಯ ಸಿಗಲಿಲ್ಲ. ಮಾಡಬಾರದ ಕುಕರ್ಮಗಳನ್ನು ಮಾಡಿದರೂ ರಾಜನನ್ನು ಭೂಲೋಕದ ದೇವತೆ ಎಂದು ಹೊಗಳುವ ಜನರಿಗೆ, ಅಂಥ ವಾದಸರಣಿಗೆ ಸಿಕ್ಕ ಪ್ರೋತ್ಸಾಹ ''ಜಂಗಮವೇ ಲಿಂಗ, ಅಂದರೆ ಮಾನವನ ಆತ್ಮವೇ ಮಹಾದೇವನ ಚೈತನ್ಯ'' ಎಂದು ಶ್ರೀಸಾಮಾನ್ಯನ ಉದ್ಧಾರಕ್ಕೆ ಟೊಂಕಕಟ್ಟಿ ನಿಂತ ಬಸವಣ್ಣನ ಧರ್ಮಕ್ಕೆ ಸಿಗಲಿಲ್ಲ. ಆದರೆ ಎಂತೆಂತಹ ಸಂಕಷ್ಟಗಳ ಮಧ್ಯದಲ್ಲಿಯೂ ಬಸವ-ಶಿಶುವಾದ ಲಿಂಗಾಯತ ಧರ್ಮವು ಬದುಕಿ ಬಂದಿದೆ. ಈಗ ದಷ್ಟಪುಷ್ಟವಾಗಿ ಬೆಳೆಯಬೇಕಾಗಿದೆ. ಅದು ಹುಟ್ಟಿದಾಗಿನಿಂದಲೂ ಪೋಷಿಸಿ, ಅದರ ಧಾರ್ಮಿಕ ಸಂವಿಧಾನಕ್ಕೆ ಸಂಕಷ್ಟ ಬಂದಾಗ ರಕ್ಷಿಸಿದವನು ಶ್ರೀಸಾಮಾನ್ಯನೇ! ಆದ್ದರಿಂದ ಇಂದು, ಮುಂದು, ಎಂದೆಂದೂ ಇದರ ಪೋಷಣೆ, ರಕ್ಷಣೆ ನಿಮ್ಮ ಮೇಲಿದೆ. ಜನ ಬದುಕಲೆಂದು ಜಗ ಬದುಕಲೆಂದು ಕೊಡಲ್ಪಟ್ಟ ಈ ಧರ್ಮ ಮತ್ತು ಸಾಹಿತ್ಯಗಳು ಲೋಕ ಸಂಜೀವಿನಿಯಾಗಿವೆ. ಆದ್ದರಿಂದ ನೀವು ಶರಣ ಮೇಳದ ಮಹತ್ವ ಕುರಿತು ಪ್ರಚಾರವನ್ನು ನೀವು ನೀವೇ ಮಾಡಬೇಕು. ತನ್ನ ಅಂತಃಶಕ್ತಿಯಿಂದಲೇ ಶರಣ ಮೇಳ ಬಲಗೊಂಡು ಬೆಳೆಯಬೇಕು. ಬಹುಪಾಲು ವಾರ್ತಾ ಪತ್ರಿಕೆಗಳು ಸುಳ್ಳು ಸುದ್ದಿಗಳನ್ನು ಹಬ್ಬಿಸಲು, ವಿವಾದ ಸೃಷ್ಟಿಸಲು, ನಟ-ನಟಿಯರ ಬಗ್ಗೆ ಹರಟೆ ಮಲ್ಲಿಗಳಾಗಿ ಕೆಲಸ ಮಾಡಲು, ರಾಜಕೀಯ ಪಕ್ಷಗಳ ಬಗ್ಗೆ ದ್ವೇಷ ಇಲ್ಲವೇ ಮಮಕಾರಗಳಿಂದ ವರ್ತಿಸಲು ತೋರುವಷ್ಟು ಆಸಕ್ತಿಯನ್ನು ಶರಣ ಮೇಳ ಪ್ರಚಾರದಲ್ಲಿ ತೋರಲಿಕ್ಕಿಲ್ಲ. ಜನರು ಈಗ ಪ್ರಬುದ್ಧರಾಗುತ್ತಿದ್ದಾರೆ. ಆಧ್ಯಾತ್ಮಿಕವಾಗಿ ಹಸಿದಿದ್ದಾರೆ. ಸಂಘಟಿತರಾಗಲು ಆತುರರಾಗಿದ್ದಾರೆ. ಆದ್ದರಿಂದ ಅಂತಹ ಆಸಕ್ತರಿಗೆ ಶರಣ ಮೇಳದ ಮಾಹಿತಿ ನೀಡುವ ಪವಿತ್ರ ಕರ್ತವ್ಯ ಮಾಡಿರಿ. ನಿಮ್ಮ ತನುಮನಗಳೆರಡನ್ನು ಈ ಪ್ರಚಾರ ಕಾರ್ಯದಲ್ಲಿ ತೊಡಗಿಸಿರಿ.

ಧನ ಸಂಗ್ರಹಣೆ

ಬಸವ ಪ್ರಣೀತ ಲಿಂಗಾಯತ ಧರ್ಮದ ಒಂದು ಪವಿತ್ರ ಕಾರ್ಯ ಅನ್ನ ದಾಸೋಹ. ಜ್ಞಾನ ದಾಸೋಹವು ನಾಲ್ಕು ದಿವಸಗಳ ಕಾಲ ನಿರಂತರವಾಗಿ ಇದ್ದೇ ಇರುತ್ತದೆ. ಇದರ ಜೊತೆಗೆ ಅನ್ನ ದಾಸೋಹವು ನಡೆಯಲೇಬೇಕು. ಧರ್ಮಪಿತರು ಅನ್ನದಾಸೋಹಕ್ಕೆ ಪ್ರಸಿದ್ಧರಾದವರು. ಆದ್ದರಿಂದ ಈ ಪವಿತ್ರ ಕಾರ್ಯ ನಡೆಯಬೇಕಾದರೆ

1. ನೀವು ಸ್ವತಃ ಧನ-ಧಾನ್ಯ ಕೊಡಬೇಕು.

2. ನಿಮ್ಮ ಮಿತ್ರರು, ಪರಿಚಿತರು, ಬಂಧು-ಬಳಗದವರಿಂದ ಸಂಗ್ರಹಿಸಿಕೊಡಬೇಕು.

3. ನೀವು ಸ್ವತಃ ನೀಲಾಂಬಿಕಾ ದಾಸೋಹ ಮಂಟಪದಲ್ಲಿ ನಿಂತು ಬಂದ ಶರಣರಿಗೆ ಪ್ರಸಾದ ಎಡೆಮಾಡಿ ಸಂತೋಷಿಸಬೇಕು. ಈಗ ನಮಗೆ ಧರ್ಮಪಿತ ಬಸವಣ್ಣನವರಿಗೆ ಉಣ್ಣಿಸಬೇಕು, ಉಪಚರಿಸಬೇಕು ಎಂಬ ಆಸೆ ಇರುವುದು ಎಂದುಕೊಳ್ಳೋಣ. ಹೇಗೆ ಮಾಡಲು ಸಾಧ್ಯ? ಬಸವ-ಕಿರಣಗಳಾಗಲು ಇಲ್ಲಿ ಬಂದ ಶರಣರಿಗೆ ಉಣ್ಣಿಸಿ, ಉಪಚರಿಸಿದರೆ ಆಗ ಅದು ಬಸವಸೇವೆ ಆಗುವುದು. ಅದನ್ನೇ ಧರ್ಮಪಿತರು 'ಲಿಂಗದ ಬಾಯಿ ಜಂಗಮ' ಎಂದರು;

ಜಂಗಮ ನೆನೆದರೆ (ತಣಿದರೆ) ಸ್ಥಾವರ ತಣಿಯಿತು ಎಂದು ಹೇಳಿರುವರು.

ಯಾರೂ ಯಾರಿಂದ ಸೇವೆ ನಿರೀಕ್ಷಿಸದೆ ಎಲ್ಲರೂ ಸೇವೆ ಮಾಡಲು ಸನ್ನದ್ಧರಾಗಬೇಕು. ಸ್ವಾಗತ ಕೋಣೆಯಲ್ಲಿ ಕುಳಿತ ಕೆಲವು ಶರಣ ಕಾರ್ಯಕರ್ತರಿಗೆ ಎಂಥ ಒತ್ತಡ ಇರುತ್ತದೆ ಎಂಬುದು ಊಹಿಸಲು ಅಸದಳ. ಆಗ ಕೆಲವರು ಬಂದು ಅವರ ಮೇಲೆ ಜೋರು ಮಾಡುತ್ತಾರೆ. ಜನರನ್ನೂ ಕರೆತಂದು ನಮಗೆ ಅದಿಲ್ಲ ಇದಿಲ್ಲ ಎಂದು ಗಲಾಟೆ ಮಾಡುತ್ತಾರೆ. ಇದು ಶರಣ ಸಂಸ್ಕೃತಿಗೆ ಸೂಕ್ತವಲ್ಲ. ಏಕೆಂದರೆ ಅದು ಇವರೂ ಮಾಡಬೇಕಾದ ಕರ್ತವ್ಯವಲ್ಲವೇ? ಊಟ ನಿದ್ರೆಯಿಲ್ಲದೆ ಕೆಲವರು 24 ಗಂಟೆ ಕೌಂಟರಿನಲ್ಲಿ ಕೂತಿರುತ್ತಾರೆ. ಮಾನಸಿಕ-ಬೌದ್ಧಿಕ ತರಬೇತಿ ಇಲ್ಲದ ಆಗಂತುಕರು ಗಲಾಟೆ ಮಾಡುತ್ತಿದ್ದರೂ, ರಾಷ್ಟ್ರೀಯ ಬಸವ ದಳದ ಕಾರ್ಯಕರ್ತರು, ಆಗಂತುಕರಿಗೆ ಸಮಾಧಾನ ಹೇಳಿ ಇದು ಪರಿಶ್ರಮದ ಕೆಲಸ, ಸ್ವಲ್ಪ ಸಮಾಧಾನವಿರಲಿ ಎಂದು ಹೇಳಬೇಕು. ಒಂದು ವೇಳೆ ಕಾರ್ಯಕರ್ತರು, ''ಇದು ನನ್ನದಷ್ಟೇ ಅಲ್ಲ; ನಿನ್ನದೂ ಕೆಲಸ, ನೀನೂ ಬಂದು ಇಲ್ಲಿ ಕುಳಿತುಕೋ ಅಯ್ಯಾ'' ಎಂದೆನ್ನುವುದರಲ್ಲಿ ತಪ್ಪಿಲ್ಲವಲ್ಲವೆ? ಆದಕ್ಕೆ ಧರ್ಮಗುರುವು ಹೀಗೆ ಆದೇಶಿಸಿದ್ದಾರೆ.

ಭಕ್ತ ಭಕ್ತನ ಮನೆಗೆ ಬಂದಡೆ
ಭೃತ್ಯಾಚಾರವ ಮಾಡಬೇಕು
ಕರ್ತನಾಗಿ ಕಾಲ ತೊಳೆಯಿಸಿಕೊಂಡಡೆ
ಹಿಂದೆ ಮಾಡಿದ ಭಕ್ತಿಗೆ ಹಾನಿ
ಲಕ್ಷ್ಯಗಾವುದ ದಾರಿಯ ಹೋಗಿ
ಭಕ್ತನು ಭಕ್ತನ ಕಾಂಬುದು ಸದಾಚಾರ
ಅಲ್ಲಿ ಕೂಡಿ ದಾಸೋಹವ ಮಾಡಿದಡೆ
ಕೂಡಿಕೊಂಬನು ನಮ್ಮ ಲಿಂಗದೇವನು. -ಬ.ವ.ದೀಪ್ತಿ ೨೪೮

ಲಕ್ಷ್ಯ ಗಾವುದ ದೂರವಾದರೂ ಸರಿಯೆ ಶರಣ ಬಂಧುಗಳು ಹೋಗಿ ಪರಸ್ಪರ ಭೇಟಿಯಾಗಬೇಕು; ಕುಶಲವನ್ನು ವಿಚಾರಿಸಬೇಕು, ಪರಸ್ಪರ ಸೇವೆಯನ್ನು ಮಾಡಬೇಕು. ಇಂತಹ ಸಹೋದರತ್ವ ಸಾಧನೆ ಬಹಳ ಮುಖ್ಯ. ಅದೀಗ ಶರಣ ಮೇಳದ ಮೂಲಕ ಸುಲಭ ಸಾಧ್ಯವಾಗಿದೆ. ಶರಣ ಮೇಳದ ಕಲ್ಪನೆ ಧರ್ಮಪಿತರ ವಚನದಲ್ಲಿ ಹೀಗೆ ಮೂಡಿ ನಿಂತಿದೆ.

ಅಯ್ಯಾ, ನಿಮ್ಮ ಶರಣರ ದಾಸೋಹಕ್ಕೆ
ತನು ಮನ ಧನವಲಸದಂತೆ ಮಾಡಯ್ಯಾ
ತನು ದಾಸೋಹಕ್ಕೆ ಉಬ್ಬುವಂತೆ ಮಾಡಯ್ಯಾ
ಮನ ದಾಸೋಹಕ್ಕೆ ಲೀಯವಹಂತೆ ಮಾಡಯ್ಯಾ
ಧನ ದಾಸೋಹಕ್ಕೆ ಸವೆದು ನಿಮ್ಮ ಶರಣರ ಪ್ರಸಾದದಲ್ಲಿ
ನಿರಂತರ ಆಡಿ, ಹಾಡಿ, ನೋಡಿ, ಕೂಡಿ, ಭಾವಿಸಿ, ಸುಖಿಸಿ
ಪರಿಣಾಮಿಸುವಂತೆ ಮಾಡು ಲಿಂಗದೇವಾ. -ಬ.ವ.ದೀಪ್ತಿ. ೪೫೬

ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ, ರಾತ್ರಿಯ ಊಟಗಳನ್ನು ಎಡೆಮಾಡಲು ಬೇರೆ ಬೇರೆ ರಾಷ್ಟ್ರೀಯ ಬಸವ ದಳಗಳವರು ಬೇರೆ ಬೇರೆ ತಂಡಗಳನ್ನು ರಚಿಸಬೇಕು. ಅಂದರೆ

ಮಾತ್ರ ಎಲ್ಲ ರಾಷ್ಟ್ರೀಯ ಬಸವ ದಳದವರಿಗೆ ಒಂದು ಹೊತ್ತಿನ ಸೇವೆ, ಉಳಿದಂತೆ ಕಾರ್ಯಕ್ರಮ ಪ್ರಾಪ್ತಿಯಾಗುತ್ತದೆ. ದೇಣಿಗೆ ನೀಡಿಕೆ, ಧೇಣಿಗೆ ಸಂಗ್ರಹ ಸ್ವಯಂ ಪ್ರೇರಣೆಯ ಕರ್ತವ್ಯವಾಗಬೇಕು. ದಿ. 14-10-1995ರ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಚಿತ್ರದುರ್ಗ ರಾಷ್ಟ್ರೀಯ ಬಸವ ದಳದ ಶರಣ ಲಿಂಗಣ್ಣನವರು, ''ಇಂಥ ಊರಿನಿಂದ ಇಷ್ಟು ತರಬೇಕು ಎಂದು ಖರ್ಚಿನ ಅಂದಾಜು ಮಾಡಿ, ನಮಗೆಲ್ಲ ಆದೇಶಿಸಬೇಕು'' ಎಂದು ಹೇಳಿದರು. ಆಗ ನಾನು ಹೇಳಿದೆ ''ನಾನು ಆ ರೀತಿ ಆದೇಶಿಸುವುದಿಲ್ಲ. ಶರಣ ಮೇಳ ಎಲ್ಲರ ಕಾರ್ಯಕ್ರಮ. ಸ್ವಯಂ ಪ್ರೇರಣೆಯಿಂದ ಯಾರು ಎಷ್ಟು ಬೇಕಾದರೂ ಮಾಡಬಹುದು, ಮಾಡದೆ ಇರಬಹುದು. ಲೆಕ್ಕ ಕೊಡಬೇಕಾದುದು ನನಗಲ್ಲ, ಧರ್ಮಪಿತ ಬಸವಣ್ಣನವರಿಗೆ. ಮನೆಯ ಮಕ್ಕಳಾಗಿ ಎಲ್ಲರೂ ಅವರ ಅಂತಃಸಾಕ್ಷಿಯಾಗಿ ಮಾಡಬೇಕು. ಮಾಡದೆ ಇದ್ದರೆ ಅವರ ಕರ್ತವ್ಯದಲ್ಲಿ ಚ್ಯುತಿಯಾಗುವುದು ಎಂಬ ಪ್ರಜ್ಞೆ ಎಲ್ಲರಲ್ಲಿ ಮೊಳೆಯಬೇಕು. ಕಾರ್ಯ ಮಾಡಿಸಿಕೊಳ್ಳುವವರು ಧರ್ಮಪಿತರೇ, ನಾವು ನಿಮಿತ್ತ ಮಾತ್ರರು; ನೀವೂ ನಿಮಿತ್ತ ಮಾತ್ರರು. ಇಂಥ ಸೌಭಾಗ್ಯ , ಸದವಕಾಶ ಸಿಕ್ಕಿದಕ್ಕೆ ನಮಗೆ ಸಂತೋಷವಾಗಬೇಕು'' ಎಂದು ಹೇಳಿದೆ.

ವ್ಯಕ್ತಿ ಪ್ರೇಮ ಬೇಡ, ತತ್ತ್ವ ಪ್ರೇಮ ಬೆಳೆಯಲಿ.

ಪೂಜ್ಯ ಅಪ್ಪಾಜಿ ಮತ್ತು ನಾವು ಎಂದಿನಿಂದಲೂ ಹೇಳುತ್ತಿದ್ದೇವೆ. ನಾವು ಕುದುರೆಯಾಗಿ ಬಸವ ಗುರುವನ್ನು ಹೊತ್ತು ಮೆರೆಸಬೇಕೇ ವಿನಾ ಬಸವ ತತ್ತ್ವವನ್ನು ಕುದುರೆ ಮಾಡಿಕೊಂಡು ತಾವು ಹತ್ತಿ ಮೆರೆಯುವವರಾಗಬಾರದು ಎಂದು. ಆರ್.ಸಿ.ಸಿ. ಮೌಲ್ಡ್ ಹಾಕುವಾಗ ಸೆಂಟ್ರಿಂಗ್ ಹಾಕುತ್ತೇವೆ. ನಂತರ ಸೆಂಟ್ರಿಂಗ್ ತೆಗೆದು ಆರ್.ಸಿ.ಸಿ. ಮೌಲ್ಡ್ ಉಳಿಸಿಕೊಳ್ಳುತ್ತೇವೆ. ಕೆಲವು ಆಕೃತಿ ತೆಗೆಯುವಾಗ ಮೌಲ್ಡ್ ಮಾಡಲಾಗುವುದು. ಮೌಲ್ಡ್ ಸಹಾಯ ಸಾಧನ ಮಾತ್ರ. ಹಾಗೆಯೇ ಪೂಜ್ಯ ಅಪ್ಪಾಜಿಯವರ, ನಮ್ಮ, ಪೂಜ್ಯ ಗಂಗಾ- ಮಾತಾಜಿ ಮುಂತಾದವರ ಪ್ರವಚನಗಳು ಸೆಂಟ್ರಿಂಗ್ ತರಹ ಕೆಲಸ ಮಾಡಿ, ಅಲ್ಲಿ ಬಸವ ತತ್ತ್ವದ ಆರ್.ಸಿ.ಸಿ. ಗಟ್ಟಿಗೊಳಿಸುತ್ತವೆ. ಅಲ್ಲಿ ಸೃಷ್ಟಿಕರ್ತ ಲಿಂಗದೇವನನ್ನು, ಗುರು ಬಸವಣ್ಣನವರನ್ನು, ಜಂಗಮ ಜ್ಯೋತಿಗಳಾದ ಶರಣರನ್ನು ಪ್ರತಿಷ್ಠಾಪಿಸುತ್ತೇವೆ. ಇದೇ ಶರಣ ಮೇಳವು ನಮ್ಮ ಪ್ರಯತ್ನ, ಪರಿಶ್ರಮ ಪ್ರಭಾವದಿಂದ ಆರಂಭವಾಗಿ ನಡೆದರೂ,ಆ ಭಾರವನ್ನು ತಮ್ಮ ಹೆಗಲಿಗೆ ವರ್ಗಾಯಿಸಿಕೊಂಡು ಶರಣ ಬಂಧುಗಳೇ, ಶರಣ ಮೇಳವನ್ನು ನಡೆಸಿಕೊಂಡು ಹೋಗು-ವಂತಾಗಬೇಕು. ಈ ಉದ್ದೇಶದಿಂದಲೇ ೧. ಬಸವ ಧರ್ಮ ಪೀಠ, ೨. ಶರಣ ಮೇಳ ಉತ್ಸವ ಸಮಿತಿ ಟ್ರಸ್ಟ್ ೩. ಶರಣ ಮೇಳ ಉತ್ಸವ ಸಂಚಾಲಕ ಸಮಿತಿ ಮಾಡಲಾಗಿದೆ. ಈ ಸಮಿತಿಗೆ ಸ್ವಯಂ ಪ್ರೇರಣೆಯಿಂದ ಹೆಸರು ಬರೆಯಿಸಿ ಸದಸ್ಯರಾಗಲು ಆಸಕ್ತರಿಗೆ ಅವಕಾಶ ಉಂಟು. ಅವರಿಗೆ ರಸೀತಿ ಪುಸ್ತಕ ಕಳಿಸುತ್ತೇವೆ. ದೇಣಿಗೆ ಸಂಗ್ರಹಿಸಿಕೊಡಬೇಕು.

ಶರಣ ಮೇಳಕ್ಕೆ ಯಾವ ಸ್ವಾಮಿಗಳು, ಯಾವ ಗಣ್ಯರು, ಯಾವ ರಾಜಕೀಯ ಪಟುಗಳು, ಮಂತ್ರಿವರ್ಯರು ಬರುತ್ತಾರೆ ಎಂಬುದು ಮುಖ್ಯವಲ್ಲ. ನೀವು (ಶರಣರು) ಬರುತ್ತೀರೆಂಬುದು ಬಹಳ ಮುಖ್ಯ. ಏಕೆಂದರೆ, ಹಿಂದು ಸಮಾಜದ ಒಂದು ದೌರ್ಬಲ್ಯವೆಂದರೆ, ಒಂದೊಂದು ವ್ಯಕ್ತಿಯ ಕಾಲಕ್ಕೆ ಏನೋ ಅದ್ಭುತವಾದುದು ಆಗಿ, ನಂತರ ಎಲ್ಲ ಬರಡಾಗುವುದು ಇಲ್ಲಿ ಬಲು ಸಹಜ. ''ನ ಭೂತೋ ನ ಭವಿಷ್ಯತಿ'' ಎಂಬುದು ಇಲ್ಲಿ ಪ್ರಚಲಿತವಾದ ಒಂದು ಮಾತು. ಹಿಂದಾಗಿಲ್ಲ. ಮುಂದಾಗುವುದಿಲ್ಲ ಎಂದು ಇದರ ಅರ್ಥ. ಈ ಉಕ್ತಿ ನನಗೆ ಬಹಳ ಸಿಟ್ಟು

ಬರಿಸುತ್ತದೆ. ಯಾವುದಾದರೊಂದು ಕಾರ್ಯಕ್ರಮ ಅಭೂತಪೂರ್ವವಾಗಿ ನಡೆದಾಗ ಇಂಥದು ಹಿಂದೆ ಆಗಿಲ್ಲ ಎಂಬುದು ಸೂಕ್ತ. ಆದರೆ ಮುಂದೆ ಇದಕ್ಕೂ ಮಿಗಿಲಾಗಿ ಆಗಬಾರದೇಕೆ? ಯಾವುದೂ ಸಣ್ಣದ್ದರಿಂದ ದೊಡ್ಡದು ಆಗುತ್ತಾ ಹೋಗಬೇಕು. ಅದು ನಿಸ್ಸೀಮವಾಗಿ ದಶದಿಕ್ಕುಗಳನ್ನೂ ವ್ಯಾಪಿಸುತ್ತಾ ಬೆಳೆಯಬೇಕು.

ಅನೇಕ ಮಠ-ಪೀಠಾಧೀಶರು ಶರಣ ಮೇಳದ ಯಶಸ್ಸಿನ ಬಗ್ಗೆ ಕರುಬುವುದಲ್ಲದೆ ಮೊದಲನೆಯ ಶರಣ ಮೇಳದಿಂದಲೂ ಪ್ರತಿ ವರ್ಷವೂ ಅಪಪ್ರಚಾರ ಮಾಡುತ್ತಾರೆ. ಈ ಸಲ ನಡೆಯುವುದೇ ಇಲ್ಲ ಎಂದು ಸುಳ್ಳು ಸುದ್ದಿ ಹರಡುತ್ತಾರೆ; ಅಲ್ಲೇನೋ ರಕ್ತಪಾತವಾಗುತ್ತದೆ ಎಂದು ಭಯ ಹುಟ್ಟಿಸಲು ಯತ್ನಿಸುತ್ತಾರೆ. ಹಲವಾರು ಬಗೆಯ ಕುತಂತ್ರಗಳನ್ನು ಕೆಲವು ಮಠ-ಪೀಠಾಧೀಶರು ಮಾಡುತ್ತಲೇ ಇದ್ದರೂ, ಅವರೊಡನೆ ಹಿಮ್ಮೇಳ ಹಾಡುತ್ತ ಕೆಲವು ವೀರಶೈವವಾದಿ ಸಂಘ-ಸಂಸ್ಥೆಗಳು ಅಪಪ್ರಚಾರ ಮಾಡುತ್ತಲಿದ್ದರೂ, ನಿಜ ಬಸವ ಭಕ್ತರ ನಿಷ್ಠಾವಂತ ಪ್ರಾಮಾಣಿಕ ಪ್ರಯತ್ನದಿಂದ ಶರಣ ಮೇಳ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಲಿದೆ. ಜನಪ್ರಿಯತೆ ಪಡೆಯುತ್ತಲಿದೆ.

''ಶರಣ ಮೇಳ'' ಒಂದು ರೀತಿಯ ರಾಶಿಯ ಕೆಲಸವಿದ್ದಂತೆ. ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿರುವ ಸಭಾ ಮಂಟಪವೇ ಕಣ. ಧರ್ಮಗುರು ಬಸವಣ್ಣನೇ ಮೇಟಿಗೂಟ, ಇಲ್ಲಿ ಉಪನ್ಯಾಸ-ಪ್ರವಚನ ಮಾಡುವವರೆಲ್ಲ ತುಳಿಸುವ ಎತ್ತುಗಳು; ವಚನ ಸಾಹಿತ್ಯ ಸಂವಿಧಾನವೇ ಇವರೆಲ್ಲರನ್ನು ಬಿಗಿದ ಕಣ್ಣಿಯ ಹಗ್ಗ; ಜ್ಞಾನದ ಗಾಳಿಯಲ್ಲಿ ತೂರುವುದು, ಕೇರುವುದು ಉಂಟು. ಜೊಳ್ಳೆಲ್ಲ ಹಾರಿ ಹೋಗಿ, ಗಟ್ಟಿಕಾಳು ಉಳಿಯುವುದು. ತಾತ್ತ್ವಿಕವಾಗಿ ಸಂಸ್ಕರಣಗೊಂಡು ಉಳಿಯುವ ಕಾಳು ಇವು ಸಾಮಾನ್ಯವಲ್ಲ; **ಬಿತ್ತುವ ಕಾಳಿನಂತೆ ವಿಶೇಷ.** ಈ ಶರಣ-ಬಿತ್ತು ಕಾಳುಗಳು ತಮ್ಮ ತಮ್ಮ ಕ್ಷೇತ್ರಕ್ಕೆ ಹೋಗಿ ಪುನಃ ಬೆಳೆ ತೆಗೆಯುವುವು. ಹೊಸ ಹೊಸ ತಲೆಗಳು ಮತ್ತೆ ಮುಂದಿನ ಶರಣ ಮೇಳದಲ್ಲಿ ಶುದ್ಧೀಕರಣಗೊಳ್ಳುವುವು.

ಮೊದಲ ಶರಣ ಮೇಳಕ್ಕೆ ಒಮ್ಮೆಲೇ ಬೃಹತ್ತಾಗಿ ಜನರು ಬಂದರು. ಅದರಲ್ಲಿ ವೀರಶೈವವಾದಿಗಳು, ಬಿ.ಪಿ.(ಬಸವ ಪೂರ್ವದಲ್ಲಿ ಈ ಧರ್ಮವಿತ್ತು ಎನ್ನುವವರಿಗೆ ಪೂಜ್ಯ ಅಪ್ಪಾಜಿ ಕರೆಯುತ್ತಿದ್ದ ಹೆಸರು)ಯವರು ಕೂಡಿದ್ದರು. ಆ ಶರಣ ಮೇಳದಲ್ಲಿ ಷಟ್ ಸೂತ್ರಗಳನ್ನು ನಾವು ಘೋಷಿಸುತ್ತಲೇ ಅಂಥವರು ಮುನಿದು ಬರುವುದು ಬಿಟ್ಟರು. ನಾವೇನೂ ಚಿಂತಿಸಲಿಲ್ಲ. ಅಂಥವರಿಗಾಗಿ ತತ್ತ್ವಗಳಲ್ಲಿ ಯಾವ ರಾಜಿಯನ್ನೂ ಮಾಡಿಕೊಳ್ಳಲಿಲ್ಲ. ಆದರೆ ಕಾಲಕ್ರಮೇಣ ತತ್ತ್ವಗಳಿಗೆ ಬದ್ಧರಾದ ಶರಣರ ಸಂಖ್ಯೆ ಈಗ ವರ್ಧಿಸುತ್ತಾ ಬರುತ್ತಿದೆ.

ಲಿಂಗದೇವ ವಚನಾಂಕಿತ ಪ್ರಸಂಗ

ವೀರಶೈವವಾದಿಗಳು ಮತ್ತು ನಮ್ಮ ಬಗ್ಗೆ ಹಲವಾರು ಬಗೆಯ ಮಾತ್ಸರ್ಯ-ಈರ್ಷೆ ಇರುವವರು ಈ ಸಲ ''ಲಿಂಗದೇವ'' ಪ್ರಸಂಗವನ್ನು ತೆಗೆದುಕೊಂಡು ಶರಣಮೇಳಕ್ಕೆ ಹಿನ್ನಡೆಯುಂಟು ಮಾಡಬೇಕೆಂದು ಪ್ರಯತ್ನಿಸುತ್ತಿರುವರು. ಇದರಿಂದ ನಿಷ್ಠಾವಂತ ಬಸವ ಭಕ್ತರು ನಿರುತ್ಸಾಹಿತರಾಗಬೇಕಾಗಿಲ್ಲ ಅಥವಾ ಉದ್ವಿಗ್ನರೂ ಆಗಬೇಕಾಗಿಲ್ಲ. ಶರಣ ಮೇಳವನ್ನು ನಡೆಸುವುದು ನಮ್ಮ-ನಿಮ್ಮ ಶಕ್ತಿಯಲ್ಲ; ಧರ್ಮಪಿತ ಬಸವಣ್ಣನವರ ಸತ್‌ಸಂಕಲ್ಪ ಸೃಷ್ಟಿಕರ್ತ

ಲಿಂಗದೇವನ ಅನುಗ್ರಹ, ಆದಿ ಶರಣರ ಆಶಯ.

''ದಕ್ಷಿಣದ ಕೃಷ್ಣೆಗೆ ಕರೆವರಯ್ಯಾ ಜನ ನೆರೆವರಯ್ಯಾ''

ಎಂದು ಶರಣ ಮಡಿವಾಳ ಮಾಚಿತಂದೆಗಳು ನುಡಿದರು. ''ಕೃಷ್ಣಾನದಿಯ ದಕ್ಷಿಣ ದಂಡೆಯ ಮೇಲೆ ಬೃಹತ್ ಸಮಾವೇಶವಾಗಿ ಜನರು ನೆರೆಯುವರು'' ಎಂಬುದು ಶರಣರು ಕಂಡ ಕನಸು. ಇದಕ್ಕೆ ಬಸವ ಭಕ್ತರನ್ನು **''ಕರೆವರು''** ಎಂದು ನಮ್ಮ-ನಿಮ್ಮ ಮೇಲೆ ಒಂದು ಭಾರಿ ಹೊಣೆ ಹೊರಿಸಿದ್ದಾರೆ. ಆದ್ದರಿಂದ ನಾವು-ನೀವು ಶರಣ ಬಂಧುಗಳನ್ನು ಕರೆಯಬೇಕಾಗಿದೆ.

ಅನುಭಾವ ದರ್ಶನಶಾಸ್ತ್ರ, ತಾತ್ತ್ವಿಕ ಚಿಂತನೆಯ ಆಳವು ಇಲ್ಲದೆ ಇರುವ ಕೆಲವರು, ''ಮಾತಾಜಿ ಹೀಗೆ ಮಾಡಿದ್ದಾರೆ, ನಾವು ಶರಣ ಮೇಳಕ್ಕೆ ದೇಣಿಗೆ ಕೊಡುವುದಿಲ್ಲ'' ಎನ್ನಬಹುದು. ಇದರಿಂದ ನೀವು ವಿಚಲಿತರಾಗಬೇಡಿರಿ, ಅವಮಾನವಾಯಿತೆಂದು ನೊಂದುಕೊಳ್ಳಬೇಡಿ, ದೇಣಿಗೆ ಕೊಡದವರ ಮೇಲೆ ಕೋಪಗೊಳ್ಳಬೇಡಿರಿ. ಧರ್ಮಗುರು ಬಸವಣ್ಣನವರ ಸತ್ಸಂಕಲ್ಪ ಪೂರೈಸುವ ಶರಣ ಮೇಳದ ಪವಿತ್ರ ದಾಸೋಹಕ್ಕೆ ದೇಣಿಗೆ ನೀಡುವ ಪುಣ್ಯವನ್ನು ಅಂಥವರು ಕಳೆದುಕೊಂಡರು ಎಂದು ಭಾವಿಸಿರಿ; ಪ್ರವಾದಿ ಏಸುಕ್ರಿಸ್ತರು ತನ್ನನ್ನು ದ್ವೇಷಿಸಿ ಹಿಂಸಿಸಿದ ಜನರನ್ನು ಕುರಿತು ದೇವರಲ್ಲಿ ಪ್ರಾರ್ಥಿಸಿದರಂತೆ, ''ದೇವರೇ, ಇವರು ಏನು ತಪ್ಪು ಮಾಡುತ್ತಿದ್ದಾರೆಂದು ಅರಿಯರು, ಅವರನ್ನು ಕ್ಷಮಿಸು.''ಎಂದು. ಬಸವ ಭಕ್ತರಲ್ಲದವರು, ಬಸವ ದ್ವೇಷಿಗಳು ಅತ್ತಲಿರಲಿ. ಅವರು ನೆರೆಮನೆಯವರಾಗಿರಲಿ; ಬಸವ ಭಕ್ತರೆಂದುಕೊಂಡೂ ಶರಣ ಮೇಳಕ್ಕೆ ಅಡೆತಡೆಯೊಡ್ಡುವವರು, ದ್ವೇಷಿಸುವವರು ಮತ್ತು ಅಸಹಕಾರ ಮಾಡುವವರು ತಾವು ಏನು ತಪ್ಪು ಮಾಡುತ್ತಿರುವರೆಂಬುದನ್ನರಿಯರು. ಕಾಲವೇ ಅವರನ್ನು ಪರಿವರ್ತಿಸುತ್ತದೆ; ಇಲ್ಲವೇ ತಿರಸ್ಕರಿಸಿ, ಬಿಸುಟುತ್ತದೆ.

ದೆಹಲಿಯಲ್ಲಿ **ಬಹಾಉಲ್ಲಾ** ಎಂಬುವವರ ಸ್ಮರಣಾರ್ಥ ಕಟ್ಟಿಸಿದ ಕಮಲ ದೇಗುಲ (Lotus temple) ಇದೆ. ಅಂಥ ೮-೧೦ ಸ್ಮಾರಕ ಮಂದಿರಗಳು ಜಗತ್ತಿನ ತುಂಬ ಇವೆ. ಬಹಾಉಲ್ಲಾರ ಭಕ್ತರಿಂದ ಮಾತ್ರ ಆ ಸ್ಮಾರಕಕ್ಕೆ ದೇಣಿಗೆ ಪಡೆದಿದ್ದಾರೆ. ಸಾರ್ವಜನಿಕ ವಂತಿಗೆ ಅವರು ಸ್ವೀಕರಿಸುವುದೇ ಇಲ್ಲವಂತೆ, ಅದರಂತೆಯೇ ನಿಷ್ಠಾವಂತ ಬಸವಭಕ್ತರು ಕೊಡುವ ದೇಣಿಗೆಯಿಂದಲೇ ಶರಣ ಮೇಳ ನಡೆಸೋಣ; ಕೊಡುವುದಿಲ್ಲ ಎನ್ನುವವರ ಜೊತೆ ವಾದಕ್ಕಿಳಿದು ಸಮಯ ಹರಣ ಮಾಡದೆ ನಿಮ್ಮ ಸಮಯವನ್ನು ಬೇರೆ ಕಡೆ ಸಾರ್ಥಕ ಪಡಿಸಿಕೊಳ್ಳಿರಿ. ಕೆಲವರ ಹೃದಯ-ಮನ-ಬುದ್ಧಿಗಳು ಕಾಡಿಗೆ ಕಟ್ಟಿರುತ್ತವೆ. ಅವರಿಗೆ ಸತ್ಯವನ್ನು ಅರಿತುಕೊಳ್ಳುವಷ್ಟು ಸಹನೆಯಾಗಲಿ, ಸಹೃದಯತೆಯಾಗಲೀ ಇರುವುದಿಲ್ಲ. ವೈಯಕ್ತಿಕ ರಾಗ-ದ್ವೇಷ, ಮದ-ಮತ್ಸರಗಳಿಂದ ಮಾಡಬಾರದ ಪಾಪ ಕಾರ್ಯಗಳನ್ನು ಮಾಡುತ್ತಿರುತ್ತಾರೆ. ಇಂತಹವರು ಜಗತ್ತಿನಲ್ಲಿ ಎಂದಿನಿಂದಲೂ ಇದ್ದಾರೆ, ಇರುತ್ತಾರೆ. ಅಂಥವರ ಬಗ್ಗೆ ತಲೆ ಕೆಡಿಸಿಕೊಳ್ಳದೆ ನಾವಿಟ್ಟುಕೊಂಡ ಸತ್ಕದ ಗುರಿಯ ಕಡೆಗೆ ನಾವು ಸಾಗಬೇಕು.

ಕೆಲವೊಂದು ಅನಿವಾರ್ಯ ಕಷ್ಟಗಳು

ಶರಣ ಮೇಳಕ್ಕೆ ವರ್ಷದಿಂದ ವರ್ಷಕ್ಕೆ ಜನಸಂಖ್ಯೆ ಹಿರಿದಾಗುತ್ತಿದೆ. ಆಗಬೇಕೆಂಬುದೇ ನಮ್ಮ ಸಂಕಲ್ಪ. ಶರಣ ಕಾರ್ಯಕರ್ತರ ಅವಿಶ್ರಾಂತ ಪರಿಶ್ರಮದಿಂದ ಊಟದ ವ್ಯವಸ್ಥೆಗೆ ತೊಂದರೆಯಾಗದು. ವಸತಿಗೆ ಮಾತ್ರ ತಾತ್ಕಾಲಿಕ ಶಾಮಿಯಾನ, ಟೆಂಟ್, ಪೆಂಡಾಲ್

ಮುಂತಾದವು ಇರುತ್ತವೆ. ಸ್ವತಂತ್ರ ವಾಹನಗಳ ಅನುಕೂಲವಿರುವವರು ಆಲಮಟ್ಟಿ, ಹುನಗುಂದ, ಇಳಕಲ್, ಬಾಗಲಕೋಟೆಗಳ ಪ್ರವಾಸಿ ಮಂದಿರ ಲಾಡ್ಜಿಂಗ್ ವ್ಯವಸ್ಥೆ ಮಾಡಿಕೊಳ್ಳಬೇಕು. ಬೆಳಿಗ್ಗೆ ಸ್ನಾನ ಪೂಜೆ ಮುಗಿಸಿ ಬಂದುಬಿಟ್ಟರೆ ಸಾಕು, ಇಲ್ಲಿ ಉಪಾಹಾರ, ಊಟಗಳ ವ್ಯವಸ್ಥೆ ಇರುತ್ತದೆ. ರಾತ್ರಿ ಕಾರ್ಯಕ್ರಮ ಮುಗಿದ ಬಳಿಕ ರಾತ್ರಿಯ ಊಟ ಮುಗಿಸಿ ತಮ್ಮ ವಾಸ್ತವ್ಯಕ್ಕೆ ತೆರಳಬಹುದು. ಉಳಿದವರಿಗೆ ಶಾಮಿಯಾನಾ ಕೊಠಡಿ ಇರುತ್ತದೆ. ಶರಣರು ಪಂಚತಾರಾ ಹೋಟಲ್ಲಿನ ಸೌಕರ್ಯ ಬಯಸಬಾರದು, ಇಂಥ ಕುಗ್ರಾಮದಲ್ಲಿ ಅದನ್ನು ನಿರೀಕ್ಷಿಸಲು ಸಾಧ್ಯವೇ? ಕೇವಲ ಸ್ವಲ್ಪ ಚಳಿ ತಡೆಯಬೇಕು. ಈ ವರ್ಷ ಅದೂ ಸಹ ಕಮ್ಮಿ. ಹವೆಯು ಬಹಳ ಹಿತಕರವಾಗಿದೆ. ಇಂಥ ಭೌತಿಕ ಅನುಕೂಲತೆ ನಿರೀಕ್ಷಿಸಿ ಶರಣ ಮೇಳಕ್ಕೆ ಬರದೆ ಮನೆಯಲ್ಲಿ ಕುಳಿತುಕೊಳ್ಳುವವರು ಆದಿ ಶರಣರ ಹೋರಾಟದ ಬದುಕನ್ನು ನೆನಪಿಸಿಕೊಳ್ಳಬೇಕು. ಸಹ್ಯಾದ್ರಿಯ ಕಾಡಿನಲ್ಲಿ ಅಲೆದು ವಚನ ಸಾಹಿತ್ಯ ಸಂರಕ್ಷಿಸಿ, ಆ ಮಳೆಗಾಳಿ ಚಳಿಯಲ್ಲಿ ಘಾಸಿಯಾಗಿ, ನೊಂದು, ನಲುಗಿ, ಗಿಡಗಳಿಗೆ ತೊಟ್ಟಿಲು ಕಟ್ಟಿಕೊಂಡು ಮಲಗಿ, ಅಂಥ ಸಂಕಷ್ಟಗಳನ್ನೂ ಅನುಭವಿಸಿ ಪ್ರಾಣಬಿಟ್ಟ ಆ ಮಹಾನ್ ತ್ಯಾಗಿಗಳನ್ನು ನೆನಪು ಮಾಡಿಕೊಂಡು ನಮ್ಮ ಕರುಳು ಚುರುಕ್ ಎನ್ನಬೇಕು. ಹೃದಯ ಮಮ್ಮಲ ಮರುಗಬೇಕು. ಅವರ ತ್ಯಾಗ, ಪರಿಶ್ರಮದ ಒಂದುಸಾವಿರದಲ್ಲಿ ಒಂದು ಅಂಶದಷ್ಟೂ ನಮಗೆ ಶ್ರಮವಿಲ್ಲ. ಅವರ ಋಣದಿಂದ ನಾವು ಮುಕ್ತರಾಗಬೇಕಾದರೆ ಯಾವ ರೀತಿ ದುಡಿದು ಹಣ್ಣಾದರೂ ಸಾಲದು. ಕಲ್ಯಾಣ ಕ್ರಾಂತಿ ; ಗಡಿಪಾರು ಎಲ್ಲ ಆದ ಮೇಲೆ ಧರ್ಮಪಿತರು ನೋವೇ ಹೆಪ್ಪುಗಟ್ಟಿ ನುಡಿದಿರುವ ಈ ವಚನವನ್ನಿಷ್ಟು ಅರ್ಥ ಮಾಡಿಕೊಳ್ಳಿರಿ.

ಬಿತ್ತಿತ್ತು ಬೆಳೆಯಿತ್ತು ಕೆಯ್ಯ ಕೊಯ್ಯಿತ್ತು ಗೂಡು ಮುರಿಯಿತ್ತು
ಕುತ್ತರಿಯೊಟ್ಟಿತ್ತು ಒಕ್ಕಿತ್ತು ತೂರಿತ್ತು ಅಳೆಯಿತ್ತು
ಸಲಗೆ ತುಂಬಿತ್ತು
ಲಿಂಗದೇವಯ್ಯಾ ಮೇಟಿ ಕಿತ್ತಿತ್ತು, ಕಣ ಹಾಳಾಯಿತ್ತಯ್ಯಾ

(ಬ.ವ.ದೀಪ್ತಿ.೧೩೭೮)

ಅಂದು ಧರ್ಮಗುರುವು ತತ್ತ್ವದ ಬೀಜಗಳನ್ನು ಅನುಭವ ಮಂಟಪ ಎಂಬ ಕೂರಿಗೆ ಮೂಲಕ ಬಿತ್ತಿದರು. ಶರಣ ಚೇತನಗಳೆಂಬ ಬೆಳೆ ಬೆಳೆದರು. ನಂತರ ಮೇಟಿ(ಗುರು ಬಸವಣ್ಣನವರ ಗಡಿಪಾರು) ಕಿತ್ತಿತು. ಕಣ (ಕಲ್ಯಾಣ ಕಾರ್ಯಕ್ಷೇತ್ರ) ಮಸಣ ಸದೃಶವಾಯಿತು. ಅನಿರೀಕ್ಷಿತ ಅವಗಡ ಎದುರಾಯಿತು. ಆದಿ ಪ್ರಮಥ ಬಸವಣ್ಣನವರು ಆದಿಯಾಗಿ ಅನೇಕ ಶರಣರು ನಮ್ಮ ಮೇಲೆ ಅಂದರೆ ನಂತರ ಬರುವ ಪೀಳಿಗೆಯ ಮೇಲೆ ಭರವಸೆ ಇಟ್ಟುಕೊಂಡು ಸಮಾಧಾನಪಟ್ಟುಕೊಂಡು ಹೋಗಿದ್ದಾರೆ. ಕಾಲಜ್ಞಾನ ವಚನಗಳು ಆದಿ ಶರಣರ ಉಯಿಲು **(will)** ಇಚ್ಛಾಪತ್ರಗಳಂತಿವೆ. ಅವರು ನಮ್ಮನು ಬರಿದಾಗಿ ಬಿಟ್ಟು ಹೋಗಿಲ್ಲ. ವಚನ ವಾಙ್ಮಯ ಸಂಪತ್ತಿಗೆ ವಾರಿಸುದಾರರನ್ನಾಗಿ ಮಾಡಿಹೋಗಿದ್ದಾರೆ. ಈ ಸಂಪತ್ತನ್ನೂ ಪಡೆದು ನಾವು ಆದಿ ಶರಣರ ಇಚ್ಛೆಯನ್ನು ಪೂರ್ತಿ ಮಾಡಲು ಸನ್ನದ್ಧರಾಗಬೇಕಾಗಿದೆ.

ಬನ್ನಿ ಶರಣ ಬಂಧುಗಳೇ, ಕಣವನ್ನು ಸರಿಪಡಿಸಲಾಗಿದೆ. ಪುನಃ ಮೇಟಿಯನ್ನು ನೆಡಲಾಗಿದೆ. ಆದಿ ಶರಣರು ರಾಜಶಾಹಿ, ಪುರೋಹಿತಶಾಹಿ ಎರಡರ ವಿರುದ್ಧ ಹೋರಾಡಬೇಕಾಗಿತ್ತು. ನಮಗೆ ಇವೆರಡರ ಕಾಟವಿಲ್ಲ (ಸ್ವಲ್ಪ ಕಿರಿಕಿರಿ ಇರಬಹುದು); ನಾವು

ಪ್ರಜಾಪ್ರಭುತ್ವದಲ್ಲಿದ್ದೇವೆ. ಪ್ರಜಾಪ್ರಭುತ್ವವು ಈ ದೇಶದಲ್ಲಿ ಬರುವುದನ್ನು ಆದಿ ಶರಣರು ತಿಳಿದೇ ೭೭೦ ವರ್ಷಗಳ ಬಳಿಕ ಬರುವ ಸಂಕಲ್ಪ ಮಾಡಿರಬಹುದು (೧೯೪೭ ಸ್ವಾತಂತ್ರ ಬಂದ ವರ್ಷ ಹಿಂದೆ ಹತ್ತು (೧+೯) ಮುಂದೆ ಹನ್ನೊಂದು (೪+೭) ಎಂಬುವ ಶರಣರ ಲೆಕ್ಕಾಚಾರವು ಇಲ್ಲಿ ತಾಳೆಯಾಗುತ್ತಿದೆ) ನಮ್ಮ ಕೈಗಳು ಕಟ್ಟಲ್ಪಟ್ಟಿಲ್ಲ ಮುಕ್ತವಾಗಿವೆ.

ವಚನ ಸಾಹಿತ್ಯ ನಲಗೆ (ಕಣಜ)ಯಲ್ಲಿ ಇರುವ ವಿನೂತನ ಸಂದೇಶಗಳ ಬೀಜಗಳನ್ನು ನಾವು-ನೀವೆಲ್ಲ ಕೂಡಿ ಶರಣ ಮೇಳದ ಮೂಲಕ ಬಿತ್ತೋಣ ಬನ್ನಿ.

ಬಸವ ಗುರುವಿನ ತತ್ತ್ವ ಲೋಕದಿ ಹಬ್ಬಲಿ
ಮನುಜ ಕಲ್ಪಿತ ಜಾತಿ ಹೆರೆ ತೊಲಗಿ ಹೋಗಲಿ
ವಿಶ್ವಮಾನವ ಪ್ರೀತಿ ಹೊನಲಾಗಿ ಹರಿಯಲಿ
ಸೃಷ್ಟಿಕರ್ತನ ಕರುಣೆ ಎಮ್ಮ ಕಾಪಾಡಲಿ ॥

ಹೀಗಾಗಿ ಶರಣ ಬಂಧುಗಳೇ ಧರ್ಮಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳವು, ನಿಮ್ಮಿಂದ, ನಿಮಗಾಗಿ, ನಿಮ್ಮದೇ!

-ಬಸವಾತ್ಮಜೆ
ಪೂಜ್ಯಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲ ಸಂಗಮ - ೫೮೭೧೧೫

ಬಸವ (ಲಿಂಗಾಯತ) ಧರ್ಮದ ಆರು ಸೂತ್ರಗಳು

1. ಧರ್ಮ ಗುರು - ಮಂತ್ರಪುರುಷ ಬಸವಣ್ಣನವರು
2. ಧರ್ಮ ಸಂಹಿತೆ - ಸಮಾನತೆ ಸಾರುವ ವಚನ ಸಾಹಿತ್ಯ
3. ಧರ್ಮ ಲಾಂಛನ - ವಿಶ್ವದಾಕಾರದಲ್ಲಿರುವ ವಿಶ್ವಾತ್ಮನ ಕುರುಹಾದ ಇಷ್ಟಲಿಂಗ
4. ಧರ್ಮ ಕ್ಷೇತ್ರ - ಗುರು ಬಸವಣ್ಣನವರ ಐಕ್ಯಕ್ಷೇತ್ರ ಕೂಡಲ ಸಂಗಮ.
5. ಧರ್ಮ ಧ್ವಜ - ಷಟ್ಕೋನ ಸಹಿತ ಬಸವ ಧ್ವಜ
6. ಧರ್ಮದ ಧ್ಯೇಯ - ಜಾತಿ ವರ್ಣ ವರ್ಗ ರಹಿತ ಧರ್ಮಸಹಿತ ಕಲ್ಯಾಣ ರಾಜ್ಯ ನಿರ್ಮಾಣ.

ಧರ್ಮಪಿತರ ಕರೆಯೋಲೆ

ಮಮತೆಯ ಮಕ್ಕಳೇ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ ಮಹಾಮನೆಯ ಮಕ್ಕಳು. ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು ಕಟ್ಟಿದೆ. ಇದು ಕೇವಲ ಕಲ್ಲು-ಮಣ್ಣು-ಇಟ್ಟಿಗೆ-ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ತ್ವ ಸಂಹಿತೆಯನ್ನು ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದ ಕಾಲದಲ್ಲಿಯೇ ನೀವು ಪ್ರವೇಶಿಸಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿಸಿರಬಹುದು. ಇತ್ತೀಚೆಗೆ ಬಂದಿರಬಹುದು, ಇಂದೇ ನಂಬಿಕೆಯ ಮೂಲಕ, ದೀಕ್ಷೆಯ ಮೂಲಕ ಬಂದಿರಬಹುದು. ಎಂದೇ ಬಂದಿರಲಿ ನೀವು ನನ್ನವರು. ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ವರ್ಗ ಅಂತಸ್ತು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ.

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣು ಮಕ್ಕಳಿಗೆ ತೌರುಮನೆಯಲ್ಲಿ ಆಗಾಗ ಸೇರುವುದೂ ಗೊತ್ತು. ತಾಯಿ-ತಂದೆ, ಅಕ್ಕ-ತಂಗಿ, ಅಣ್ಣ-ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನು ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ-ಸೋದರಿಯರೊಡನೆ ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ ತಂದೆ-ತಾಯಿ ಬಯಸರು? ಸೃಷ್ಟಿಕರ್ತನೆಂಬ ತಂದೆಯ, ಮಾತೃಹೃದಯಿಯಾದ ನನ್ನ ಇಚ್ಛೆಯು ಅದೇ ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಇಷ್ಟು ದಿನ ನಿಮಗೆಲ್ಲ ಅಂಥ ಅವಕಾಶವಿರಲಿಲ್ಲ. ಇದೀಗ ನನ್ನ ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ ಅಂಥ ಅವಕಾಶ ಕಲ್ಪಿಸಿದೆ. ಸಮಾನತೆ-ಸೋದರತ್ವ-ಸ್ವಾತಂತ್ರ ಇವು ನನ್ನ ತತ್ತ್ವದ ಮುಖ್ಯಮೂರು ಸೂತ್ರಗಳು. ಇಲ್ಲಿ ಅವು ಮೂರನ್ನು ಕಾಣಬಹುದು. ಅದಕ್ಕಾಗಿ ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ. ಒಂದೊಂದು ಕಾಲದಲ್ಲಿ ಒಬ್ಬೊಬ್ಬರನ್ನು ಲೋಕದ ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆ ಮಾಡಿಕೊಂಡ. ಬುದ್ಧ, ಮೊಹಮ್ಮದ್, ಏಸು, ನಾನು ಎಲ್ಲ ಅಣ್ಣ ತಮ್ಮಂದಿರಂತೆ. ದೇವರೆಂಬ ತಂದೆಯ ಅವಿಭಾಜ್ಯ ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಅವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿ ಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ ಇರುವುದಿಲ್ಲ. ಸೃಷ್ಟಿ-ಸ್ಥಿತಿ-ಲಯ- ತಿರೋದಾನ ಎಂಬ ನಾಲ್ಕು ಕಾರ್ಯಗಳನ್ನು ತಾನು ಮಾಡಿ, ತಾನು ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯವನ್ನು ಅವತೀರ್ಣಗೊಳಿಸಿ,

ಸಾಮರ್ಥ್ಯವನ್ನು ನೀಡಿ, ಲೋಕದ ಜನತೆಯನ್ನು ಅನುಗ್ರಹಿಸಿ ಮುನ್ನಡೆಸಲು ಅವಕಾಶ ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು ಅರಿಯಬೇಕು. ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬುದೇ ಆಗಿದೆ. ಹೀಗಾಗಿ ಎಲ್ಲ ಧರ್ಮಗಳ ಏಕಮೇವ ಧ್ಯೇಯವು ಸೃಷ್ಟಿಕರ್ತನೇ ಆಗಿದ್ದಾನೆ.

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸಗಿ ಮೂಢನಂಬಿಕೆ, ಬಹುದೇವತೋಪಾಸನೆ ಮುಂತಾದುವನ್ನು ರೂಢಿಸಿಕೊಂಡಿದ್ದರೆ ಸಮಾಜವನ್ನು ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ ವರ್ಣವ್ಯವಸ್ಥೆ, ಜಾತಿ ಪದ್ಧತಿಯನ್ನು ಹುಟ್ಟು ಹಾಕಿ ಪೋಷಿಸುತ್ತ ಬಂದು ಅನೇಕ ಅನಿಷ್ಟ ಪರಿಣಾಮಗಳಿಗೆ ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಧ ಅಂಗವಾದ ಮಹಿಳೆಯರನ್ನು ಒಳಗೊಂಡು ಬಹಳ ಜನರು ದೇವರು-ಧರ್ಮ-ಸಂಸ್ಕಾರ-ಧಾರ್ಮಿಕ ಹಕ್ಕು ; ಇವುಗಳಿಂದ ವಂಚಿತರಾದರು.

ಮಮತೆಯ ಮಕ್ಕಳೇ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವ ಸಮಾಜ ದಾರಿ ತಪ್ಪುತ್ತ ಹೊರಟು, ಮಾನವ ಸಮಾಜವನ್ನು ಅಂದಗೆಡಿಸಿದ್ದನ್ನು ಕಂಡು ನೊಂದ ಕರ್ತನು, ನನ್ನಲ್ಲಿ ಅನುಗ್ರಹ ಇಳಿಸಿ, ಸಮಾಜ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡನು.

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಲಿಂಗದೇವರ ನಿರೂಪಕ್ಕೆ ಮಹಾಪ್ರಸಾದವೆಂದೆನು

ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು. ನಾನು ಆರಂಭಿಸಿದ ಸತ್ಯ ಸ್ಥಾಪನೆಯ ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ, ವರ್ಗ-ಅಂತಸ್ತು, ಮತ-ಪಂಥ, ಬಣ್ಣ-ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು ಕಂಡು ಇವೆಲ್ಲವುಗಳಿಂದ ಹೊರತಾದ "ಗಣಧರ್ಮ"ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು ಹುಟ್ಟಿನಿಂದಲೇ ಲಿಂಗವಂತರಾಗಿರಬಹುದು. ನಿಮ್ಮ ತಾಯಿ ತಂದೆ ಲಿಂಗವಂತರಾದ ಕಾರಣ. ಆದರೆ ಇದು ನನ್ನ ಆಶಯವಲ್ಲ. ಏಕೆಂದರೆ ಹುಟ್ಟಿನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು ಧರ್ಮ. ನೀವು ಸಂಸ್ಕಾರ ಹೊಂದಿ ಧರ್ಮಾಚರಣೆಯಿಂದ ಲಿಂಗವಂತರಾಗಬೇಕೇ ಹೊರತು, ಯಾವ ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗವಂತರು ಎಂದು ಹೇಳಿಕೊಳ್ಳುವುದು ನನಗೆ ಸಮ್ಮತವಾಗದ ವಿಷಯ. ನನ್ನ ತತ್ತ್ವಸಂಹಿತೆ ಯಾವುದೇ ಒಂದು ಜಾತಿ ವರ್ಣಕ್ಕೆ ಸೀಮಿತವಾಗದ 'ಗಣಧರ್ಮ'ವಾದ್ದರಿಂದ ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು.

ಇಂಥ ಸಾಮರಸ್ಯ ಮೂಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.

ಕಾಗೆಯೊಂದಗುಳ ಕಂಡಡೆ
ಕರೆಯದೆ ತನ್ನ ಬಳಗವೆಲ್ಲವ?
ಕೋಳಿ ಒಂದು ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ?
ಶಿವಭಕ್ತನಾಗಿ ಭಕ್ತಿ ಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ.

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ. ಸಂಸ್ಕಾರ ಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರಗಳಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

ಕೌಟುಂಬಿಕ ಪ್ರಾರ್ಥನೆ: ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕವಾಗಿ ಇಷ್ಟಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆಯುವುದೇ ಅಲ್ಲದೆ ಎಲ್ಲರಲ್ಲೂ ಧರ್ಮಶ್ರದ್ಧೆ ಗಾಢವಾಗುವುದು. ದಿನ ನಿತ್ಯ ಸಂಜೆಯ ವೇಳೆಯಲ್ಲಿ ಹತ್ತು ಹದಿನೈದು ನಿಮಿಷ ಕಾಲವಾದರೂ ಮನೆಮಂದಿಯೆಲ್ಲ ಕುಳಿತು, ನೆನಹು ಸಂಜೆಯ ಪ್ರಾರ್ಥನೆ ಮಾಡಿರಿ.

ವಾರದ ಪ್ರಾರ್ಥನೆ : ಸಮುದಾಯ ಜೀವನದ ಶ್ರೇಷ್ಠ ಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವಗೋಷ್ಠಿ ಮಾಡಿರಿ. ಸೃಷ್ಟಿಕರ್ತನನ್ನು ಭಜಿಸಿ ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

ನೆನಹು : ಪ್ರತಿದಿನ ಸಂಜೆ ೭ ಘಂಟೆಗೆ ಸರಿಯಾಗಿ ನೀವು ಎಲ್ಲಿಯೇ ಇದ್ದರೂ ಆ ಸ್ಥಳದಲ್ಲಿ ಐದು ನಿಮಿಷಗಳ ಪ್ರಾರ್ಥನೆಯನ್ನು ವೈಯಕ್ತಿಕವಾಗಿಯಾಗಲಿ ಸಾಮೂಹಿಕವಾಗಿಯಾಗಲಿ ಅಳವಡಿಸಿಕೊಂಡು ತಪ್ಪದೆ ಮಾಡಿರಿ.

ಗಣ ಮೇಳ : ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಾಪಕ್ಕೆ ಎಷ್ಟು ಒತ್ತು ಕೊಟ್ಟಿದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟ ಪಡುತ್ತವೆ. ಆನೆಗಳು ಬಲಿಷ್ಠ ಪ್ರಾಣಿಗಳು, ಆದರೂ ಗುಂಪುಗೂಡಿಯೆ ಬದುಕಲು ಇಷ್ಟಪಡುತ್ತವೆ. ಸಮೂಹವನ್ನು ತೊರೆದ ಮದವೇರಿದ ಸಲಹೆ ಎಷ್ಟು ಉನ್ಮತ್ತವಾಗಿ ವರ್ತಿಸುವುದೋ ಹಾಗೆ ಸಮಾಜದಿಂದ ಬೇರೆಯಾಗುವ ವ್ಯಕ್ತಿ ಸಹ ಪ್ರೇಮಲ ಸ್ವಭಾವವನ್ನು ತೊರೆದು ವಿಕೃತ ಮನಸ್ಕನಾಗುವನು. ಆಯಾ ಊರುಗಳಲ್ಲಿರುವ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವ ಭಾವ ಬೆಳೆಸಿಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ-ಪೂಜೆ ಮಾಡಿರಿ. ಶಿವರಾತ್ರಿಯಂದು ಬೆಳಿಗ್ಗೆ ವಿಶಾಲವಾದ ಮೈದಾನಗಳಲ್ಲಿ ಧರ್ಮಬಾಂಧವರೆಲ್ಲ ಸೇರಿ ಗಣ ಮೇಳದಲ್ಲಿ ಭಾಗಿಗಳಾಗಿರಿ.

ಶರಣ ಮೇಳ : ವ್ಯಕ್ತಿಯು ವೈಯಕ್ತಿಕ ಪೂಜೆ ಮಾಡುವುದು. ಕುಟುಂಬದವರೆಲ್ಲ ಒಂದಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ ನಡೆಯುವುದಾದ್ದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು ಮಾಡುವರು. 'ಗಣ ಮೇಳ'ವು ಆಯಾ ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು

ಒಂದೆಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ, ಮುಂತಾದ ಎಲ್ಲ ಸೀಮೆಗಳನ್ನು ದಾಟಿ ಧಾರ್ಮಿಕ ಸೂತ್ರದ ಮೇಲೆ. ನಮ್ಮ ತತ್ವಾನುಯಾಯಿಗಳನ್ನು ಬೆಸೆಯುವ ಸೂತ್ರವೇ ಶರಣ ಮೇಳ. ಆದ್ದರಿಂದ ನಿಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೂಡಲ ಸಂಗಮಕ್ಕೆ ಧಾವಿಸಿ ಬಂದು ಜನವರಿ ೧೨ ರಿಂದ ೧೪ ರವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೇ ಭಾಗಿಗಳಾಗಿರಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ- ಮಡಿವಾಳ ಮಾಚಯ್ಯ- ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ? ಸಮಾನತೆಯ ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ-ಮಧುವಯ್ಯ -ಶೀಲವಂತರು ಮಾಡಿದ ಪ್ರಾಣಾರ್ಪಣೆ, ಬಲಿದಾನ ನಿಮ್ಮ ಅಂತಃಕರಣವನ್ನು ಕಲಕದೆ?

ಹೆತ್ತ ತಂದೆ ಬಯಸುವುದೇನನ್ನು? ತನ್ನ ಮಕ್ಕಳೆಲ್ಲರೂ ಒಂದೆಡೆ ಸೇರಿ ಹಾಡಿ ಪಾಡಿ ನಲಿಯಬೇಕೆಂದು ತಾನೆ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗುತ್ತದೆ ಎಂದು ನಿಮ್ಮ ಪ್ರಶ್ನೆಯೆ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು, ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ ''ಒಗೆತನವ'' ಮಾಡಬೇಕೆಂಬುದನ್ನು ಕಲಿಸಿ ಕಳಿಸುವರು.

ಷಡಂಗ ದಾಸೋಹ ಮಾಡಿರಿ, ತನು- ಮನ- ಧನ- ಪ್ರಾಣ- ಅಭಿಮಾನ- ಸಮಯ; ಈ ಆರನ್ನೂ ಮೀಸಲಿರಿಸಿ ನಮ್ಮ ತತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ-ಪ್ರತಿಷ್ಠೆ ತೊರೆಯಿರಿ. ಅನುಭವ ಮಂಟಪದ ಮೂಲಕ ನಾವು ಬೋಧಿಸಿದ ಮೌಲ್ಯಗಳು ಅನುಷ್ಠಾನಕ್ಕೆ ಬರದಿರಲು ಪರಸ್ಪರರ ಸ್ವಾರ್ಥ, ಅಹಂಕಾರ- ಪ್ರತಿಷ್ಠೆಗಳೇ ಕಾರಣ ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಬೇಕೆಂದು ನಿರೀಕ್ಷಿಸುವಿರೋ? ಕೂಡದು. ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಆದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೆಯೇ ಶರಣ ಮೇಳದಲ್ಲಿ ವಚನ ವಾಙ್ಮಯ ಗಂಗೆ ಹರಿಯುತ್ತಿರುತ್ತಾಳೆ. ಬನ್ನಿ, ನಿಮ್ಮ ಹೃದಯ- ಮನ- ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ-ನಿಮ್ಮೆಲ್ಲರ ತಂದೆಯಾದ ದೇವನನ್ನು ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ ವಾತ್ಸಲ್ಯಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ- ಬಸವಣ್ಣ
(ಗ್ರಹಿಸಿದವರು -ಬಸವಾತ್ಮಜೆ ಮಾತಾಜಿ)

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ
ಕೇಂದ್ರ ಕಛೇರಿ, ಬೆಂಗಳೂರು

ನಂ. ಕರಾಸಾ:ಕೇಕ:ಬಾ.ವಿ:೧೮೦:೯೩೮ ದಿನಾಂಕ : ೬-೧೨-೧೯೯೬

ಗೆ,
ಸಂಚಾಲಕರು
ಶರಣ ಮೇಳ ಉತ್ಸವ ಸಮಿತಿ
ಮಹಾಮನೆ ಮಹಾಮಠ
ಕೂಡಲಸಂಗಮ ಸುಕ್ಷೇತ್ರ -೫೮೭೧೧೫
ತಾಲೂಕು - ಹುನಗುಂದ
ಜಿಲ್ಲೆ - ಬಿಜಾಪುರ

ಮಾನ್ಯರೇ,

ವಿಷಯ : ೧೯೯೭ನೇ ಜನವರಿ ೧೨ರಿಂದ ೧೪ರವರೆಗೆ ಕೂಡಲಸಂಗಮದ (ಬಿಜಾಪುರ ಜಿಲ್ಲೆ)ದಲ್ಲಿ ಸಮಾವೇಶಗೊಳ್ಳುವ ''ಶರಣ ಮೇಳ''ಕ್ಕೆ ವಿಶೇಷ ಬಸ್ ವ್ಯವಸ್ಥೆ ಮಾಡುವ ಬಗ್ಗೆ.

ಉಲ್ಲೇಖ : ನಿಮ್ಮ ಪತ್ರದ ದಿನಾಂಕ ೧೮ನೇ ನವಂಬರ್ ೧೯೯೬.

ಮೇಲ್ಕಂಡ ಉಲ್ಲೇಖದಲ್ಲಿನ ತಮ್ಮ ಪತ್ರವು ನಮಗೆ ತಲುಪಿದೆ. ತಾವು ಕೋರಿರುವಂತೆ ೧೯೯೭ನೇ ಜನವರಿ ೧೨ರಿಂದ ೧೪ರವರೆವಿಗೂ ಬಿಜಾಪುರ ಜಿಲ್ಲೆಯ ಕೂಡಲಸಂಗಮದಲ್ಲಿ ಸಮಾವೇಶಗೊಳ್ಳುವ ''ಶರಣ ಮೇಳ'' ಉತ್ಸವಕ್ಕೆ ಆಗಮಿಸುವ ಭಕ್ತಾದಿಗಳ ಸಲುವಾಗಿ ರಾಜಧಾನಿಯ ಜಿಲ್ಲಾ ಕೇಂದ್ರಗಳು ಮತ್ತು ಇತರ ಮುಖ್ಯ ಸ್ಥಳಗಳಿಂದ ಕೂಡಲ ಸಂಗಮಕ್ಕೆ ಬರುವ ಪ್ರಯಾಣಿಕರ ಒತ್ತಡಕ್ಕನುಗುಣವಾಗಿ ಹೆಚ್ಚುವರಿ ಬಸ್ಸುಗಳ ಸೌಲಭ್ಯವನ್ನು ಒದಗಿಸುವಂತೆ ನಿಗಮದ ಸಂಬಂಧಪಟ್ಟ ವಿಭಾಗೀಯ ನಿಯಂತ್ರಣಾಧಿಕಾರಿಯವರುಗಳಿಗೆ ಸೂಚನೆ ನೀಡಲಾಗಿದೆಯೆಂದು ತಮಗೆ ತಿಳಿಸಬಯಸುತ್ತೇವೆ.

ವಂದನೆಗಳೊಂದಿಗೆ,

(ದಸ್ತಗೀರ್ ಷರೀಫ್)
ತಮ್ಮ ನಂಬುಗೆಯ
ಉಪಾಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರ ಪರವಾಗಿ

ಪ್ರತಿಯನ್ನು: ಕಾರ್ಯದರ್ಶಿ, ''ಶರಣ ಮೇಳ ಉತ್ಸವ ಸಮಿತಿ'' ಬಸವ ಮಂಟಪ, ೨೦೩೫, ೨೦ನೇ ಮುಖ್ಯ ರಸ್ತೆ, ೨ನೇ ಬ್ಲಾಕ್, ರಾಜಾಜಿನಗರ, ಕಾರ್ಡ್‌ರಸ್ತೆ, ಬೆಂಗಳೂರು ೫೬೦೦೧೦ ಇವರಿಗೆ ಮಾಹಿತಿಗಾಗಿ ಕಳಿಸಲಾಗಿದೆ.

ಪ್ರತಿಯನ್ನು: ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ, ಬಿಜಾಪುರ ಹಾಗೂ ಬಾಗಲಕೋಟೆ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ ಮಾಹಿತಿಗಾಗಿ ರವಾನಿಸುತ್ತ ಪ್ರವಾಸಿಗರಿಗೆ ಅನುಕೂಲವಾಗುವಂತೆ ಅವರ ವಿಭಾಗದ ವ್ಯಾಪ್ತಿಯಲ್ಲಿನ ಮುಖ್ಯ ಸ್ಥಳಗಳಿಂದ ''ಶರಣಮೇಳ ಉತ್ಸವಕ್ಕೆ'' ಒತ್ತಡಕ್ಕನುಗುಣವಾಗಿ ಹೆಚ್ಚುವರಿ ಬಸ್ಸುಗಳ ಸೌಕರ್ಯವನ್ನು ಒದಗಿಸಿ ದೂರುಗಳಿಗೆ ಅವಕಾಶವಾಗದಂತೆ ನೋಡಿಕೊಳ್ಳಲು ಕೋರಲಾಗಿದೆ ಹಾಗೂ ''ಕೂಡಲ ಸಂಗಮ'' ಅಡ್ಡರಸ್ತೆಯಿಂದ ಕೂಡಲಸಂಗಮಕ್ಕೆ ಸಾರಿಗೆ ಒತ್ತಡವನ್ನು ಪೂರೈಸುವ ಬಗ್ಗೆಯೂ ಗಮನ ನೀಡಲು ಮತ್ತು ಈ ಅವಧಿಯಲ್ಲಿ ಎಲ್ಲಾ ಬಸ್ಸುಗಳಿಗೆ ಕೂಡಲಸಂಗಮ ಅಡ್ಡ ರಸ್ತೆಯಲ್ಲಿ ಕೋರಿಕೆ ನಿಲುಗಡೆ ಒದಗಿಸಲು ಕೋರಲಾಗಿದೆ.

ಪ್ರತಿಯನ್ನು: ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ, ಮೈಸೂರು, ಬೆಳಗಾಂ: ಹುಬ್ಬಳ್ಳಿ ಹಾಗೂ ವಿಭಾಗಿಯ ನಿಯಂತ್ರಣಾಧಿಕಾರಿ, ಬೆಂಗಳೂರು ಕೇಂದ್ರ: ಗ್ರಾಮಾಂತರ: ಕೋಲಾರ: ಹಾಸನ: ಮಂಗಳೂರು: ಉತ್ತರ ಕನ್ನಡ: ಶಿರಸಿ: ಗದಗ್: ದಾವಣಗೆರೆ ಅವರ ಕಾರ್ಯಾಚರಣೆ ವ್ಯಾಪ್ತಿಯಿಂದ ಕೂಡಲಸಂಗಮಕ್ಕೆ ಸಾರಿಗೆ ಒತ್ತಡ ಕಂಡು ಬಂದಲ್ಲಿ ಹೆಚ್ಚುವರಿ ಬಸ್ಸುಗಳನ್ನು ಒದಗಿಸುವುದರ ಜೊತೆಗೆ ರಾಷ್ಟ್ರೀಯ ಹೆದ್ದಾರಿ ಸಂಖ್ಯೆ ೧೩ರಲ್ಲಿ ಸಂಚರಿಸುವ ಎಲ್ಲಾ ವಿಭಾಗದ ಬಸ್ಸುಗಳಿಗೆ ಕೂಡಲ ಸಂಗಮ ಅಡ್ಡರಸ್ತೆಯಲ್ಲಿ ಕೋರಿಕೆ ನಿಲುಗಡೆ ಕೊಡಲು ಕೋರಲಾಗಿದೆ.

(ದಸ್ತಗೀರ್ ಷರೀಫ್)
ಮುಖ್ಯ ಸಂಚಾರ ವ್ಯವಸ್ಥಾಪಕರು (ಕಾ) ಪರವಾಗಿ

ಶರಣ ಬಂಧುಗಳೇ,

ಅತ್ಯಂತ ಭಕ್ತಿಪೂರ್ವಕವಾಗಿ ಕುಳಿತಾಗ, ನಿಂತಾಗ, ಎಡವಿದಾಗ, ಭಯಗೊಂಡಾಗ, ಬೆಚ್ಚಿದಾಗ **'ಬಸವಾ' 'ಬಸವಾ ರಕ್ಷಿಸು'** ಎಂದು ೩ ಅಕ್ಷರಗಳನ್ನು ಮಂತ್ರವೆಂಬಂತೆ ನುಡಿಯಬಹುದು. ಆದರೆ ಬಾಕಿ ಸಮಯದಲ್ಲಿ, ಭಾಷಣ ಮಾಡುವಾಗ, ಬರೆಯುವಾಗ, ಚರ್ಚಿಸುವಾಗ, ಧರ್ಮಗುರು ಬಸವಣ್ಣನವರ ಹೆಸರನ್ನು ಏಕವಚನದಲ್ಲಿ ಪ್ರಯೋಗಿಸಬೇಡಿರಿ. ಹೆಸರು ಹೇಳುವಾಗ ವಿಶೇಷಣವನ್ನು ಸೇರಿಸಿ ಹೇಳಿರಿ. ಕೆಲವೊಮ್ಮೆ ಬರೀ ವಿಶೇಷಣಗಳನ್ನೇ ನುಡಿಯಬಹುದು.

ವಿಶ್ವಗುರು ಬಸವಣ್ಣನವರು, ವಿಶ್ವವಿಭೂತಿ ಬಸವಣ್ಣನವರು, ಮಂತ್ರಪುರುಷ ಬಸವಣ್ಣನವರು. ಧರ್ಮಗುರು, ಧರ್ಮಪಿತ, ಧರ್ಮಕರ್ತೃ, ಈ ಪದಗಳನ್ನು ಬರೆದಾಗ ಇವು ಧರ್ಮಪಿತ ಬಸವಣ್ಣನವರನ್ನು ಕುರಿತಾದವು ಎಂಬುದು ಜನರಲ್ಲಿ ಮನವರಿಕೆಯಾಗಬೇಕು. ಈ ಪದಗಳು ಧರ್ಮಗುರು ಬಸವಣ್ಣನವರಿಗೆ ಮಾತ್ರ ಮೀಸಲಾಗಿರಬೇಕು. ಉಳಿದ ಅರೆಬರೆ ಸಾಹಿತಿಗಳಾಗಲೀ, ಧರ್ಮಪಿತರನ್ನು ಕುರಿತು ಶ್ರದ್ಧೆ ಭಕ್ತಿಯಿಲ್ಲದಂಥ ಉಪನ್ಯಾಸಕರುಗಳಾಗಲೀ, ಯಾರಾದರೂ ಅಗೌರವದಿಂದ ಗುರು ಬಸವಣ್ಣನವರನ್ನು ಕುರಿತು ಸಂಬೋಧಿಸಿದರೆ ತಕ್ಷಣವೇ ಪ್ರತಿಭಟಿಸಿರಿ. ಧಾರ್ಮಿಕ ಅನುಯಾಯಿಗಳು ಸದಾ ಗೌರವದಿಂದಲೇ ಧರ್ಮಕರ್ತರ ಹೆಸರನ್ನು ಬಳಸಬೇಕೆಂದು ಸೂಚಿಸುವೆವು.

-ಮಾತಾಜಿ



ಬಸವ ಗಂಗೋತ್ರಿ ನಗರ ಯೋಜನೆ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ ''ಕಲ್ಯಾಣ ನಗರ'' ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ.

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ **''ಬಸವ ಗಂಗೋತ್ರಿ''**ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೇರಿಯ 'ಆರೋವಿಲ್ಲೆ' ರೀತಿಯಲ್ಲಿ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಶರಣ ಬಂಧುಗಳು, ಬಸವ ತತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, ೧೨ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ವನಿಷ್ಠ, ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

೧. ''ಬಸವ ಗಂಗೋತ್ರಿ ನಗರ'' ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'-೪೦' X ೬೦'-ವಿಸ್ತೀರ್ಣ ೨೪೦೦ ಚ.ಅಡಿಗಳು

ವರ್ಗ 'ಬಿ'-೩೦' X ೪೦'-ವಿಸ್ತೀರ್ಣ ೧೨೦೦ ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು

ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

೨. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ೧೦೦೦-೦೦ (ಒಂದು ಸಾವಿರ)ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

೩. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ ''ವಿಶ್ವಕಲ್ಯಾಣ ಮಿಷನ್, ಬೆಂಗಳೂರು'' ಹೆಸರಿಗೆ ೧೦೦-೦೦(ಒಂದುನೂರು) ರೂಗಳನ್ನು ಎಂ.ಓ/ ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ:- ದೂರವಾಣಿ : ೦೮೦-೩೩೨೫೩೩೫

ಶರಣ ಡಿ.ಎಸ್.ವಿಜಯಾನಂದ, ವಿಶ್ವಕಲ್ಯಾಣ ಮಿಷನ್
ಬಸವ ಗಂಗೋತ್ರಿ, ನಗರ, ಯೋಜನೆ , ಬಸವ ಮಂಟಪ, ೨೦೩೫
೨೦ನೆಯ ಮುಖ್ಯರಸ್ತೆ, ೨ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-೫೬೦೦೧೦

ಬಸವ ಗಂಗೋತ್ರಿ ಸ್ಥಳ ನಿರ್ದೇಶನ

ವಿಶ್ವಕಲ್ಯಾಣ ಮಿಷನ್ ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ ೨೧ ಕಿ.ಮೀ. ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು ೨೩೧, ೨೨೭, ೨೨೮, ೨೨೯, ೨೨೬ಬಿ. ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.

ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡಾಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು, ಅಲ್ಲಿಗೆ ಬಸವ ಗಂಗೋತ್ರಿಯು ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ದ್ವಾರವಿದೆ.

ಅಖಂಡ ವಚನ ಪಠಣ ಸಪ್ತಾಹ ಕಾರ್ಯಕ್ರಮ ಪ್ರಾರಂಭೋತ್ಸವ

ದಿ. ೯-೧-೧೯೯೭ ಗುರುವಾರ ಸಮಯ ಬೆಳಿಗ್ಗೆ ೮ ಗಂಟೆ

ಬಸವಣ್ಣ ನಡೆದುದೇ ಮಾರ್ಗ, ನುಡಿದುದೇ ವೇದ
ಭಕ್ತಿಯ ಕುಳವನು ಬಸವಣ್ಣನೇ ಬಲ್ಲನು
ಪ್ರಸಾದದ ನೆಲೆಯನು ಬಸವಣ್ಣನೇ ಬಲ್ಲನು
ಬಸವಣ್ಣ ನಡೆದುದೇ ಮಾರ್ಗ ಅಖಿಳಗಣಂಗಳಿಗೆ
ನುಡಿದುದೇ ವೇದ ಮಹಾಪುರುಷರಿಗೆ -ಶ್ರೀ ಮರುಳ ಶಂಕರದೇವರು

ಬಸವ ಧರ್ಮ ಪೀಠದ ಮಹಾಮನೆಯ ಬಸವ ಮಂಟಪದಲ್ಲಿ ಅಖಂಡ ವಚನ ಪಠಣ ಕಾರ್ಯಕ್ರಮವು ಪ್ರಾರಂಭವಾಗಲಿದ್ದು, ಒಬ್ಬೊಬ್ಬರು ಒಂದು ಗಂಟೆಯ ಕಾಲ ವಚನ ಪಠಣವನ್ನು ಮಾಡಲಿದ್ದಾರೆ. ಪ್ರತಿದಿನ ವಿಶೇಷ ಪೂಜಾನಂತರ ಬೆಳಗಿನ ೬ ಗಂಟೆಗೆ ವಚನ ಪಠಣ ಆರಂಭವಾಗಿ ರಾತ್ರಿ ೧೦ರ ವರೆಗೆ ನಡೆಯುವುದು. ಈ ರೀತಿ ಪಠಣ ಕಾರ್ಯಕ್ರಮವು ಒಂದು ವಾರ ಕಾಲ ನಡೆಯಲಿದ್ದು ಗುರುವಾರ ದಿ.೧೬-೧-೧೯೯೭ ರಂದು ಬೆಳಿಗ್ಗೆ ೮ ಗಂಟೆಗೆ ಮಂಗಳಗೊಳ್ಳಲಿದೆ. ವಚನ ಪಠಣದ ಮಧ್ಯೆ ಶ್ರೀ ಗುರು ಬಸವಲಿಂಗ ಮಂತ್ರ ಪಠಣವೂ ವಿಶೇಷ ಪೂಜೆಯೊಡನೆ ಆಗಾಗ ನಡೆಯುತ್ತದೆ.

ದಿ. ೯-೧-೧೯೯೭ ರಂದು ಬೆಳಿಗ್ಗೆ ೮ ಗಂಟೆಗೆ ಪೀಠಾಧೀಶರಾದ ಪೂಜ್ಯಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ಪ್ರಥಮವಾಗಿ ಪಠಣವನ್ನು ಮಾಡಿ ಸಪ್ತಾಹವನ್ನು ಉದ್ಘಾಟಿಸುವರು. ಮಹಾತೀರ್ಥವನ್ನು ಅಂದು ಸಿದ್ಧಪಡಿಸುತ್ತಿದ್ದು, ಕರುಣಪ್ರಸಾದವನ್ನು ಎಲ್ಲರಿಗೂ ವಿತರಿಸಲಾಗುವುದು.

ಶರಣ ಬಂಧುಗಳಿಗೆ ಸೂಚನೆ

ನಿಯಮ: ಸ್ನಾನ ಮಾಡಿ, ಮಡಿವಸ್ತ್ರಗಳನ್ನುಟ್ಟು, ಅಲ್ಲಿ ಒದಗಿಸುವ ವಿಶೇಷ ಪವಿತ್ರ ಮೇಲುವಸ್ತ್ರವನ್ನು ಹೊದ್ದು ಪಠಣ ಮಾಡಬೇಕು. ವಚನ ಪಠಣವನ್ನು ಒಂದು ಧಾರ್ಮಿಕ ವಿಧಿಯನ್ನಾಗಿ ರೂಪಿಸಿಕೊಳ್ಳಬೇಕು. ಇದಕ್ಕೆ ನೆರವಾಗುವಂತೆ 'ವಚನ ಸಂಗಮ' ಪುಸ್ತಕವು ಕನ್ನಡ, ತೆಲುಗು, ತಮಿಳು, ಮರಾಠಿ ಭಾಷೆಗಳಲ್ಲಿ ದೊರೆಯುತ್ತವೆ.

ಉಚಿತವಾಗಿ ಲಿಂಗದೀಕ್ಷಾ ಕಾರ್ಯಕ್ರಮ

ಬಡತನದ ಕಾರಣದಿಂದ ದೀಕ್ಷೆ ಪಡೆಯಲು ಆಗದೆ ಇರುವ ಭಕ್ತಿವಂತರಿಗೆ ಇಷ್ಟಲಿಂಗ, ವಿಭೂತಿ, ಲಿಂಗವನ್ನು ಧರಿಸಲು ಬಟ್ಟೆಯ ಚೀಲ, ಬಸವ ಭಾವಚಿತ್ರ ಇವನ್ನು ಉಚಿತವಾಗಿ ಕೊಟ್ಟು ದೀಕ್ಷೆ ಮಾಡಲಾಗುವುದು. ಉಚಿತ ದೀಕ್ಷಾ ಕಾರ್ಯಕ್ರಮವು ಪೂಜ್ಯ ಶ್ರೀ ಮಾತೆ ದಾನೇಶ್ವರಿ ಮತ್ತು ಪೂಜ್ಯ ಶ್ರೀ ಮಾತೆ ನೀಲಾಂಬಿಕೆ ಅವರ ನೇತೃತ್ವದಲ್ಲಿ ದಿ. ೧೬-೧-೧೯೯೭ರಂದು ಬೆಳಿಗ್ಗೆ ೯ ಗಂಟೆಗೆ ನಡೆಯುವುದು. ಆಸಕ್ತರು ಕಾರ್ಯಾಲಯದಲ್ಲಿ ಹೆಸರನ್ನು ನೋಂದಾಯಿಸಬಹುದು.

ಉಚಿತ ದೀಕ್ಷಾ ಕಾರ್ಯಕ್ರಮಕ್ಕೆ ಧನ ಸಹಾಯ ಮಾಡಬೇಕು, ದೀಕ್ಷಾರ್ಥಿಗಳಿಗೆ ಸಾಮಗ್ರಿ ಕೊಡಿಸಬೇಕು ಎನ್ನುವ ಧನ ದಾಸೋಹಿಗಳು ಕಾರ್ಯಾಲಯದಲ್ಲಿ ತಮ್ಮ ದೇಣಿಗೆ ನೀಡಿ ರಸೀತಿ ಪಡೆಯಬೇಕು.

ಚಿಂತನಗೋಷ್ಠಿ

ಸ್ಥಳ : ಮಹಾಮನೆ ಮಹಾಮಠ

ದಿ. ೧೨-೧-೧೯೯೭ ಭಾನುವಾರ ಬೆಳಿಗ್ಗೆ ೧೦-೩೦

ಸನ್ನಿಧಿ	:	ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿ
ಬಸವ ಧ್ವಜಾರೋಹಣ	:	ಪೂಜ್ಯಶ್ರೀ ಜಗದ್ಗುರು ಮಾತೆ ಗಂಗಾದೇವಿ
ಆದಿ ಪ್ರಮಥರ ಪೂಜೆ	:	
ಜಂಗಮ ದೀಕ್ಷಾ ಸಮಾರಂಭ	:	
ಚಿಂತನಗೋಷ್ಠಿ	:	

ಶರಣ ಬಂಧುಗಳ ಗಮನಕ್ಕೆ

"*ಪ್ರತಿಜ್ಞಾ ಗೀತೆ*" ಎಂಬ ಒಂದು ಸುಂದರ ಗೀತೆಯನ್ನು ನಾನು ರಚಿಸಿದ್ದು ಅದು ಕನ್ನಡ, ತೆಲುಗು, ಹಿಂದಿ ಭಾಷೆಗಳಲ್ಲಿ ತರ್ಜುಮೆಗೊಂಡು ಪ್ರಸಿದ್ಧವಾಗಿದೆ. ಸಂಕಲ್ಪ ಗೀತೆ, '*ಕರ್ತನ ಸೃಷ್ಟಿ*' ನಂತರ '*ಹೇ ಶರಣ ಬಂಧುಗಳೇ*' ಎಂಬ ಧ್ವಜಾರೋಹಣ ಗೀತೆ ಹಾಡುತ್ತೇವೆ. "ಬಸವ ಭಕ್ತರು ನಾವು ಬಸವ ಭಕ್ತರು" ಎಂಬುದು ಪ್ರತಿಜ್ಞಾಗೀತೆ. ಅದು ಅತ್ಯಂತ ಅರ್ಥಗರ್ಭಿತವಾದ ವಾಕ್ಯಗಳಿಂದ ಕೂಡಿ ಬಹಳ ಪರಿಣಾಮಕಾರಿಯೂ, ಸ್ಫೂರ್ತಿ ತುಂಬುವಂತಹದು ಆಗಿದೆ ಎಂಬುದು ನಮಗೆ ನಿಮಗೆ ಎಲ್ಲರಿಗೆ ಮನವರಿಕೆಯಾಗಿದೆ.

ಧರ್ಮಪಿತರು ಹೇಳುತ್ತಾರೆ :

ಮಾತಿನಲ್ಲಿ ಶ್ರೋತ್ರಸುಖವ ನುಡಿಯಬಹುದಲ್ಲದೆ
ಮಾಡುವ ಕ್ರಿಯೆಯಿಂದ ಭಕ್ತನೆನಿಸಲು ಬಾರದು (ಬ.ವ.ದೀ.೩೨೧)

ಕೆಲವು ಮಾತುಗಳು ನುಡಿಯಲು, ಹಾಡಲು ಪರಿಣಾಮಕಾರಿಯಾಗಿರುತ್ತವೆ. ನಡೆಯಲು ತುಂಬಾ ಕಠಿಣತಮವಾಗಿರುತ್ತವೆ. ಆದ್ದರಿಂದ "*ಬಸವ ವಚನ ದೀಪ್ತಿ*"ಯ ಪ್ರಸಂಗದಲ್ಲಿ ಕೆಲವರು ತಳೆದ ನಿಲುವು ಕಂಡಮೇಲೆ ಯಾಂತ್ರಿಕವಾಗಿ ಪ್ರತಿಜ್ಞಾರೂಪದಲ್ಲಿ ಈ ಗೀತೆಯನ್ನು ಎಲ್ಲರೂ ಹಾಡುತ್ತಾರೆ. ತಾವು ಪ್ರತಿಜ್ಞಾಬದ್ಧರಾಗಿರುವುದನ್ನು ಮರೆತು ಬಿಡುತ್ತಾರೆ. ಇದರಿಂದ ನುಡಿ-ನಡೆಯಲ್ಲಿ ಕಂದರವು ಉಂಟಾಗುತ್ತದೆ ಎನ್ನುವ ಭಾವ ಬಂದಿದೆ. ವಿನಾಕಾರಣ ಅವರಿಗೆ ಅರಿಯದೆ ಅವರು ತಪ್ಪು ಮಾಡುವಂತೆ ಆಗುತ್ತದೆ. "ನುಡಿಯಲ್ಲಿ ಎಚ್ಚೆತ್ತು, ನಡೆಯಲ್ಲಿ ತಪ್ಪಿದರೆ *ಹಿಡಿದಿರ್ದ ಲಿಂಗವೆ ಘಟಸರ್ಪವಯ್ಯ!* " ಎಂಬ ಧರ್ಮಪಿತರ ಮಾತು ಈ ಬಗ್ಗೆ ಎಚ್ಚರಿಕೆ ನೀಡುತ್ತದೆ. ಆದ್ದರಿಂದ,

"ಬಸವ ಭಕ್ತರು ನಾನು ಬಸವ ಭಕ್ತರು
ತತ್ತ್ವನಿಷ್ಠರು ನಾವು ತತ್ತ್ವನಿಷ್ಠರು"

ಎಂಬ ವಾಕ್ಯದಲ್ಲಿ '*ತತ್ತ್ವನಿಷ್ಠರು*' ಎಂಬ ಪದವನ್ನು ತೆಗೆದು ಬೇರೆ ಏನಾದರೂ ಸೌಮ್ಯವಾದ, ಆಚರಿಸಲು ಸುಲಭವಾದ ಭಾವ ನೀಡುವ ಪದ ಸೇರಿಸುವ ಆಲೋಚನೆ ಬಂದಿದೆ.

ಅದೇ ರೀತಿ, "*ಬಸವ ಧರ್ಮ ಪೀಠದ ಆದೇಶದಂತೆ ನಡೆವೆವು*" ಎಂಬ ವಾಕ್ಯವನ್ನು ಬದಲಿಸುವ ಆಲೋಚನೆ ಬಂದಿದೆ. ಆದ್ದರಿಂದ ಕಲ್ಯಾಣ ಕಿರಣದ ಓದುಗರು ತಮ್ಮ ಸಲಹೆ ಸೂಚನೆ ನೀಡಲು ಕೋರಲಾಗಿದೆ.

೧. ಈ ಪದ/ವಾಕ್ಯ ಬದಲಿಸುವುದು ಒಳ್ಳೆಯದೊ? ಅಥವಾ ಜನರನ್ನು ಅದರೊಳಗಣ ತಾತ್ತ್ವಿಕ ಭಾವ ಅಳವಡಿಸಿಕೊಳ್ಳುವಂತೆ ಗಟ್ಟಿಗೊಳಿಸುವ ತರಬೇತಿ ನೀಡುವುದು ಒಳ್ಳೆಯದೋ?

೨. ಪದ/ವಾಕ್ಯ ಬದಲಿಸುವುದೇ ಸುಲಭದ ಕೆಲಸ ಎನ್ನುವುದಾದರೆ ಯಾವ ಪದವನ್ನು "*ತತ್ತ್ವನಿಷ್ಠರು*" ಎಂಬುದರ ಬದಲಿಗೆ ಇಡಬಹುದು? "*ಬಸವ ಧರ್ಮ ಪೀಠದ ಆದೇಶದಂತೆ ನಡೆವೆವು*" ಎಂಬುದರ ಬದಲಿಗೆ ಯಾವ ವಾಕ್ಯ ಇಡಬಹುದು? ಇದನ್ನು ಬರೆದು ಕಳಿಸಿರಿ. ಓದುಗರಿಂದ ಬಂದ ವಾಕ್ಯ/ಪದಗಳಿಂದ ಆಯ್ದು ಮುಂದೆ ಮುದ್ರಿಸಲಾಗುವುದು.

ಪಾದ ನಮಸ್ಕಾರ ನಿಷೇಧದ ಬಗ್ಗೆ ಚಿಂತನಗೋಷ್ಠಿಯಲ್ಲಿ ಚರ್ಚೆ

ದಿ. ೧೩-೧-೧೯೯೬ರಂದು ಬಸವ ಧರ್ಮದ ಮಹಾಜಗದ್ಗುರು ಪೀಠಾರೋಹಣದ ನಂತರ, ಪ್ರಗತಿಪರ ವೈಜ್ಞಾನಿಕ ಯುಗದಲ್ಲಿ ಪಾದಪೂಜೆ/ಪಾದೋದಕ ಸ್ವೀಕಾರ ಅಗತ್ಯವಿದೆಯೆ? ಮತ್ತು ಪಾದ ನಮಸ್ಕಾರ ನಿಷೇಧ ಕುರಿತು ಘೋಷಣೆ ಮಾಡಿದ್ದೆ. ಆ ಬಗ್ಗೆ ಒಂದು ಪುಸ್ತಕ ಸಹ ಬಿಡುಗಡೆ ಮಾಡಲಾಗಿದೆ. ಬೆಲೆ : ೫-೫೦ ಅಂಚೆ ವೆಚ್ಚ ಸೇರಿ.

ನಂತರ ಚರ್ಚೆಮಾಡಲು ಅವಕಾಶ ಸಿಗಲಿಲ್ಲ. ದಿ.೧೨-೧-೯೬ರಂದು ಪೂಜ್ಯ ಲಿಂಗೈಕ್ಯ ಅಪ್ಪಾಜಿಯವರ ಸಂಸ್ಮರಣಾ ಕಾರ್ಯಕ್ರಮ ಮತ್ತು ಚಿಂತನಗೋಷ್ಠಿಯ ಕೆಲವು ಕಾರ್ಯಕ್ರಮಗಳಿಗೆ ಸಮಯ ಮುಗಿದು ಹೋಯಿತು. ಆ ನಂತರ ಕೆಲವರು ಪಾದ ನಮಸ್ಕಾರ ಬಿಟ್ಟು "*ಶರಣು ಶರಣಾರ್ಥಿ*"ಗೆ ಬದ್ಧರಾಗಿದ್ದಾರೆ ಮತ್ತೆ ಕೆಲವರು "ಗುರುವಿಗೆ ಶಿಷ್ಯರು/ಭಕ್ತರು ತೋರಿಸುವ ಕೃತಜ್ಞತೆ ಇದು; ಆದ್ದರಿಂದ ಈ ಪದ್ಧತಿ ಬಿಡಿಸುವುದು ಬೇಡ" ಎನ್ನುತ್ತಿದ್ದಾರೆ. ಆದ್ದರಿಂದ ದಿ.೧೨-೧-೧೯೯೭ರ ಚಿಂತನಗೋಷ್ಠಿಯಲ್ಲಿ ಈ ಬಗ್ಗೆ ಚರ್ಚೆ ಇಟ್ಟು, ಅಭಿಪ್ರಾಯವನ್ನು ಸಂಗ್ರಹಿಸಲಾಗುವುದು. ಅಷ್ಟರಲ್ಲಿ ಪಾದನಮಸ್ಕಾರ ನಿಷೇಧ ಪುಸ್ತಕ ತರಿಸಿಕೊಂಡು ಓದಿ ಸಿದ್ಧರಾಗಿ ಬನ್ನಿರಿ.

(ಕಳೆದ ಸಂಚಿಕೆಯಲ್ಲಿ ಪ್ರಕಟಣೆ ನೋಡಿ ಅಭಿಪ್ರಾಯ ತಿಳಿಸಿದವರು ಪುನಃ ಬರೆಯಬೇಕಿಲ್ಲ)

ಅವರಿವರೆನ್ನದೆ ಚರಣಕ್ಕೆರಗಲು ಅಯ್ಯತನವೇರಿ
ಬೆಬ್ಬನೆ ಬಿರಿವೆ ನಾನು, ಕೆಚ್ಚು ಬೆಳೆಯಿತ್ತಯ್ಯ
ಆ ಕೆಚ್ಚಿಂಗೆ ಕಿಚ್ಚನಿಕ್ಕಿ ಸುಟ್ಟು ಬೆಳ್ಳುಕನ ಮಾಡಿ
ಬೆಳುಗಾರನಂತೆ ಮಾಡು ಲಿಂಗದೇವಾ - *ಬ.ವ.ದೀ. ೨೫೫*

ಬಸವ ಧರ್ಮದ ಮಹಾಜಗದ್ಗುರು ಪೀಠದ ಆರನೆಯ ಪೀಠಾರೋಹಣೋತ್ಸವ

ಬಸವ ಶಕೆ ೮೬೩ ಸಂಜೆ ೫-೦೦

ಭಾನುವಾರ ದಿ.೧೨-೧-೧೯೯೭ ಸ್ಥಳ : ಮಹಾಮನೆ ಮಹಾಮಠ

ಬಸವ ಪೀಠವು ಎದ್ದು ಒಸೆದು ನಾಣ್ಯವು ಹುಟ್ಟಿ
ಬಸವನ ಮುದ್ರೆ ಮೆರೆದಾವು । ಧರೆಯವಗೆ
ವಶವಾಗದಿಹುದೆ ಸರ್ವಜ್ಞ?

ಧರ್ಮಪಿತ ಶ್ರೀ ಗುರುಬಸವ ತಂದೆಯ ದಿವ್ಯ ಪ್ರೇರಣೆಯಂತೆ ಅವರು ಐಕ್ಯರಾದ ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ ಬಸವ ಧರ್ಮದ ಮಹಾಜಗದ್ಗುರ ಪೀಠವನ್ನು ಬಸವ ಶಕೆ ೮೫೮, ಸೋಮವಾರ ೧೩-೧-೧೯೯೨ರಂದು ಸಂಸ್ಥಾಪನೆ ಮಾಡಲಾಯಿತು. ಇದರ ಉದ್ದೇಶ, ಬಸವ ತತ್ತ್ವದ ಪ್ರಚಾರ, ಸಮಾನತೆಯ ಪ್ರತಿಪಾದನೆ, ಜಾತಿ ವರ್ಣ ವರ್ಗ ಭೇದವಿಲ್ಲದೆ ಎಲ್ಲ ಮಾನವರ ಹಕ್ಕುಗಳನ್ನು ರಕ್ಷಿಸುವುದು; ಧರ್ಮನಿಷ್ಠೆ-ರಾಷ್ಟ್ರ ಪ್ರೇಮಗಳನ್ನು ಜನರಲ್ಲಿ ಬೆಳೆಸುವುದು, ಸಕಲ ಜೀವಾವಳಿಗೆ ಲೇಸನ್ನೇ ಬಯಸಿ, ಮರ್ತ್ಯಲೋಕದ ಈ ಕರ್ತನ ಕಮ್ಮಟದಲ್ಲಿ ಕಲ್ಯಾಣ ರಾಜ್ಯವನ್ನು ಕಟ್ಟುವುದು.

ಇಂತಹ ಧರ್ಮಪೀಠವನ್ನು ಅಪೂರ್ವ ವಾಗ್ಮಿಗಳು, ಕ್ರಾಂತಿಕಾರಿ ಧರ್ಮ ಪ್ರಸಾರಕರು, ಬಸವ ಯುಗ ನಿರ್ಮಾಪಕರೂ ಆದ

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳು

ಪ್ರಥಮ ಪೀಠಾಧೀಶರಾಗಿ ಆರೋಹಣ ಮಾಡಿ ಅಪಾರ ಕಾರ್ಯ ಸಾಧನೆಗೈದು, ದಿ.೩೦-೬-೧೯೯೫ ರಂದು ಲಿಂಗೈಕ್ಯರಾಗಿ ಕ್ರಿಯಾವಿಶ್ರಾಂತಿಯನ್ನು ಹೊಂದಿದರು. ಪೂಜ್ಯ ಮಹಾಜಗದ್ಗುರುಗಳ ಸದಿಚ್ಛೆಯಂತೆ ಧಾರವಾಡದ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠದ ಪ್ರಥಮ ಮಹಿಳಾ ಜಗದ್ಗುರುವಾದ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು

ಬಸವ ಧರ್ಮದ ಮಹಾಜಗದ್ಗುರು ಪೀಠದ ಎರಡನೆಯ ಅಧಿಕಾರಿಯಾಗಿ ಬಸವ ಶಕೆ ೮೬೨, ಶನಿವಾರ ದಿ.೧೩-೧-೧೯೯೬ ರಂದು ಬೆಳಿಗೆ ೧೦-೩೦ಕ್ಕೆ ಸತ್ ಸಂಕಲ್ಪದೊಡನೆ ಬಸವ ಧ್ವಜಾರೋಹಣ ಮಾಡಿ ಪೀಠಾರೋಹಣ ಮಾಡಿದ್ದಾರೆ. ಪೀಠ ಸ್ಥಾಪನೆಯ ೬ನೆಯ ಉತ್ಸವವನ್ನು ಆಚರಿಸಲಾಗುತ್ತಿದೆ.

ಕಾರ್ಯಕ್ರಮ ನಿರ್ವಹಣೆ	:	ಪೂಜ್ಯಶ್ರೀ ಜಗದ್ಗುರು ಮಾತೆ ಗಂಗಾದೇವಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ, ಧಾರವಾಡ
ಗುರುವಂದನೆ	:	ಶರಣ. ಎನ್. ಪುಟ್ಟರುದ್ರಪ್ಪ ಅಧ್ಯಕ್ಷರು, ಲಿಂಗಾಯತ ಧರ್ಮ ಮಹಾಸಭಾ, ಬೆಂಗಳೂರು ಶರಣ. ಬಿ. ಜಿ ಹೊಸಗೌಡರು ಅಧ್ಯಕ್ಷರು, ರಾಷ್ಟ್ರೀಯ ಬಸವ ದಳ, ರಾಷ್ಟ್ರ ಸಮಿತಿ

ಪೀಠಾರೋಹಣದಲ್ಲಿ ಮಾಲಾರ್ಪಣೆಗೆ ಅವಕಾಶವಿಲ್ಲ.

"ಅಪಾರ ಸದ್ಭಕ್ತರು, ಸಹೃದಯರೂ ಮಾಲಾರ್ಪಣೆಗಾಗಿ ಹಾತೊರೆಯುತ್ತಾರೆ. ಸುಮಾರು ಒಂದು ಗಂಟೆ (ಕಳೆದ ವರ್ಷ ಒಂದೂವರೆ ಗಂಟೆ ಹಿಡಿಯಿತು) ಇದರಲ್ಲೇ ಸಮಯಹರಣವಾಗುತ್ತದೆ. ಜನರು ಬಂದು, ಇದ್ದು, ಹೋಗುವ ಗಳಿಗೆಗಳ ಸದುಪಯೋಗವಾಗಬೇಕು." ಎಂಬ ಉದ್ದೇಶದಿಂದ ಪೂಜ್ಯ ಮಾತಾಜಿಯವರು ಔಪಚಾರಿಕವಾಗಿ ಒಂದು ಮಾಲೆ ಹಾಕಿದರೆ ಸಾಕು, ಎಂದು ಆದೇಶಿಸಿದ್ದಾರೆ. ಆದ್ದರಿಂದ ಸಾರ್ವಜನಿಕರು, ಸದ್ಭಕ್ತರು ಮಾಲಾರ್ಪಣೆ ಮಾಡಲು ಒತ್ತಾಯಿಸಬಾರದು, ಅದೇ ಹಣವನ್ನು ಗುರುಕಾಣಿಕೆಯಾಗಿ ಬಿಂದಿಗೆಯಲ್ಲಿ ನೀಡಿರಿ ಮತ್ತು ಅದೇ ಸಮಯವನ್ನು ಪೂಜ್ಯ ಮಾತಾಜಿಯವರ ಶ್ರೀಮುಖದಿಂದ ಬರುವ ಅಮೃತ ಸಂದೇಶವನ್ನು ಕೇಳಲು ಸದ್ವಿನಿಯೋಗ ಮಾಡಬೇಕೆಂದು ಕೋರುತ್ತೇವೆ.

-ಶ್ರೀ ಚನ್ನಬಸವರಾಜ ಸ್ವಾಮಿಗಳು
ಸಂಚಾಲಕರು, ಪೀಠಾರೋಹಣೋತ್ಸವ ಸಮಿತಿ

ಹತ್ತನೆಯ ಶರಣ ಮೇಳ ಉದ್ಘಾಟನೆ

ಸೋಮವಾರ ದಿ. ೧೩-೧-೧೯೯೭ ಬೆಳಿಗ್ಗೆ ೧೦-೩೦

ಪೂಜ್ಯಶ್ರೀ ವಿಶ್ವಗುರು ಬಸವಣ್ಣನವರು ಲಿಂಗೈಕ್ಯರಾಗಿ ಸರಿಯಾಗಿ ೮೦೦ ವರ್ಷಗಳು ಪೂರೈಸುತ್ತಿರುವ ಸನ್ನಿವೇಶದಲ್ಲಿ ಹತ್ತನೆಯ ಶರಣ ಮೇಳವು ಒದಗಿ ಬಂದಿದ್ದು, ದಿ.೧೩-೧-೧೯೯೭ ರಂದು ಬೆಳಿಗ್ಗೆ ಉದ್ಘಾಟನೆಗೊಳ್ಳುವುದು. ವಿಶೇಷ ವಿವರಗಳನ್ನು ನಂತರ ಪ್ರಕಟಿಸಲಾಗುವುದು.

ಧರ್ಮಚಿಂತನಗೋಷ್ಠಿ

ಸೋಮವಾರ ದಿ.೧೩-೧-೧೯೯೭ ಸಂಜೆ ೫-೦೦ಗಂಟೆಗೆ

ವಿವಿಧ ಮಹಾನುಭಾವರು ಗೋಷ್ಠಿಯನ್ನುದ್ದೇಶಿಸಿ ಮಾತನಾಡಲಿದ್ದಾರೆ.

ಚಿಂತನ-ಮಂಥನ (ರಸ ಪ್ರಶ್ನೆ)

ಮಹಾಮನೆ ಮಹಾಮಠದ ಆವರಣದಲ್ಲಿ ಪ್ರತಿ ದಿವಸ ರಾತ್ರಿ ೧೦ರಿಂದ ರಸ ಪ್ರಶ್ನೆ ಕಾರ್ಯಕ್ರಮದ ಮೂಲಕ ಧಾರ್ಮಿಕ ಚಿಂತನ ಮಂಥನ ನಡೆಸಲಾಗುವುದು. ಇದು ದಿ.೧೨-೧-೧೯೯೭ ರ ರಾತ್ರಿಯಿಂದಲೇ ಪ್ರಾರಂಭವಾಗುವುದು. ದಿ.೧೨,೧೩,೧೪ ರ ರಾತ್ರಿ ನಡೆಸಿ, ದಿ.೧೫-೧-೧೯೯೭ ರಂದು ಬಹುಮಾನ ವಿತರಣೆ ಇರುವುದು.

ಬೇರೆ ಬೇರೆ ರಾಷ್ಟ್ರೀಯ ಬಸವ ದಳಗಳವರು ತಂಡಗಳಲ್ಲಿ ಈ ರಸಪ್ರಶ್ನೆಯಲ್ಲಿ ಭಾಗವಹಿಸಬಹುದು. ಒಂದು, ಎರಡು, ಮೂರು ಹೀಗೆ ಮೂರು ಬಹುಮಾನಗಳನ್ನು ಕೊಡಲಾಗುವುದು. ತಂಡಕ್ಕೆ ಅಲ್ಲದೆ ವೈಯಕ್ತಿಕವಾಗಿಯೂ ಈ ಬಹುಮಾನ ಹೊಂದುವ ಸಾಧ್ಯತೆ ಇದೆ. ವಚನ ಸಾಹಿತ್ಯಕ್ಕೆ ಸಂಬಂಧಿಸಿ ಈ ರಸಪ್ರಶ್ನೆ ಇರುತ್ತದೆ. ಪ್ರವೇಶ ಶುಲ್ಕ ಒಬ್ಬರಿಗೆ ೫ ರೂ. ಒಮ್ಮೆ ೫ ರೂ ಕೊಟ್ಟು ಒಂದು ಪ್ರವೇಶ ಪತ್ರ ಪಡೆದರೆ ಅವರು ಕಡೆಯವರೆಗೂ ಸ್ಪರ್ಧೆಗಳಲ್ಲಿ ಭಾಗವಹಿಸಬಹುದು.

ಗಣಲಿಂಗದರ್ಶನ

ಮಂಗಳವಾರ ದಿ.೧೪-೧-೧೯೯೭ ಬೆಳಿಗ್ಗೆ ೮-೦೦

ವಿಶ್ವಗುರು ಬಸವಣ್ಣನವರು ಪ್ರತಿಪಾದಿಸಿದ ಜೀವನದ ಸರ್ವಾಂಗೀಣ ಉನ್ನತಿಗೆ ಬೇಕಾದ ಹಲವಾರು ತತ್ತ್ವಗಳಲ್ಲಿ ಮುಖ್ಯವಾದವು ಏಕದೇವೋಪಾಸನೆ ಮತ್ತು ಸಮಾನತೆ. ಧರ್ಮಪಿತ ಶ್ರೀ ಗುರುಬಸವಣ್ಣನವರು ಏಕೇಶ್ವರವಾದ ಅಂದರೆ ದೇವನು ಒಬ್ಬನೇ ಎಂದು ನಂಬುವುದು ಮಾತ್ರವಲ್ಲ ಒಬ್ಬ ದೇವನನ್ನು ವಿಶ್ವದಾಕಾರದಲ್ಲಿ ಪೂಜಿಸುವ ಏಕದೇವ ಉಪಾಸನೆಯನ್ನು ಸಹ ಬೋಧಿಸಿದರು ಮತ್ತು ಪೂಜಿಸಲಿಕ್ಕೆ ವಿಶ್ವಚೈತನ್ಯದ ಕುರುಹಾಗಿ ಇಷ್ಟಲಿಂಗವನ್ನು ಸಾಕಾರಗೊಳಿಸಿಕೊಟ್ಟರು. ಅಂಥ ಶ್ರೇಷ್ಠ ಕೊಡುಗೆಯಾಗಿ ಇಷ್ಟಲಿಂಗವು ಇದ್ದರೂ ಲಿಂಗಾಯತ ಧರ್ಮೀಯರು ಬಹುದೇವತೋಪಾಸಕರಾಗಿ ಮೂಢ ನಂಬಿಕೆಗಳ ಆಗರವಾಗಿದ್ದಾರೆ. ಪರಮಾತ್ಮನ ಸಂಕಲ್ಪದಂತೆ ಇಳೆಗಿಳಿದು ಬಂದ ದೇವ ಪ್ರತಿನಿಧಿ ಬಸವ ಗುರುವಿನ ಮಹಾನ್ ತತ್ತ್ವದ ಪ್ರತಿನಿಧಿಗಳಾಗಿ, ಜೀವಂತವಾಗಿ ಬದುಕಬೇಕಾಗಿದ್ದ ಇವರು 'ಬಸವ' ಗುರುವಿನ ತತ್ತ್ವದಿಂದ ದೂರವಾಗಿದ್ದಾರೆ. ಆದ್ದರಿಂದ ನಾವಿಂದು ಒಂದು ಜೀವಂತ ಬಸವ ಸಂತಾನವನ್ನು ನಿರ್ಜೀವ ಮಾನವ ಜನಾಂಗದ ಒಳಗಿನಿಂದ ಎಬ್ಬಿಸಬೇಕಾಗಿದೆ; ಸಂಘಟಿಸಬೇಕಾಗಿದೆ. ಬಸವ ಗುರುವಿಗೆ ಶರಣಾಗುವ ಮೂಲಕ ಆಗಮಿಸುವ ಈ ಶರಣ ಸಂತಾನವು ದೇವರ ರಾಜ್ಯದ ಪ್ರಜೆಗಳಾಗಿ ಮರ್ತ್ಯಲೋಕದಲ್ಲಿ ಶಾಂತಿ-ಸ್ನೇಹ-ಪ್ರೇಮ-ಸಮತೆಗಳನ್ನು ಬೋಧಿಸಿ ಕಲ್ಯಾಣ (ದೈವೀ) ರಾಜ್ಯವನ್ನು ಕಟ್ಟಬೇಕಾಗಿದೆ. ಈ ಸಂಕಲ್ಪದೊಡನೆ

ಬಸವ ಗುರುವಿನ ತತ್ತ್ವ ಲೋಕದಿ ಹಬ್ಬಲಿ
ಮನುಜ ಕಲ್ಪಿತ ಜಾತಿ ಹೆರೆ ತೊಲಗಿ ಹೋಗಲಿ
ವಿಶ್ವ ಮಾನವ ಪ್ರೀತಿ ಹೊನಲಾಗಿ ಹರಿಯಲಿ
ಸೃಷ್ಟಿಕರ್ತನ ಕರುಣೆ ಎಮ್ಮ ಕಾಪಾಡಲಿ

ಎಂಬ ಸಂಕಲ್ಪದೊಡನೆ, ಬಸವ ಧರ್ಮೀಯರು ಶ್ರೀ ಗುರುಬಸವಣ್ಣನವರಿಗೆ, ಲಿಂಗದೇವನಿಗೆ, ಶರಣ ಗಣಕ್ಕೆ ಶರಣಾಗಿ, ಕರುಣ ಪ್ರಸಾದ ಸ್ವೀಕರಿಸಿ ಗಣ ಪದವಿಯನ್ನು ಹೊಂದಬೇಕಾಗಿದೆ. ಕೆಲವರಾದರೂ ಸ್ವಯಂ ಇಚ್ಛೆಯಿಂದ ಏಕದೇವೋಪಾಸಕರು - ಏಕ ಗುರೂಪಾಸಕರು ಆಗಿ ಪ್ರತಿಜ್ಞಾಬದ್ಧರಾಗಬೇಕಾಗಿದೆ. ಇದು ಕಡ್ಡಾಯವಲ್ಲ ಐಚ್ಛಿಕ, ತತ್ತ್ವನಿಷ್ಠರಿಗೆ ಮಾತ್ರ ಅವಕಾಶ ಉಂಟು. ವಿವರಗಳು ಹೀಗಿವೆ.

ಗಣಲಿಂಗ ದರ್ಶನ ಮತ್ತು ಪ್ರತಿಜ್ಞಾವಿಧಿ

ಶರಣ ಮೇಳ ಯಾತ್ರಾರ್ಥಿಯ ಪವಿತ್ರ ವಿಧಿ ''ಗಣಲಿಂಗದರ್ಶನ ''. ಪ್ರತಿಯೊಬ್ಬ ಲಿಂಗಾಯತನೂ ತನ್ನ ಜೀವಮಾನದಲ್ಲಿ ಕನಿಷ್ಠ ಪಕ್ಷ ಒಮ್ಮೆಯಾದರೂ ಧರ್ಮಕ್ಷೇತ್ರ ಕೂಡಲ ಸಂಗಮಕ್ಕೆ ಆಗಮಿಸಿ, ಗಣಲಿಂಗದ ಮೇಲೆ ಪ್ರತಿಫಲನಗೊಂಡ ಜ್ಯೋತಿರ್ಬಿಂದುವಿನ ದರ್ಶನ ಮಾಡಿ ತನ್ನ ಧಾರ್ಮಿಕ ಅನುಯಾಯಿತ್ವವನ್ನು ಸ್ಥಿರೀಕರಿಸಬೇಕು. ಹೀಗೆ ಗಣಲಿಂಗ ದರ್ಶನ ಎಲ್ಲರಿಗೂ ಲಭ್ಯ. ಆದರೆ ಗಣಲಿಂಗದ ಸಮೀಪಕ್ಕೆ ಹೋಗಿ, ಅದನ್ನು ಸ್ಪರ್ಶಿಸಲು ಏಕದೇವೋಪಾಸಕರಾಗುವ ಪ್ರತಿಜ್ಞೆ ಮಾಡುವವರಿಗೆ ಮಾತ್ರ ಸಾಧ್ಯ. ಆದ್ದರಿಂದ ತತ್ತ್ವನಿಷ್ಠರೂ ಏಕದೇವೋಪಾಸಕರಾಗಬಯಸುವವರು ಐಚ್ಛಿಕ (Optional) ವಿಧಿಯನ್ನಾಗಿ ಇದನ್ನು ಪಾಲಿಸಬೇಕು.

ಬಸವ ಧರ್ಮ ಸಂಸ್ಥಾಪನಾ ದಿನಾಚರಣೆ

ಧರ್ಮಪಿತ ಬಸವಣ್ಣನವರ ಜೀವನದಲ್ಲಿ ಯುವನಾಮ ಸಂವತ್ಸರವು ಬಲು ಮಹತ್ವಪೂರ್ಣ. ಅಲ್ಲಿಗೆ ಮೂರೇಳು (೨೧)ವಯಸ್ಸಿನ ತರುಣರಾಗಿದ್ದ ಧರ್ಮಕರ್ತರ ಹೃನ್ಮನ ಬುದ್ಧಿಗಳಲ್ಲಿ ಸ್ವತಂತ್ರ ಧರ್ಮವೊಂದರ ನೀಲನಕ್ಷೆ ಮೂಡಿತ್ತು. ಯುವ ನಾಮ ಸಂವತ್ಸರದ (೧೧೫೫) ಪುಷ್ಯಮಾಸದ ಮಕರ ಸಂಕ್ರಾಂತಿಯಂದು (ದಿ.೧೪-೧-೧೧೫೫)ಅವರ ಜೀವನವು ಮಹತ್ವದ ತಿರುವು ಪಡೆದುಕೊಂಡ ದಿನ. ಅದು ಬಸವ ಕ್ರಾಂತಿ ದಿನವೂ ಅಹುದು.

ಬಸವ ಧರ್ಮ ಸಂಸ್ಥಾಪನಾ ದಿನವೂ ಅಹುದು. ಪುರೋಹಿತಶಾಹಿ ಗುಡಿಶಾಹಿಯನ್ನು ಪ್ರತಿಭಟಿಸಿ ಜನ ಸಾಮಾನ್ಯರನ್ನು ದೇವಾಲಯದೊಳಗೆ ಕರೆದೊಯ್ದು ಪೂಜೆ ಮಾಡಿಸಿದ ದಿನವೂ ಅಹುದು. ದೇವಾಸಾಕ್ಷಾತ್ಕಾರ ಹೊಂದಿ ಇಷ್ಟಲಿಂಗದ ಪರಿಕಲ್ಪನೆ ನೀಡಿದ ದಿನವೂ ಅಹುದು. ಅಂಥ ಪವಿತ್ರ ದಿನದಂದು ಶರಣ ಮೇಳದ ಯಾತ್ರಿಯು ಕೆಲವು ಪವಿತ್ರ ವಿಧಿಗಳನ್ನು ಪೂರೈಸಬೇಕು. ಕರ್ತವ್ಯ ನಿರ್ವಹಿಸಬೇಕು.

೧. ಧ್ವಜಾರೋಹಣ-ಗುರುವಂದನ	೨. ಗಣಲಿಂಗ- ದರ್ಶನ ಮತ್ತು ಸ್ಪರ್ಶನ
೩. ಪಥ ಸಂಚಲನ	೪. ಶರಣ-ಸಂಗಮ ಸಮುದಾಯ ಪ್ರಾರ್ಥನೆ
೫. ಕುಸುರೆಳ್ಳು ವಿನಿಯೋಗ	೬. ಸಾಮೂಹಿಕ ಇಷ್ಟಲಿಂಗಾರ್ಚನೆ.

ಈ ಆರು ವಿಧಿಗಳಲ್ಲಿ ಭಾಗಿಯಾಗಲೇಬೇಕು.

ಜನವರಿ ೧೪ ರಂದು ಸುಪ್ರಭಾತದಲ್ಲಿ ಎದ್ದು, ಸ್ನಾನ-ಇಷ್ಟಲಿಂಗಾರ್ಚನೆ ಪೂರೈಸಿ ಎಲ್ಲ ಶರಣ ಬಂಧುಗಳು ಗುರು(ಬಸವಣ್ಣ)-ಲಿಂಗದೇವ (ಗಣಲಿಂಗ)-ಜಂಗಮ (ಎಲ್ಲ ಶರಣರು)ದ ದರ್ಶನ ಪಡೆಯಬೇಕು. ಗಣಲಿಂಗದ ದರ್ಶನವು ಎಲ್ಲರಿಗೂ ಲಭ್ಯ. ಏಕದೇವೋಪಾಸನೆಗೆ ಬದ್ಧರಾಗಿ ಇಷ್ಟಲಿಂಗ ನಿಷ್ಠರಾಗಿರುವವರು ಮಾತ್ರ, ಗಣಲಿಂಗದ ಸ್ಪರ್ಶನ ಮಾಡಿ, ಪ್ರತಿಜ್ಞಾಬದ್ಧರಾಗಬೇಕು. ನಂತರ ಪಥ ಸಂಚಲನ, ಪಾದಯಾತ್ರೆ. **''ಓಂ ಲಿಂಗಾಯ ನಮಃ''** ಎಂಬ ಸೃಷ್ಟಿಕರ್ತನ ಮಂತ್ರವನ್ನು, **''ಓಂ ಶ್ರೀ ಗುರು ಬಸವ ಲಿಂಗಾಯನಮಃ''** ಎಂಬ ಗುರುಮಂತ್ರವನ್ನು ಪಠಿಸುತ್ತ ಜಯಘೋಷ ಮಾಡುತ್ತ

ಬಸವ ಲಿಂಗ ಬಸವ ಲಿಂಗ ಬಸವ ಲಿಂಗ ಪಾಹಿಮಾಂ
ಬಸವ ಲಿಂಗ ಬಸವ ಲಿಂಗ ಬಸವ ಲಿಂಗ ರಕ್ಷಮಾಂ

ಎಂದು ಭಜನೆ ಮಾಡುತ್ತ ಪಾದಯಾತ್ರೆಯಲ್ಲಿ ಸಾಗಬೇಕು. ಲೋಕ ಕಲ್ಯಾಣಾರ್ಥವಾಗಿ ಸತ್ ಸಂಕಲ್ಪ ಕೈಗೊಂಡು ಸಮುದಾಯ ಪ್ರಾರ್ಥನೆಯನ್ನು, ನಂತರ ೧೦೮ ವಚನಗಳ ಪಠಣ ಮಾಡಬೇಕು.

ವಚನ ಪಠಣ ಮಾಡಿಸುವ ಷಡ್‌ಗಣಾಧೀಶರು

೧. **ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿ**
ಪೀಠಾಧ್ಯಕ್ಷೆ, ಬಸವ ಧರ್ಮದ ಮಹಾಜಗದ್ಗುರು ಪೀಠ

೨. **ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ**
ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ, ಧಾರವಾಡ

೩. **ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು**
ಬಸವ ಧರ್ಮ ಪೀಠ, ಕೂಡಲ ಸಂಗಮ

೪. ಪೂಜ್ಯ ಶ್ರೀ ಅಲ್ಲಮಪ್ರಭು ಸ್ವಾಮಿಗಳು
ವಿಶ್ವಕಲ್ಯಾಣ ಮಿಷನ್, ಬಸವ ಮಂಟಪ, ಬೆಂಗಳೂರು

೫. ಪೂಜ್ಯ ಶ್ರೀ ಮಾತೆ ಅಕ್ಕಮಹಾದೇವಿ
ಬಸವ ಧರ್ಮ ಪೀಠ, ಕೂಡಲಸಂಗಮ

೬. ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮಿಗಳು
ಜಗನ್ಮಾತಾ ಅಕ್ಕಮಹಾದೇವಿ ಮಠ, ಧಾರವಾಡ

ವಚನ ಪಠಣಾನಂತರ ಕುಸುರೆಳ್ಳಿನ ವಿತರಣೆಯಾಗುವುದು. ಪರಸ್ಪರ ವಿನಿಮಯ ಮಾಡಿಕೊಂಡು ಸಹೋದರತ್ವ ಪ್ರದರ್ಶಿಸಬೇಕು.

ಅರ್ಚನಾ - ಸಾಮೂಹಿಕ ಇಷ್ಟಲಿಂಗಾರ್ಚನೆ

ಮಂಗಳವಾರ ದಿ.೧೪-೧-೧೯೯೭ **ಸಂಜೆ ೫-೩೦**

ಬಸವ ಧರ್ಮ ಸಂಸ್ಥಾಪನಾ ದಿನಾಚರಣೆಯ ಒಂದು ಕಡ್ಡಾಯ ವಿಧಿ ಸಾಮೂಹಿಕ ಇಷ್ಟಲಿಂಗಾರ್ಚನೆ. ಬಸವ ತತ್ತ್ವದ ಜೀವಾಳ ಸೃಷ್ಟಿಕರ್ತನ ಆರಾಧನೆ; ಸೃಷ್ಟಿಕರ್ತನನ್ನು ವಿಶ್ವದಾಕಾರದಲ್ಲಿ ಚುಳುಕಾಗಿಸಿಕೊಂಡು ಅಂಗದ ಮೇಲೆ ಧರಿಸಿಕೊಂಡು ನಿತ್ಯವೂ ಪೂಜಿಸುವುದು ಬಸವ ಪಥದ ಮುಖ್ಯ ಆಚರಣೆ, ಅತ್ಯಂತ ಅರ್ಥಗರ್ಭಿತವಾದ, ತಾತ್ತ್ವಿಕ ಹಿನ್ನೆಲೆಯುಳ್ಳ ಇಷ್ಟಲಿಂಗವು ತ್ರಾಟಕಯೋಗಕ್ಕೆ ಮುಖ್ಯ ಸಾಧನ. ಇಷ್ಟಲಿಂಗಾರ್ಚನೆಯು ದೇವಪೂಜೆಯ ಮಾಟ. ಇಷ್ಟಿದ್ದೂ ಸಹ ಲಿಂಗಾಯತರು ಇದರ ಮಹತ್ವವನ್ನು ಅರಿಯದೆ ಉದಾಸೀನ ಮಾಡುತ್ತಿರುವರು. ಆದ್ದರಿಂದ ಈ ಲಾಂಛನದ ಘನತೆ ಕುರಿತು ತಿಳಿಸಿಕೊಡಲು, ಪೂಜಾ ವಿಧಾನವನ್ನು ಕಲಿಸಿ ಕೊಡಲು, ಹೇಗೆ ಲಿಂಗಯೋಗವು ಎಲ್ಲ ಯೋಗಗಳನ್ನು ಮೀರಿದ ಸಾಧನೆ ಎಂಬುದನ್ನು ಪ್ರಚಾರ ಮಾಡಲು ಸಾಮೂಹಿಕ ಇಷ್ಟಲಿಂಗಾರ್ಚನೆಯನ್ನು ಏರ್ಪಡಿಸಲಾಗಿದೆ. ನಾನು(ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿ) ಪೂಜಿಸುತ್ತಾ ವಿವರ ನೀಡುವೆ. ನನ್ನೊಡನೆ ಬಸವ ಧರ್ಮ ಪೀಠದ ಇನ್ನಿತರ ತ್ಯಾಗಿಗಳು, ಗಣನಾಯಕ-ನಾಯಕಿಯರು ಪೂಜೆಯಲ್ಲಿ ಭಾಗವಹಿಸುವರು. ಶರಣ ಮೇಳದಲ್ಲಿ ಭಾಗಿಗಳಾದ ಶರಣ ಬಂಧುಗಳು ಸಹ ಪೂಜಾ ಸಾಮಗ್ರಿಗಳೊಡನೆ ಬಂದು ಕುಳಿತುಕೊಂಡು ಭಾಗವಹಿಸಬೇಕು. ಇನ್ನಿತರರು ಕುಳಿತು ನೋಡಿ ಕಲಿಯಬೇಕು. ದಿನ ನಿತ್ಯ ಮಾಡುವ ಕ್ರಿಯೆ ಎಂದು ಉದಾಸೀನ ಮಾಡಬಾರದು. ಸಾಮೂಹಿಕ ತಪಸ್ಸಿನಲ್ಲಿ ಅದ್ಭುತ ಶಕ್ತಿ ಇದೆ. ಸಾಮೂಹಿಕ ಸಂಕಲ್ಪದಲ್ಲಿಯೇ ವ್ಯಕ್ತಿ ಮತ್ತು ಸಮಾಜಗಳಿಗೆ ಅಮೂಲ್ಯ ಭವಿಷ್ಯವಿದೆ.

ಕೈಕಾಲು ಮುಖ ತೊಳೆದುಕೊಂಡು, ಒಂದು ಲೋಟ, ಮಜ್ಜನಕ್ಕೆರೆಯಲು ಒಂದು ಪಾತ್ರೆ (ಬಟ್ಟಲು) ಒಂದು ವಿಭೂತಿಗಟ್ಟಿ ಇಷ್ಟು ಸಾಮಗ್ರಿ ಜೊತೆಗೆ ತಂದರೂ ಸಾಕು. ಅನುಕೂಲವಾದವರು ಒಂದು ಡಬ್ಬಿಯಲ್ಲಿ ಕಲ್ಲುಸಕ್ಕರೆ, ಗಂಧ, ಕರ್ಪೂರ, ಮೇಣದ ಬತ್ತಿ, ಪುಷ್ಪ ಮುಂತಾದ ಸಾಮಾಗ್ರಿಗಳನ್ನು ಹೊಂದಿಸಿಕೊಂಡು ಬರಬಹುದು.

ಇಷ್ಟಲಿಂಗ ಪೂಜಾ ವಿಧಾನವನ್ನು ಕಲಿಸುವ ದೇವಪೂಜಾ ವಿಧಾನ ಪುಸ್ತಕ, ಪೂಜಾ ಸಮಯದಲ್ಲಿ ಹೇಳುವ ವಚನಗಳಿರುವ ಇಷ್ಟಲಿಂಗಾರ್ಚನಾ ಪುಸ್ತಕಗಳನ್ನು ಪೂಜೆಯಲ್ಲಿ ಭಾಗವಹಿಸುವ ಪ್ರತಿಯೊಬ್ಬರೂ ಹೊಂದಿರಬೇಕು. ಇಷ್ಟಲಿಂಗಾರ್ಚನೆ ಕಲಿಸುವ ಆಡಿಯೋ-ವಿಡಿಯೋ ಕೆಸೆಟ್ಟು ಮಾರಾಟಕ್ಕೆ ಲಭ್ಯವಿರುತ್ತವೆ.

ಗುರು ದರ್ಶನ ಮತ್ತು ಶರಣ ಸಮಾಗಮ

ಸಂಸಾರದಲ್ಲಿ ಹುಟ್ಟಿ ಮತ್ತೊಂದ ಬಯಸಲೇಕಯ್ಯಾ?
ನಗುವುದು ನುಡಿವುದು ಶಿವಭಕ್ತರೊಡನೆ
ಸುಮ್ಮಾನ ಹಮ್ಮು ಬಿಮ್ಮಾಗಿರಲೇಕಯ್ಯಾ?
ನಮ್ಮ ಲಿಂಗದೇವನ ಶರಣರೊಡನೆ
ಮನದೆರೆದು ಮಾತನಾಡುವುದಯ್ಯಾ.

-ಬ.ವ.ದೀ. ೨೪೪

೧೯೯೭ ನೆಯ ಇಸವಿಯಲ್ಲಿ ಜರುಗುವ ಹತ್ತನೆಯ ಶರಣ ಮೇಳದಿಂದ ಈ ವಿಶೇಷ ಕಾರ್ಯಕ್ರಮ ಸಂಯೋಜಿಸಲಾಗಿದೆ. ''ಶರಣ ಮೇಳದಲ್ಲಿ ಕೂಡಿ ಹಾಡಿಪಾಡಿ ನಲಿವೆವು'' ಎಂಬ ಪ್ರತಿಜ್ಞಾ ಗೀತೆಯಲ್ಲಿ ಬರುವ ಉಕ್ತಿಯನ್ನು ಆಚರಣೆಗೆ ತರುವುದೇ ಈ ಶರಣ-ಸಮಾಗಮದ ಉದ್ದೇಶ.

೧. ಆಡಿರಯ್ಯಾ ಹಾಡಿರಯ್ಯಾ ಮನಬಂದ ಪರಿಯಲಿ !
ಶಿವಶರಣರ ಮುಂದೆ ಆಡಿರಯ್ಯಾ ಹಾಡಿರಯ್ಯಾ;
ಕೋಡಂಗಿಯಾಟವನಾಡಿದ ಭಕ್ತಂಗೆ ಬೇಡಿತ್ತನೀವ
ನಮ್ಮ ಲಿಂಗದೇವ. -ಬ.ವ.ದೀಪ್ತಿ ೧೮೧

೨. ಆಡುವುದು ಪಾಡುವುದು ಹೇಳುವುದು ಕೇಳುವುದು
ಸರಸ-ಸಮ್ಮೇಳನವಾಗಿಪ್ಪುದಯ್ಯಾ
ಚನ್ನಮಲ್ಲಿಕಾರ್ಜುನಾ, ನೀ ಕೊಟ್ಟ ಆಯುಷ್ಯ ಉಳ್ಳನ್ನಕ್ಕರ
ಲಿಂಗ ಸುಖಿಗಳ ಸಂಗದಲ್ಲಿ ದಿನಂಗಳ ಕಳೆವೆನು

-ಅಕ್ಕ ಮಹಾದೇವಿ.

ಪ್ರತಿವರ್ಷದ ಜನವರಿ ೧೫ ರಂದು ಈ ಗುರುದರ್ಶನ ಮತ್ತು ಶರಣ ಸಮಾಗಮ ಕಾರ್ಯಕ್ರಮ. ಬೆಳಿಗ್ಗೆ ೧೦-೩೦ ರಿಂದ ಮಧ್ಯಾಹ್ನ ೧-೩೦ ರವರೆಗೆ ನಡೆಯುವ ಈ ಸಮಾರೋಪ ಕಾರ್ಯಕ್ರಮದ ವಿವರ:

೧. ದೀಪೋಜ್ವಲನ ೨. ಸಂಕ್ಷಿಪ್ತ ಪ್ರಾರ್ಥನೆ ೩.ಪೀಠಾಧೀಶರಿಂದ ಆಶೀರ್ವಚನ ೪.ದೇವನ ಪಿತೃತ್ವ ಮಾನವ ಭ್ರಾತೃತ್ವವನ್ನೇ ತಳಹದಿಯಾಗಿ ಇಟ್ಟುಕೊಂಡ ಈ ಶರಣ ಸಮಾಗಮದಲ್ಲಿ ಶರಣ ಬಂಧುಗಳು ಗುರುದರ್ಶನ ಪಡೆಯುವುದರ ಜೊತೆಗೆ ಕೆಲವೊಂದು ಶರಣರನ್ನು ಪರಿಚಯ ಮಾಡಿಕೊಳ್ಳಬೇಕು. ನಂತರ ಗುಂಪುಗುಂಪಾಗಿ ಕೆಲವು ಆಟಗಳನ್ನು ಆಡಿ ಅತ್ಯಂತ ಆತ್ಮೀಯ ಮತ್ತು ಹಾರ್ದಿಕ ವಾತಾವರಣದಲ್ಲಿ ಕಾರ್ಯಕ್ರಮವನ್ನು ಮಂಗಲಗೊಳಿಸಿ, ಪ್ರಸಾದ ಸ್ವೀಕಾರ ಮಾಡಿ ತಮ್ಮ ತಮ್ಮ ಊರುಗಳಿಗೆ ತೆರಳಬೇಕು.

ಹೀಗೆ. ಧಾರ್ಮಿಕವಾಗಿ, ತಾತ್ತ್ವಿಕವಾಗಿ, ಸಾಮಾಜಿಕವಾಗಿ ಪರಸ್ಪರರನ್ನು ಒಟ್ಟುಗೂಡಿಸುವ ಈ ಶರಣ-ಸಮಾಗಮದೊಡನೆ ಶರಣ ಮೇಳವು ಪೂರ್ಣಗೊಳ್ಳುವುದು. ★★

ಪ್ರಸಾದ ಲಭ್ಯ

ಬಂಧು-ಬಾಂಧವರು, ಮಿತ್ರರು, ಪರಿಚಿತರಿಗೆ ಕೊಂಡೊಯ್ಯಲು ಲಾಡು ಉಂಡೆ ಮತ್ತು ಕಲ್ಲುಸಕ್ಕರೆಯ ಪೊಟ್ಟಣ ಮಾರಾಟಕ್ಕೆ ಸಿಗುತ್ತವೆ. ಆದ್ದರಿಂದ ತಮ್ಮ ಶಕ್ತ್ಯಾನುಸಾರ ಖರೀದಿಸಿ, ಲಾಡು ಉಂಡೆ, ಕಲ್ಲುಸಕ್ಕರೆ, ಬಸವ ಭಾವಚಿತ್ರ, ಚಿಕ್ಕಚಿಕ್ಕ ವಿಭೂತಿ ಗಟ್ಟಿ ಮುಂತಾದುವನ್ನು ಶರಣ ಮೇಳದ ನೆನಪಿನ ಕಾಣಿಕೆಯನ್ನಾಗಿ, ಪ್ರಸಾದವನ್ನಾಗಿ ಒಯ್ದು ಹಂಚುವ ಪರಿಪಾಠವನ್ನು ಶರಣರು ಬೆಳೆಸಿಕೊಳ್ಳಬೇಕು.

ಕೆಲವು ವಿಶೇಷ ವಿವರಗಳು

೧. ೧೯೯೭ನೆಯ ಜನವರಿ ೧೨ರಿಂದ ೧೫ರವರೆಗೆ ನಡೆಯುವ ಹತ್ತನೆಯ ಶರಣ ಮೇಳದ ವಿಶೇಷ ಆಹ್ವಾನಪತ್ರವನ್ನು ಮುದ್ರಿಸಿ, ಕಲ್ಯಾಣ ಕಿರಣದ ಓದುಗರಿಗೆ ಕಳಿಸಲು ಸಮಯವಿಲ್ಲ.

೨. ಕಲ್ಯಾಣ ಕಿರಣದ ನವೆಂಬರ್-ಡಿಸೆಂಬರ್ ಸಂಚಿಕೆಗಳನ್ನು ಮುದ್ರಿಸಲಾಗಿದೆ. ಮುಂದಿನ ಸಂಚಿಕೆ ಫೆಬ್ರವರಿ ತಿಂಗಳಿನಲ್ಲಿ ಹೊರಬರುತ್ತದೆ.

೩. ಶರಣ ಮೇಳದ ವಿಶೇಷ ಆಹ್ವಾನವನ್ನು ಗಣ್ಯರಿಗಾಗಿ ಮುದ್ರಿಸಿ ಕೊಡಲಾಗುವುದು.

೪. ನಾಲ್ಕು ದಿವಸಗಳ ಕಾರ್ಯಕ್ರಮದಲ್ಲಿ ಕೆಲವು ಶರಣ ಬಂಧುಗಳಿಗೆ, ಆಯ್ದ ಉಪನ್ಯಾಸಕರಿಗೆ ವೇದಿಕೆಯ ಮೇಲಿನಿಂದ ಮಾತನಾಡಲು ಅವಕಾಶ ಮಾಡಲಾಗುವುದು. ಅವರಿಗೆ ವೈಯಕ್ತಿಕ ಆಹ್ವಾನ ನೀಡಲಾಗುವುದು. ವಿವಿಧ ವಿಷಯಗಳ ಮೇಲೆ ಅವರು ಸಿದ್ಧರಾಗಿ ಬಂದು ಉಪನ್ಯಾಸ ಮಾಡುವರು.

೫. ವಿಶ್ವಧರ್ಮ ಪ್ರವಚನ, ಅಕ್ಕನ ಪ್ರವಚನ, ಹಿಂದು ಯಾರು? ಮುಂತಾದ ಹಲವಾರು ಕೃತಿಗಳು ಶರಣ ಮೇಳದಲ್ಲಿ ಬಿಡುಗಡೆಯಾಗಲಿದ್ದು, ವೇದಿಕೆಯ ಮೇಲಿಂದ ಪ್ರಕಟಿಸಲಾಗುವುದು.

೬. ಧಾರ್ಮಿಕ ಸಮಾವೇಶಗಳಲ್ಲಿ ನಾವು ಹೆಸರಿಸಬಹುದಾದ ಕೆಲವೆಂದರೆ ಮುಸಲೀಮರ ಹಜ್-ಪವಿತ್ರ ಮೆಕ್ಕಾಯಾತ್ರೆ, ಸಿಖ್ಖರ ಖಾಲ್ಸಾ, ವಾರಕರಿ ಪಂಥದವರ ಪಂಡರಾಪುರ ಯಾತ್ರೆ, ಶಬರಿ ಮಲೈಗೆ ಹೋಗುವ ಅಯ್ಯಪ್ಪ ಸ್ವಾಮಿ ವ್ರತ ಮುಂತಾದವು. ಸಾಮಾನ್ಯ ಹಿಂದುಗಳ ಕುಂಭ ಮೇಳ ಒಂದು ಶಿಸ್ತು, ವ್ರತದ ಮೇಲಿರದೆ ಸುಮ್ಮನೇ ಭಾವುಕ ಜನರು ಸಮಾವೇಶವಾಗುವ ಮೂಢಭಕ್ತಿಯದಾಗಿರುತ್ತದೆ.

ಶರಣ ಮೇಳವು ಇವೆಲ್ಲಕ್ಕೂ ಹೊರತಾಗಿ ವಿಶೇಷವಾಗಿ ಜರುಗಬೇಕೆಂಬುದೇ ನಮ್ಮ ಆಶಯ. ಶರಣ ಮೇಳವು ಕೇವಲ ಭಕ್ತಿಪ್ರಧಾನವಾಗಿರದೆ ಜ್ಞಾನಪ್ರಧಾನವಾಗಿರಬೇಕು. ವ್ಯಕ್ತಿಯ ಹೃನ್ಮನ ಬುದ್ಧಿಗಳನ್ನು ಸಂಸ್ಕರಿಸುವಂತಿರಬೇಕು. ಆದ್ದರಿಂದ ಶರಣರು ಶರಣವ್ರತಕೈಗೊಂಡು, ವ್ರತದ ಸಮಯದಲ್ಲಿ ವಚನ ಸಾಹಿತ್ಯ ಅಭ್ಯಸಿಸುತ್ತ ಇಷ್ಟಲಿಂಗಾರ್ಚನೆ, ಬಸವೇಶ್ವರ ಪೂಜಾವ್ರತ ಆಚರಿಸಬೇಕು. ಶರಣ ಮೇಳಕ್ಕೆ ತನು-ಮನ-ಧನ ಮೀಸಲಿಟ್ಟು ಶ್ರಮಿಸಬೇಕು. ಭಕ್ತಿ ನಿಷ್ಠೆಗಳಿಂದ ಗಟ್ಟಿಗೊಂಡ ಬಸವ ಭಕ್ತರು, ವರ್ಷದಿಂದ ವರ್ಷಕ್ಕೆ ಹೆಚ್ಚು ಸೇರಬೇಕು. ನೇರವಾಗಿ ಬರುವ, ತಮ್ಮ ಭಕ್ತಿ ಸಲ್ಲಿಸಿ, ಬಸವ ಧರ್ಮ ಪೀಠವು ಕೈಗೊಂಡ ಯೋಜನೆಗಳಿಗೆ ತಮ್ಮ ಭಕ್ತಿಯ ಕಾಣಿಕೆಗಳನ್ನು ಸಲ್ಲಿಸುವ, ಪರಿಪಾಠ ಬೆಳೆಸಿಕೊಳ್ಳಬೇಕು. ಆದಿ ಎಂದೆಂದೂ ಈ ಶರಣ ಮೇಳವು ತಪ್ಪದೇ ನಡೆಯುವಂತಾಗಬೇಕು. ★★★

"ಬಸವರ ನೋಟ" ಎಂಬ ಕುತಂತ್ರದ ಕೃತಿ ಬರೆಯಿಸಿ, ಬಸವಣ್ಣನವರ ಚಾರಿತ್ರ್ಯದ ಕೊಲೆಗೈದ ಬಸವ ದ್ರೋಹಿಗಳಾದ ಶರಣ ನಿಂದಕರಾದ ಚಿತ್ರದುರ್ಗದ ಬೃಹನ್ಮಠದ ಶ್ರೀ ಶಿವಮೂರ್ತಿಸ್ವಾಮಿಗಳ ಕಾರ್ಯಕ್ರಮಗಳನ್ನು ಬಹಿಷ್ಕರಿಸಲು ಕರೆ

ಶರಣ ಬಂಧುಗಳೇ,

ಚಿತ್ರದುರ್ಗದ ಶ್ರೀ ಶಿವಮೂರ್ತಿ ಸ್ವಾಮಿಗಳು, ಪಿ.ಎಂ.ಗಿರಿರಾಜನಿಂದ ಬರೆಯಿಸಿದ ಕುತಂತ್ರದ ಕೃತಿ "ಬಸವರ ನೋಟ" ಬಸವ ಚಾರಿತ್ರ್ಯಕ್ಕೆ ಕಲಂಕ, ಬಸವಾದಿ ಶರಣರನ್ನು ಪರಸ್ಪರ ಕೊಲೆಗಡುಕರೆಂದೂ ಇಷ್ಟಲಿಂಗವು ಭೂತ-ಪಿಶಾಚಿ ಭಯದಿಂದ ಕಟ್ಟಿಕೊಳ್ಳುವ ತಾಯಿತಕ್ಕೆ ಬದಲಾಗಿ ನೀಡಲಾಗಿದೆಯೆಂದೂ ಬರೆದು ಬಸವಕ್ರಾಂತಿಯ ವ್ಯವಸ್ಥಿತ ಕೊಲೆಗೈದ, ಇತಿಹಾಸವನ್ನೇ ತಿರುಚಿದ ಅತ್ಯಂತ ಹೀನಕೃತಿ. ಅಷ್ಟೇ ಅಲ್ಲ ಅಕ್ಷಮ್ಯ ಅಪರಾಧ. ಈ ಕೃತಿಯನ್ನು ಬರೆಯಿಸಿದ ಚಿತ್ರದುರ್ಗದ ಶಿವಮೂರ್ತಿ ಸ್ವಾಮಿಗಳ ಕಾರ್ಯಕ್ರಮಗಳನ್ನು ಬಹಿಷ್ಕರಿಸಿರಿ. ಈ ಪುಸ್ತಕದಲ್ಲಿಯ ಅಸಂಗತ, ಅಸಂಬದ್ಧ, ಕುತಂತ್ರ ಪೂರಿತ ಘಟನೆಗಳ ಚಿತ್ರಣವನ್ನು ನೋಡಿರಿ.

೧. ಬಸವಣ್ಣನವರು ಕೂಡಲಸಂಗಮದಲ್ಲಿ ಲಿಂಗೈಕ್ಯರಾಗಲಿಲ್ಲ. ಅವರಿಗೆ ಸಿದ್ಧರಾಮೇಶ್ವರರು ಹಡಪದ ಅಪ್ಪಣ್ಣನಿಂದ ಮದ್ದನ್ನು ತಿನ್ನಿಸಿ, ಹುಚ್ಚರನ್ನಾಗಿಸಿ, ಶ್ರೀಶೈಲಕ್ಕೆ ಒಯ್ದು ಕೊಲೆಗೈದರಂತೆ.

೨. ನೀಲಾಂಬಿಕೆ ತಾಯಿ ಕೂಡಲಸಂಗಮದಲ್ಲಿ ಬಸವಣ್ಣನವರು ತಲೆಕೆಟ್ಟು ಹುಚ್ಚರಾಗಿದ್ದಾರೆಂದು ಅಪ್ಪಣ್ಣನವರಿಂದ ತಿಳಿದು ಎದೆಯೊಡೆದು ಕಲ್ಯಾಣದಲ್ಲಿಯೇ ಸತ್ತಳಂತೆ.

೩. ಇಷ್ಟಲಿಂಗವು ಮಾರಿ ಮಸಣಿಯರಿಗೆ ಹರಕೆಹೊತ್ತು ಕಟ್ಟಿಕೊಳ್ಳುವ ತಾಯಿತಕ್ಕೆ ಬದಲಾಗಿ ನೀಡಿದ ಕುರುಹಾಗಿದೆಯಂತೆ.

೪. ಬಸವ ಜಯಂತಿ ಆಚರಿಸುವವರು ಬಸವದ್ರೋಹಿಗಳು, ಅಷ್ಟೇ ಅಲ್ಲ ಬಸವ ಜಯಂತಿಯನ್ನು ಬರೆದ ಕ್ಯಾಲೆಂಡರುಗಳೂ ಸಹಿತ ಹೊಲಸು ಕ್ಯಾಲೆಂಡರಗಳಂತೆ.

೫. ಹಡಪದ ಅಪ್ಪಣ್ಣ, ಮಡಿವಾಳ ಮಾಚಯ್ಯನವರು ಬ್ರಾಹ್ಮಣರಾಗಿದ್ದರಂತೆ.

೬. ಬಸವಣ್ಣನವರು ಮಾದರಸ ಮಾದಲಾಂಬಿಕೆಯವರ ಮಗನಲ್ಲವಂತೆ; ಅವರೇ ಹೇಳಿದಂತೆ ಡೋಹರ ಕಕ್ಕಯ್ಯನವರ ಮಗನಂತೆ.

೭. ಬಸವಣ್ಣನವರು ಗಂಡಸರಾಗಿರಲಿಲ್ಲವಂತೆ.

೮. ಬಸವಣ್ಣನವರಿಗೆ ಗಡಿಪಾರು ಶಿಕ್ಷೆಯಾದುದು ಅಂತರ್ಜಾತೀಯ ವಿವಾಹ ಗೈಸಿದುದಕ್ಕಾಗಿ ಅಲ್ಲ; ಸಿದ್ಧರಾಮೇಶ್ವರರನ್ನು ಕಲ್ಯಾಣಕ್ಕೆ ಕರೆತಂದಿದ್ದರಿಂದ ಅಂತೆ.

೯. ಸಿದ್ಧರಾಮೇಶ್ವರರನ್ನು ಕಲ್ಯಾಣಕ್ಕೆ ಕರೆತಂದವರು ಪ್ರಭುದೇವರಲ್ಲ ಬಸವಣ್ಣನವರೇ ಹೋಗಿ ಕರೆತಂದರಂತೆ.

೧೦. ಬಸವಣ್ಣನವರ ಭಾವಚಿತ್ರ ಇಡುವವರು , ಪ್ರಿಂಟ್ ಹಾಕಿಸುವವರು ಬಸವದ್ರೋಹಿಗಳಂತೆ.

೧೧. ಬಸವ ಜಯಂತಿಯನ್ನು ಮೊಟ್ಟ ಮೊದಲಿಗೆ ಆಚರಣೆಗೆ ತಂದ ಹರ್ಡೇಕರ ಮಂಜಪ್ಪನವರು ಮೂರ್ಖರಂತೆ ; ಲಿಂಗ ಮೆಚ್ಚುವಂತೆ ಬದುಕಿದವರಲ್ಲವಂತೆ.

ಶರಣ ಬಂಧುಗಳೇ,

ಹೀಗೆ ಬರೆಯತೊಡಗಿದರೆ, ಪ್ರತಿ ಸಾಲಿನಲ್ಲಿಯೂ ಬಸವ ಚಾರಿತ್ರ್ಯದ ಹರಣವೇ ಈ ಕೃತಿಯಲ್ಲಿ ತುಂಬಿ ತುಳುಕುತ್ತಿರುವುದರಿಂದ, ಅನೇಕ ಪುಟಗಳು ಸಾಲವು. ಆದ್ದರಿಂದ ಇಲ್ಲಿ ಅದನ್ನು ಸಂಕ್ಷಿಪ್ತವಾಗಿ ನೀಡಲಾಗಿದೆ. ಈ ಎಲ್ಲ ಬರಹಗಳನ್ನು ಪುಟ ಸಹಿತವಾಗಿ ಒಳಗೊಂಡ ಕಿರುಪುಸ್ತಕವೇ ಹೊರಬರುತ್ತಿದೆ.

ಈ ಸ್ವಾಮಿಗಳೇ ಹಿಂದೊಮ್ಮೆ ''ಬಸವಣ್ಣನವರು ಲಿಂಗೈಕ್ಯರಾಗಿಲ್ಲ; ಅವರ ಕಗ್ಗೊಲೆಯಾಗಿದೆ.'' ಎಂಬ ಹೇಳಿಕೆ ನೀಡಿದ್ದನ್ನು ಯಾರೂ ಮರೆತಿಲ್ಲ. ಇದರಿಂದ ಆಕ್ರೋಶಗೊಂಡ ಬಸವ ಭಕ್ತರ ಕೆಚ್ಚಿಗೆ ಬೆಚ್ಚಿಬಿದ್ದು ''ನಾನು ಹಾಗೆ ಹೇಳಿಲ್ಲ ಸಂಶೋಧನೆಯಾಗಬೇಕು ಎಂದು ಹೇಳಿದ್ದೇನೆ.'' ಎಂದು ಪುನರ್ ಹೇಳಿಕೆ ನೀಡಿ ಜಾರಿಕೊಂಡಿದ್ದರು. ಅವರ ಅದೇ ಕುತಂತ್ರ ಇಂದು ''ಬಸವರ ನೋಟ'' ಪುಸ್ತಕದಲ್ಲಿ ಬಸವಣ್ಣನವರನ್ನು ಸಿದ್ಧರಾಮೇಶ್ವರರಿಂದ ಕೊಲೆಗೈಸಿದೆ.

ಬಸವಣ್ಣನವರ ಲಿಂಗೈಕ್ಯದ ಬಗ್ಗೆ ಅವರ ಆತ್ಮ ಕಥನದಂತಿರುವ ವಚನಗಳು ಮತ್ತು, ಪ್ರಭುದೇವ, ಮಡಿವಾಳ ಮಾಚಿದೇವ. ಅಕ್ಕನಾಗಮ್ಮ ತಾಯಿ, ನೀಲಾಂಬಿಕಾ ತಾಯಿಯರ ವಚನಗಳು ಸಾರಿ ಸಾರಿ ಹೇಳುತ್ತಿರುವಾಗ, ಅದೆಲ್ಲವನ್ನು ಧಿಕ್ಕರಿಸಿ, ಸ್ವಕಪೋಲ ಕಲ್ಪಿತವಾಗಿ, ಇಷ್ಟೊಂದು ಹೀನವಾಗಿ ಬರೆಸಿದ್ದು, ಅಕ್ಷಮ್ಯ ಅಪರಾಧವಲ್ಲದೆ ಮತ್ತೇನು?

ಶರಣ ಚಾರಿತ್ರ್ಯದ ಪರಮ ಸಾಕ್ಷಿಗಳಾದ ವಚನಗಳನ್ನು ಧಿಕ್ಕರಿಸಿ, ಸಂಶೋಧನೆಯ ಹೆಸರಿನಲ್ಲಿ ಸಂಶಯಭರಿತ, ಹೀನ ಮನದಿಂದ ಬಸವಚರಿತ್ರೆಯನ್ನು ಹಿಗ್ಗಾ ಮುಗ್ಗಾ ಎಳೆದಾಡಿದ್ದು, ಅಕ್ಷಮ್ಯ ಅಪರಾಧವಾಗಿದೆ. ಶರಣ ಬಂಧುಗಳು ಇಂಥ, ಗೋಮುಖ ವ್ಯಾಘ್ರ ಸ್ವಾಮಿಗಳನ್ನು, ಲೇಖಕರನ್ನು ಬಹಿಷ್ಕರಿಸಿ, ಛೀಮಾರಿ ಹಾಕಲೇಬೇಕು. ಇಲ್ಲದಿದ್ದರೆ ಇವರ ಕುತಂತ್ರಪೂರಿತ ಲೇಖನಿ, ಇನ್ನೂ ಯಾವ ರೀತಿಯಲ್ಲಿ ಹುಚ್ಚುಚ್ಚಾರವಾಗಿ ಕುಣಿದು, ಈ ಸಮಾಜ, ಧರ್ಮ ಪುರುಷರನ್ನು ಯಾವ ದುರಂತಕ್ಕೆ ತಲುಪಿಸುತ್ತದೆಯೋ? ಆದ್ದರಿಂದ ಇದಕ್ಕೆ ಕಡಿವಾಣ ಹಾಕಿ, ಕತ್ತರಿಸುವದು ಅನಿವಾರ್ಯವಾಗಿದೆ.

'ಬಾಯಿಯಲ್ಲಿ ಬಸವ ಎಂಬ ಬೆಣ್ಣೆ; ಹೃದಯದಲ್ಲಿ ಬಸವ ಚಾರಿತ್ರ್ಯದ ಕಗ್ಗೊಲೆಯ ಕುತಂತ್ರದ ಕತ್ತರಿ' ಹೊಂದಿರುವ ಇಂಥವರನ್ನು ತಿರಸ್ಕರಿಸದಿದ್ದರೆ, ಈ ಸಮಾಜ ಧರ್ಮಗಳು, ಎಂದೆಂದೂ ಮೇಲೇಳದ ಪ್ರಪಾತಕ್ಕೆ ಬಿದ್ದಾವು ಎಂದು ಬಸವ ಭಕ್ತರು ಚಿಂತಿತರಾಗಿದ್ದಾರೆ. ಆದ್ದರಿಂದ ಇಂಥವರನ್ನು, ಜನತೆಗೆ ಮೋಸಗೊಳಿಸುವ ಇವರ ಕಾರ್ಯಕ್ರಮಗಳನ್ನು ಬಹಿಷ್ಕರಿಸಿರಿ.

ಇಂತೀ ಶರಣುಗಳೊಡನೆ,

ತಮ್ಮ

ಅಧ್ಯಕ್ಷರು ಮತ್ತು ಸದಸ್ಯರು

ಶರಣ ಚಾರಿತ್ರ್ಯ ಸಂರಕ್ಷಣ ಸಮಿತಿ, ಬೀದರ

ವೀರಶೈವ ಸಮಾಜದಲ್ಲಿ ಮನವಿ

೧. ಅಧ್ಯಕ್ಷರು, ಅಖಿಲ ಭಾರತ ವೀರಶೈವ ಮಹಾಸಭಾ, ಕೇಂದ್ರ ಸಮಿತಿ

೨. ಅಧ್ಯಕ್ಷರು, ಅಖಿಲ ಭಾರತ ವೀರಶೈವ ಮಹಾಸಭಾ, ರಾಜ್ಯ ಸಮಿತಿ

೩. ''ಬಸವ ವಚನ ದೀಪ್ತಿ'' ವಿರೋಧಿಸಿದ ಎಲ್ಲಾ ಮಠಾಧೀಶರು, ಸಾಹಿತಿಗಳು, ಬಸವಭಕ್ತರು

ಅವರಿಗೆ ಶರಣು ಶರಣಾರ್ಥಿಗಳು,

ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶ್ರೀಕಂಠ್‌ಕುಮಾರ್ ಎನ್ನುವವರು (ಮಹಾಚೈತ್ರ ಹೋರಾಟದ ನಿಮಿತ್ತವಾಗಿ ಶಿಕ್ಷಣ ಸಚಿವರ ಮನೆ ಮುಂದೆ ಆತ್ಮಾಹುತಿಗೆ ಯತ್ನಿಸಿದವರು ಎಂದರೆ ನಿಮಗೆ ನೆನಪಾದೀತು!) ಕಳಿಸಿರುವ ಕರಪತ್ರಗಳು ನಿಮಗೂ ಮುಟ್ಟಿರಬಹುದು. ಅವರು ನಮಗೆ ಅಂದರೆ ರಾಷ್ಟ್ರೀಯ ಬಸವ ದಳಗಳವರಿಗೆ ವಿಪರೀತ ಒತ್ತಾಯ ಮಾಡುತ್ತಿದ್ದಾರೆ -ಚಿತ್ರದುರ್ಗದ ಬೃಹನ್ಮಠದಿಂದ ಪ್ರಕಟಗೊಂಡ ಶ್ರೀ ಪಿ.ಎಂ. ಗಿರಿರಾಜು ಬರೆದ ''ಬಸವರ ನೋಟ'' ಕುರಿತು ಕ್ರಮ ಕೈಗೊಳ್ಳಲು.

ವೀರಶೈವ (ಲಿಂಗವಂತ) ಸಮಾಜದ ಆಗುಹೋಗುಗಳು ಗಣ್ಯ ಸಂಸ್ಥೆಯಾದ ತಮಗೂ ಸೇರಿದ್ದು! ಪ್ರತಿ ಹೋರಾಟಗಳಲ್ಲೂ ಸಾಕಷ್ಟು ಹಣ ವ್ಯಯವಾಗುತ್ತದೆ. ಜೊತೆಗೆ ಸಮಯವೂ ಸಹ. ಇಷ್ಟೆಲ್ಲ ಸಮಯ-ಹಣ ವ್ಯಯಿಸಿ ಹೋರಾಡಿಯೂ ಲಿಂಗಾಯತ/ವೀರಶೈವರ ಒಳಪಿತೂರಿಗಳಿಂದ ಹೋರಾಟವು ಹಿನ್ನಡೆ ಸಾಧಿಸಿದಲ್ಲಿ ಬಲು ಸುಲಭವಾಗಿ ವೀರಶೈವವಾದಿಗಳು ರಾಷ್ಟ್ರೀಯ ಬಸವ ದಳದವರು ಕೈಹಾಕಿದ್ದರಿಂದ ಇದು ಕೆಟ್ಟು ಹೋಯಿತು ಎಂದು ಗೂಬೆ ಕೂರಿಸುವರು. ಆದ್ದರಿಂದ, ಸ್ಥಳೀಯವಾಗಿ ಯಾರಾದರೂ ಬಸವ ದಳಗಳವರು ಪ್ರತಿಭಟನೆ ಹಮ್ಮಿಕೊಂಡರೂ ಅದು ರಾಷ್ಟ್ರೀಯ ಬಸವ ದಳದ ಕೇಂದ್ರ ಸಮಿತಿಗೆ ಸಂಬಂಧಿಸಿರದು. ಬಸವರ ನೋಟ ಪುಸ್ತಕದಲ್ಲಿ ಆಗಿರುವ ಪ್ರಮಾದಗಳನ್ನು ಗಮನಿಸಿ ನಿಮಗೆ ಸರಿ ಕಂಡ ನಿರ್ಧಾರ ತೆಗೆದುಕೊಳ್ಳಿರಿ.

ತಾಯಿ ನೀಲಾಂಬಿಕೆಯ ಗದ್ದುಗೆ ತಂಗಡಗಿ ಬಳಿ ಇದೆ. ಅದೇ ರೀತಿ ಶರಣ ಹಡಪದ ಅಪ್ಪಣ್ಣನವರ ಗದ್ದುಗೆ ಸಹ. ಈಗ ಚಿತ್ರದುರ್ಗದ ಶ್ರೀಗಳ ನೇತೃತ್ವದಲ್ಲಿ ಶ್ರೀ ಗಿರಿರಾಜರ ಮುಂದಾಳತ್ವದಲ್ಲಿ ಅವರ ಹೇಳಿಕೆ ಪ್ರಕಾರ ತಾಯಿ ನೀಲಾಂಬಿಕೆಯ ಸಮಾಧಿ ಕಲ್ಯಾಣದಲ್ಲಿ ಸಿಗಬೇಕು. ಬಸವಣ್ಣನವರಿಗೆ ಮದ್ದು ತಿನ್ನಿಸಿ ಪ್ರಜ್ಞಾಶೂನ್ಯರನ್ನಾಗಿ ಮಾಡಿ ಶ್ರೀಶೈಲಕ್ಕೆ ಕರೆದೊಯ್ದು ಅಲ್ಲಿ ಸಮಾಧಿ ಮಾಡಿಸಿರುವ ಅಪ್ಪಣ್ಣನವರ ಸಮಾಧಿ ಮತ್ತು ಶ್ರೀ ಗುರು ಬಸವಣ್ಣನವರ ದಿವ್ಯ ಸಮಾಧಿಯನ್ನು ಶ್ರೀಶೈಲದಲ್ಲಿ ಹುಡುಕಿಸಬೇಕು. ಆದಷ್ಟು ಬೇಗ ತಾವು ಕ್ರಮಕೈಗೊಳ್ಳಬೇಕೆಂದು ನಮ್ಮ ನಮ್ರ ಬೇಡಿಕೆ.

''ಬಸವ ವಚನ ದೀಪ್ತಿ'' ಯಂತಹ ಪವಿತ್ರ, ಸುಂದರ ಮತ್ತು ಶಾಸ್ತ್ರೀಯ ಕೃತಿ ವಿಶ್ವಗುರು ಬಸವಣ್ಣನವರ ದಿವ್ಯ ಭವ್ಯ ವ್ಯಕ್ತಿತ್ವವನ್ನು ಸುಂದರವಾಗಿ ಚಿರನೂತನವಾಗಿ ಮೇಲೆತ್ತುವ ಒಂದು

ಪ್ರಯತ್ನವನ್ನು ಮಹಾಪ್ರಮಾದವೆಂಬಂತೆ ಕೂಗಾಡಿ, ಮುಗ್ಧ ಬಸವ ಭಕ್ತರನ್ನು ಗೊಂದಲಕ್ಕೆ ಈಡು ಮಾಡಿ, ಪೂಜ್ಯ ಮಾತಾಜಿಯವರ ದೈವೀಪ್ರೇರಣೆಯ ಮಹತ್ವವನ್ನು ಅರಿಯದೆ ಅವರ ವಿರುದ್ಧ ಮುಗ್ಧ ಬಸವ ಭಕ್ತರನ್ನು ಮತ್ತು ಕೆಲವು ರಾಷ್ಟ್ರೀಯ ಬಸವ ದಳಗಳವರನ್ನು ಎತ್ತಿ ಕಟ್ಟುವ ಹುನ್ನಾರ ಮಾಡಿದ ಎಲ್ಲರೂ ಈಗ ಉತ್ತರಿಸಲೇಬೇಕಾದ ಅನಿವಾರ್ಯತೆಗೆ ಬದ್ಧರಾಗಿದ್ದಾರೆ. ಇಲ್ಲವಾದರೆ ಇವರೆಲ್ಲ ಆತ್ಮ ವಂಚನೆ ಮಾಡಿಕೊಂಡಂತೆ ಎಂದು ಹೇಳದೆ ಗತ್ಯಂತರವಿಲ್ಲ.

ವಿಶೇಷ ಬೇಡಿಕೆ : ಶ್ರೀಶೈಲದಲ್ಲಿ ಹಾಳುಬಿದ್ದ ನೂರಾರು ಗುಡಿ ಮಠಗಳಿವೆ. ಸಾಧಾರಪೂರ್ವಕವಾಗಿ ಬೃಹನ್ಮಠದ ಶ್ರೀಗಳು ಬಹುಶಃ ಸಿದ್ಧಪಡಿಸುವರಾಗಿ ನಂಬಿದ್ದೇವೆ. ತೀರಾ ಇತ್ತೀಚೆಗೆ ಸುಣ್ಣ-ಬಣ್ಣ ಮಾಡಿಸಿದ್ದರೆ ಈ ಬಗ್ಗೆ ಪರಿಶೀಲಿಸಲು ಒಂದು ಪರಿಶೀಲನಾ ಸಮಿತಿ ಮಾಡುವುದು ಸೂಕ್ತ ಎಂದು ನಮ್ಮ ಅನಿಸಿಕೆ. ನಿಮ್ಮ ಸಹಕಾರದ ನಿರೀಕ್ಷೆಯಲ್ಲಿ

-ಡಿ.ಎಸ್.ವಿಜಯಾನಂದ.

ಆಯಿಲ್ ಪುಲ್ಲಿಂಗ್ ಬಗ್ಗೆ ವಿಶೇಷ ಉಪನ್ಯಾಸ

ಸರ್ವರೋಗ ನಿವಾರಕ ಚಿಕಿತ್ಸಾ ವಿಧಾನ ಆಯಿಲ್ ಪುಲ್ಲಿಂಗ್ ಬಗ್ಗೆ ಕರ್ನಾಟಕದಲ್ಲಿ ವಿಶೇಷ ಪ್ರಚಾರ ಮಾಡುತ್ತಿರುವ ಲೆಪ್ಟಿನೆಂಟ್ ಕರ್ನಲ್ (ನಿ) ತುಮ್ಮಲ ಕೋಟೇಶ್ವರ ರಾವ್ ಅವರಿಂದ ವಿಶೇಷ ಉಪನ್ಯಾಸ ದಿ.೧೩-೧-೧೯೯೭ರಂದು ಸಂಜೆ ೮-೦೦ ಗಂಟೆಗೆ ಶರಣಮೇಳ ವೇದಿಕೆಯಲ್ಲಿ ಜರುಗಲಿದೆ. ಉಪನ್ಯಾಸದ ನಂತರ ಅವರು ಕೇಳುಗರ ಪ್ರಶ್ನೆಗಳಿಗೆ ಉತ್ತರಿಸಲಿರುವರು. ಹೆಚ್ಚಿನ ಜನರು ಈ ಅವಕಾಶದ ಸದುಪಯೋಗ ಪಡೆದುಕೊಳ್ಳಬೇಕೆಂದು ಕೋರುತ್ತೇವೆ.

ಶರಣ ಚಾರಿತ್ರ್ಯ ಸಂರಕ್ಷಣ ಸಮಿತಿ

ಇದೇ ತಿಂಗಳು ಅಂದರೆ ಡಿಸೆಂಬರ್ ೩ ರಂದು ಬೀದರ್‌ನಲ್ಲಿ ಜಿಲ್ಲಾ ಲಿಂಗಾಯತ ಸಮಾಜ ಯುವ ಒಕ್ಕೂಟದ ವತಿಯಿಂದ ಬಸವ ಭಕ್ತರ ಸಭೆ ಕರೆಯಲಾಗಿತ್ತು. ಭಾಲ್ಕಿ ಮತ್ತು ಭಾತಂಬ್ರಾ ಶ್ರೀಗಳು ಹಾಗೂ ಲಿಂಗಾಯತ ಸಮಾಜದ ಎಲ್ಲ ಮುಖಂಡರನ್ನು ಈ ಸಭೆಗೆ ಆಹ್ವಾನಿಸಲಾಗಿತ್ತು. **"ಬಸವರ ನೋಟ"** ಪುಸ್ತಕದ ಬಗ್ಗೆ ಅಂದಿನ ಸಭೆಯಲ್ಲಿ ಚರ್ಚಿಸಿ ಸಭಿಕರೆಲ್ಲರೂ ಆ ಪುಸ್ತಕವನ್ನು ಬರೆಯಿಸಿದ ಚಿತ್ರದುರ್ಗದ ಶ್ರೀ ಶಿವಮೂರ್ತಿ ಸ್ವಾಮಿಗಳಿಗೂ ಮತ್ತು ಲೇಖಕ ಗಿರಿರಾಜನಿಗೂ ತೀವ್ರವಾಗಿ ಖಂಡಿಸಿ ಕೂಡಲೇ ರದ್ದುಪಡಿಸಲು ಒತ್ತಾಯಿಸಿದರು. ಲಿಂಗಾಯತ ಸಮಾಜದ ಗಣ್ಯರಾದ ಶ್ರೀ ಮಾಣಿಕಪ್ಪ ನಿಂಬೂರೆ ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಇದೇ ಸಭೆಯಲ್ಲಿ ಗುಣವಂತರಾವ್ ಪಾಟೀಲ ಹಕ್ಯಾಳರಿಗೆ ಅಧ್ಯಕ್ಷರನ್ನಾಗಿ ಮಾಡಲಾಯಿತು. ಶರಣರ ಚಾರಿತ್ರ್ಯಕ್ಕೆ ಕಳಂಕ ಹಚ್ಚುವ ಮತ್ತು ಬಸವಾದಿ ಶರಣರ ವಿಚಾರಕ್ರಾಂತಿಯನ್ನೇ ಬುಡಸಹಿತ ಕಿತ್ತು ಹಾಕುವ ಕುತಂತ್ರದ ಈ **"ಬಸವರ ನೋಟ"** ಪುಸ್ತಕವನ್ನು ಕೂಡಲೇ ರದ್ದುಗೊಳಿಸಿ ಸ್ವಾಮಿಗಳು ಮತ್ತು ಲೇಖಕ ಗಿರಿರಾಜು ಅವರು ಕ್ಷಮೆ ಕೇಳಬೇಕೆಂದು ಸಭೆಯಲ್ಲಿ ಆಗ್ರಹಿಸಲಾಯಿತು. ಹುಲಸೂರು, ಭಾಲ್ಕಿ ಮತ್ತು ಭಾತಂಬ್ರಾ ಸ್ವಾಮಿಗಳಿಗೆ ಆಮಂತ್ರಣ ನೀಡಲಾಗಿತ್ತು ಆದರೂ ಅವರು ಸಭೆಗೆ ಬಂದಿರಲಿಲ್ಲ. ನೂರಾರು ಜನ ಬಸವಭಕ್ತರು, ಗಣ್ಯರು ಈ ಸಭೆಯಲ್ಲಿ ಭಾಗವಹಿಸಿದ್ದರು.

ವರದಿ : ಶಿವಕುಮಾರ ಡಾಕುಳಗೆ, ಬೀದರ

'ಲಿಂಗದೇವಾ' ವಚನಾಂಕಿತ ಕುರಿತು ಸ್ಪಷ್ಟೀಕರಣ - ಕೃತಿಚೌರ್ಯವಲ್ಲ

ಶ್ರೀ ಗುರು ಬಸವಣ್ಣನವರ ಲಭ್ಯವಿರುವ ವಚನಗಳನ್ನು ಸಂಗ್ರಹಿಸಿ, ತಾತ್ತ್ವಿಕವಾಗಿ ಶುದ್ಧೀಕರಿಸಿ ಹೆಚ್ಚು ಅರ್ಥಪೂರ್ಣವಾದ ಪಾಠಾಂತರಗಳನ್ನು ಆಯ್ಕೆ ಮಾಡಿ "ಬಸವ ವಚನ ದೀಪ್ತಿ" ಎಂಬ ವಚನ ಸಂಗ್ರಹವನ್ನು ಬಸವಣ್ಣನವರ ಲಿಂಗೈಕ್ಯ ಅಷ್ಟಶತಮಾನೋತ್ಸವದ ಕೊಡುಗೆಯಾಗಿ ಬಿಡುಗಡೆ ಮಾಡಲಾಯಿತು. ನವಧರ್ಮ ದ್ರಷ್ಟಾರರಾದ ಬಸವಣ್ಣನವರ ಜೀವನದಲ್ಲಿ ದೇವ ಸಾಕ್ಷಾತ್ಕಾರದ ಮಹತ್ವಪೂರ್ಣ ಪ್ರಸಂಗವನ್ನು ಆಧರಿಸಿ ಸಾಕ್ಷಾತ್ಕಾರದ ಮೊದಲು ಬರೆದ ವಚನಗಳಲ್ಲಿ ಕೂಡಲ ಸಂಗಮದೇವಾ ಮುದ್ರಿಕೆಯನ್ನಿರಿಸಿಕೊಂಡು, ಸಾಕ್ಷಾತ್ಕಾರದ ನಂತರ ಬರೆದ ವಚನಗಳಲ್ಲಿ ಅವರ ವಚನಗಳಿಂದಲೇ ಆಯ್ದು 'ಲಿಂಗದೇವಾ' ಎಂಬ ಪದವನ್ನು ವಚನಾಂಕಿತವಾಗಿ ಪ್ರಯೋಗಿಸಲಾಗಿದೆ. ತಾತ್ತ್ವಿಕ ಮತ್ತು ದಾರ್ಶನಿಕ ಹಿನ್ನೆಲೆಯಲ್ಲಿ ಮುನ್ನುಡಿಯಲ್ಲಿ ವಿವರಣೆಯನ್ನು ಬಸವಣ್ಣನವರು ಕಂಡು, ಬಣ್ಣಿಸಿದ ದೇವರ ಸ್ವರೂಪವನ್ನು ಸ್ಪಷ್ಟವಾಗಿ ನೀಡಿ ಪುಸ್ತಕವನ್ನು ಹೊರತರಲಾಗಿದೆ.

ಬಸವಣ್ಣನವರ ವಚನಗಳ ಸಂಗ್ರಹವೆಂದು ಪ್ರಕಟಪಡಿಸಿರುವ ಕಾರಣ ಈ ವಚನಾಂಕಿತ ಬದಲಾವಣೆಯ ಪ್ರಸಂಗವು ಕೃತಿಚೌರ್ಯವಲ್ಲ. ಇದರಿಂದ ಬಸವಣ್ಣನವರ ವ್ಯಕ್ತಿತ್ವಕ್ಕೆ ಕಳಂಕ ಬಂದಿದೆ ಎಂದು ಕೆಲವರು ಪುಸ್ತಕವನ್ನು ಓದದೆಯೇ ಆರೋಪಿಸಿರುವುದು ಸಮರ್ಥನೀಯವಲ್ಲ. ಗ್ರಂಥದಲ್ಲಿ ಬಸವಣ್ಣನವರ ವ್ಯಕ್ತಿತ್ವ ಚಿತ್ರಣ ಮತ್ತು ಮಾನವ ಸಮಾಜದ ಸರ್ವತೋಮುಖ ಬೆಳವಣಿಗೆಗಾಗಿ ಕೊಟ್ಟ ಕ್ರಾಂತಿಕಾರಿ ಪರಿಕಲ್ಪನೆ ಜಂಗಮದ ಬಗ್ಗೆ ಕೊಟ್ಟ ವಿವರಣೆ ಅತ್ಯಂತ ವಿದ್ವತ್‌ಪೂರ್ಣ ಮತ್ತು ಮಹತ್ವಪೂರ್ಣವಾಗಿವೆ.

ಸೃಷ್ಟಿಕರ್ತ ಪರಮಾತ್ಮನನ್ನು ಬಸವಣ್ಣನವರು ಅತ್ಯಂತ ಗೌರವಪೂರ್ಣವಾಗಿ 'ಲಿಂಗದೇವಾ' ಎಂದು ಬಣ್ಣಿಸಿರುವುದನ್ನು ವಚನಗಳ ಉಲ್ಲೇಖದೊಡನೆ ನಾನು ಮುನ್ನುಡಿಯಲ್ಲಿ ವಿವರಿಸಿದ್ದೇನೆ. ಲಿಂಗೈಕ್ಯ ಪೂಜ್ಯ ಗುರುಗಳ ಹೆಸರನ್ನು ವಚನಾಂಕಿತ ಮಾಡಲು ಪ್ರಯತ್ನಿಸಿದ್ದಾರೆ ಎಂಬ ಕಲ್ಪನೆಗೂ ಕೆಲವರು ಮುಂದಾಗಿದ್ದಾರೆ. 'ಲಿಂಗ'-ಇದು ಆಗಮ-ವೇದಗಳ ಕಾಲದಿಂದಲೂ ಬಳಕೆಯಲ್ಲಿರುವ ಪಾರಿಭಾಷಿಕ ಪದ. ಶ್ರೀ ಶಂಕರಾಚಾರ್ಯರು **"ಸರ್ವ ಸಮುದ್ಭವ ಕಾರಣ ಲಿಂಗಂ"** ಎಂದು 'ಲಿಂಗ' ಪದದ ಅರ್ಥವನ್ನು ನೀಡಿದ್ದಾರೆ. ಬಸವಣ್ಣನವರು ಕೊಟ್ಟುದು ಲಿಂಗ-ಆಯತ ಧರ್ಮ; ಅವರು ಆರಾಧಿಸಲು ಹೇಳಿದುದು ಇಷ್ಟಲಿಂಗವನ್ನು ಹಾಗಾದರೆ ಬಸವಾದಿ ಪ್ರಮಥರು ನಮ್ಮ ಲಿಂಗೈಕ್ಯ ಗುರುಗಳ ಹೆಸರನ್ನು ಮನಸ್ಸಿನಲ್ಲಿಟ್ಟುಕೊಂಡು ಲಿಂಗ ಪದವನ್ನು ಆಗ ಬಳಸಿದರೆ? ತಾತ್ತ್ವಿಕ ಹಿನ್ನೆಲೆಯಿದ್ದೂ ಸಹ, ನಾನು ಜಯಪುರ-ದೆಹಲಿ ಪ್ರವಾಸವನ್ನು ಕೈಗೊಂಡು ಸಂಚರಿಸುವಾಗ ಇಲ್ಲಿ ಕೆಲವರು ವಿನಾಕಾರಣ ವಚನಾಂಕಿತ ಬದಲಾವಣೆ ಬಗ್ಗೆ ಗೊಂದಲವನ್ನು ಎಬ್ಬಿಸಿದ್ದಲ್ಲದೆ ನ್ಯಾಯಾಲಯದ ಕಟ್ಟೆಯನ್ನೇರುವ ಮಟ್ಟಕ್ಕೂ ಹೋಗಿದ್ದು ವಿಷಾದನೀಯ.

ಪ್ರಸಂಗವು ನ್ಯಾಯಾಲಯದಲ್ಲಿ ಇರುವುದರಿಂದ ನನ್ನ ಮುಂದಿನ ನಿಲುವೇನು? ಎಂಬ ಬಗ್ಗೆ ಮಾತನಾಡುವುದು ಉಚಿತವಲ್ಲವೆಂದೇ ಭಾವಿಸುತ್ತೇನೆ. ಆದರೆ ಶ್ರೀ ಗುರು

ಬಸವಣ್ಣನವರನ್ನು ಕೇವಲ ಓರ್ವ ಸಮಾಜ ಸುಧಾರಕರೆಂದು ಭಾವಿಸದೆ ಅವರ ದಾರ್ಶನಿಕ ವ್ಯಕ್ತಿತ್ವದ ಆಳ-ಹರಹುಗಳನ್ನು ತಿಳಿಯಲು ನನ್ನ ಪ್ರಯತ್ನ ಎಷ್ಟು ಪ್ರಾಮಾಣಿಕವಾದುದಾಗಿದೆ ಎಂಬುದನ್ನು ಸಾಹಿತ್ಯ ಮತ್ತು ದಾರ್ಶನಿಕ ವಲಯದ ವಿದ್ವಾಂಸರಿಗೆ ಸ್ಪಷ್ಟಪಡಿಸಬಯಸುತ್ತೇನೆ.

ಭಾರತದ ಇತಿಹಾಸದಲ್ಲಿ ಬಸವಣ್ಣನವರು ಬೋಧಿಸಿದ ಸಮತಾವಾದದಷ್ಟೇ ಮಹತ್ವಪೂರ್ಣ ಅವರ ಏಕೇಶ್ವರವಾದ. ಭಾರತೀಯ ಧರ್ಮಗಳಲ್ಲಿ ಕಟ್ಟುನಿಟ್ಟಾದ ಏಕೇಶ್ವರವಾದ ಪ್ರತಿಪಾದಿಸಿದವರಲ್ಲಿ ಬಸವಣ್ಣನವರು ಮೊದಲಿಗರು, ನಂತರ ಶ್ರೀ ಗುರು ನಾನಕ್ ಮತ್ತು ಶ್ರೀ ದಯಾನಂದ ಸರಸ್ವತಿ. ಈ ಕ್ರಾಂತಿಕಾರಿ ಏಕೇಶ್ವರವಾದವು ಬಸವಣ್ಣನವರು ನುಡಿಯುವ 'ಲಿಂಗದೇವಾ' ಪದದಲ್ಲಿ ಹರಳುಗಟ್ಟಿದೆ. ಈ ದಿಶೆಯಲ್ಲಿ ಪ್ರಾಂಜಲ ಮನಸ್ಸಿನ ಅಧ್ಯಯನ ಮಾತ್ರ ನನ್ನ ಪ್ರಯತ್ನದ ಹಿಂದಿನ ಘನೋದ್ದೇಶವನ್ನು ಗುರುತಿಸಲು ಸಾಧ್ಯ ಎಂದು ಹೇಳಬಯಸುತ್ತೇನೆ.

ಬಸವರ ನೋಟ - ಖಂಡನಾರ್ಹ

ಶ್ರೀ ಬಸವಣ್ಣನವರು, ಶ್ರೀ ಮಹರ್ಷಿ ಅರವಿಂದರಂತೆ ಶ್ರೇಷ್ಠ ಯೋಗಿಗಳು ಅವರ ವಚನಗಳಲ್ಲಿ ಆ ಯೋಗ ಸಾಧನೆ, ಅದರ ಪರಿಣಾಮಗಳು ರೋಮಾಂಚನಕಾರಿಯಾಗುವಷ್ಟು ವಿವರಣೆ ಕಂಡಿವೆ. ಇಂಥ ಯಾವುದೇ ದಾರ್ಶನಿಕ ಸಂಸ್ಕಾರವಿಲ್ಲದ ಶ್ರೀ ಗಿರಿರಾಜ ಎಂಬ ಲೇಖಕರು ತಮ್ಮ ಕಲ್ಪನೆಯ ಮೂಲಕ ಬಸವಣ್ಣನವರಿಗೆ ಚಿತ್ರ ಹಿಂಸೆ ಕೊಟ್ಟು ಕೊಂದಿದ್ದಾರೆ, ಇತ್ತೀಚೆಗೆ ಶ್ರೀಕಂಠಕುಮಾರ್ ಎಂಬುವವರು ಈ ಬಗ್ಗೆ ನಾಡಿನ ಜನರ ಗಮನ ಸೆಳೆದಿದ್ದಾರೆ. ಸೃಜನಶೀಲತೆ ಎಂದರೆ ಕುಹಕ ಕಲ್ಪನೆಯಲ್ಲ, ಅಭಿವ್ಯಕ್ತಿ ಸ್ವಾತಂತ್ರ್ಯ ಎಂದರೆ ಚಾರಿತ್ರಿಕ ಘಟನೆಗೆ ವಿರುದ್ಧವಾಗಿ ಚಿತ್ರಿಸುವುದಲ್ಲ. ಚಿತ್ರದುರ್ಗದ ಬೃಹನ್ಮಠದಂತಹ ಪ್ರಜ್ಞಾವಂತ ಸಂಸ್ಥೆ ಲೇಖಕರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಕೊಡುತ್ತೇವೆ ಎಂದು ಇಂತಹ ಕುಚೋದ್ಯದ ಪುಸ್ತಕ ಹೊರತಂದುದು ನಿಜಕ್ಕೂ ಖಂಡನಾರ್ಹ. ಹಡಪದ ಅಪ್ಪಣ್ಣನವರು ನಾಪಿತರು, ಕ್ಷೌರಿಕರು ಎಂದು ಹೆಸರಿರುವ ಕ್ಷೌರಿಕ ಕಾಯಕದ ಸಮಾಜದಲ್ಲಿ ಹುಟ್ಟಿ ಶ್ರೇಷ್ಠ ಶರಣರಾದವರು. ಸತ್ಯದ ತಲೆಯ ಮೇಲೆ ತಟ್ಟುವಂತೆ ಹಡಪದ ಅಪ್ಪಣ್ಣನವರನ್ನು ಬ್ರಾಹ್ಮಣ ಜನಾಂಗದಲ್ಲಿ ಹುಟ್ಟಿಸಿ, ಪುಸ್ತಕ ಬರೆಸಲಾಗಿದೆ. ಇಂತಹ ಚಾರಿತ್ರಿಕ ಅನ್ಯಾಯವನ್ನು ಇಂದು ಪ್ರಜ್ಞಾವಂತರು ಅರಿಯಬೇಕಾಗಿದೆ. 'ಬಸವರ ನೋಟ' ಪುಸ್ತಕದಲ್ಲಿ ಬಸವಣ್ಣನವರ ಅಂತಿಮ ದಿನಗಳನ್ನು ಅಸಹ್ಯಗೊಳಿಸಿ ಚಿತ್ರಿಸಲಾಗಿದೆಯಲ್ಲದೆ ಅವರು ಶ್ರೀಶೈಲದಲ್ಲಿ ಲಿಂಗೈಕ್ಯರಾದಂತೆ ಕಥೆ ಕಟ್ಟಲಾಗಿದೆ. 'ಬಸವ ವಚನ ದೀಪ್ತಿ' ಮತ್ತು ಚಿತ್ರದುರ್ಗ ಬೃಹನ್ಮಠದ ಪ್ರಕಟಣೆ 'ಬಸವರ ನೋಟ' ಕುರಿತು ತೌಲನಿಕ ಮತ್ತು ದಾರ್ಶನಿಕ ಅಧ್ಯಯನವನ್ನು ಕೈಗೊಂಡರೆ ಬಸವ ವಚನ ದೀಪ್ತಿ ಎಂತಹ ಉತ್ಕೃಷ್ಟ ಕೃತಿಯಾಗಿ ನೆಲೆನಿಲ್ಲುವುದು ಎಂಬುದನ್ನು ಪ್ರಾಜ್ಞರು ಅರಿಯದೆ ಇರರು. ಅಂಥ ಅಧ್ಯಯನಕ್ಕೆ ಇದು ಸಕಾಲ. (ದಿ.೧೩-೧೨-೧೯೯೭ರಂದು ಬೆಂಗಳೂರಿನಲ್ಲಿ ಕರೆದ ಪತ್ರಿಕಾ ಗೋಷ್ಠಿಯಲ್ಲಿ ಬಿಡುಗಡೆ ಮಾಡಿದ ವಿವರ)

ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಸಂಪಾದಕಿ ; 'ಬಸವ ವಚನ ದೀಪ್ತಿ'

ರಾಷ್ಟ್ರೀಯ ಬಸವ ದಳಗಳವರಿಗೆ ಮತ್ತು ಇತರ ಬಸವ ಭಕ್ತರಿಗೆ ಸೂಚನೆ

ವಾರ್ತಾ ಪತ್ರಿಕೆಗಳಲ್ಲಿ ಅಲ್ಲೊಂದು ಇಲ್ಲೊಂದು ಪತ್ರಿಕಾ ಹೇಳಿಕೆಗಳು ಬರುತ್ತವೆ. ಅದರಲ್ಲಿ ರಾಷ್ಟ್ರೀಯ ಬಸವ ದಳದವರು ಎಂಬ ಹೆಸರಿನ ಕೆಳಗೇ ಬಗೆಬಗೆಯ ಹೇಳಿಕೆ ಕೊಡುತ್ತಿರುತ್ತಾರೆ. ಅಂಥ ಒಂದೆರಡು ಹೇಳಿಕೆಗಳಲ್ಲಿ ''ಬಸವ ವಚನ ದೀಪ್ತಿ'' ಪುಸ್ತಕ ವಾಪಸ್ಸು ಪಡೆಯುವವರೆಗೆ ತಾವು ಶರಣಮೇಳಕ್ಕೆ ಹೋಗುವುದಿಲ್ಲ ಮತ್ತು ದೇಣಿಗೆ ಕೊಡುವುದಿಲ್ಲ ಎಂಬ ಹೇಳಿಕೆ ಕಂಡು ಕೆಲವು ಶರಣರು ಗಾಬರಿಗೊಂಡು ಪತ್ರವನ್ನು ಬರೆಯುತ್ತಾರೆ ಮತ್ತು ಫೋನ್ ಮಾಡುತ್ತಾರೆ. ಅಷ್ಟೆಲ್ಲ ಗಾಬರಿಗೊಳ್ಳಬೇಕಾಗಿಲ್ಲ. ಒಂದು ಬೃಹತ್ ಗಿಡದ ಎರಡು ಎಲೆಗಳು ಗಾಳಿ ಬೀಸಿದಾಗ ಉದುರಿದ ಮಾತ್ರಕ್ಕೆ ಗಿಡವೇ ಬಿದ್ದಂತಲ್ಲ.

ರಾಷ್ಟ್ರೀಯ ಬಸವ ದಳ ಎಂಬ ಹೆಸರಿಟ್ಟು ನಾವೇ ಶುರು ಮಾಡಿರಬಹುದು, ಅಥವಾ ಅವರೇ ಶುರು ಮಾಡಿಕೊಂಡಿರಬಹುದು, ಈ ಸಂಘಟನೆಗೆ ಒಳ್ಳೆಯ ಹೆಸರು (ಮಹಾಚೈತ್ರ ಹೋರಾಟದ ಯಶಸ್ಸಿನಿಂದ) ಬಂದಿತೆಂದು ಅನೇಕರು ಅನೇಕ ಕಡೆ ತೆರೆದಿದ್ದಾರೆ. ಆದರೆ ಅವರೆಲ್ಲರೂ ತತ್ತ್ವನಿಷ್ಠರಲ್ಲ. ಉದಾಹರಣೆಗೆ, ರಾಷ್ಟ್ರೀಯ ಬಸವ ದಳಕ್ಕೆ ಗೌರವಾಧ್ಯಕ್ಷರಾಗಿದ್ದ ಓರ್ವ ಸ್ವಾಮಿಗಳು ಗಣಪತಿ ಪ್ರತಿಷ್ಠಾಪನೆಗೆ ಪ್ರಯತ್ನಿಸಿದಾಗ (ಇಷ್ಟರೊಳಗೆ ಮಾಡಿರಲೂಬಹುದು) ನಾವು ಪತ್ರ ಬರೆದು ವಿರೋಧಿಸಬೇಕಾಯಿತು. ಇನ್ನೆರಡು ಕಡೆ ಸ್ವಾರ್ಥ ಸಾಧನೆಗಾಗಿ ತೂರಿಕೊಂಡು ದುಡ್ಡು ಎತ್ತಿ ಅಪವ್ಯಯ ಮಾಡಿದಾಗ ನಿಷ್ಠಾವಂತ ಪ್ರಾಮಾಣಿಕ ಹಿರಿಯ ಶರಣರು ಅದನ್ನು ಪ್ರತಿಭಟಿಸಿದಾಗ ಆ ಸ್ವಾರ್ಥಿಗಳು ಗುಂಪುಕಟ್ಟಿಕೊಂಡು ಒಡಕು ಹುಟ್ಟಿಸಿದ್ದಿದೆ. ಮಾನವ ಸಹಜ ದೌರ್ಬಲ್ಯದಿಂದ ಇಂಥ ಹಲವಾರು ಆಂತರಿಕ ಸಮಸ್ಯೆಗಳು ಇದ್ದು, ಇಂಥವನ್ನು ನಾವು ಅನಗತ್ಯವಾಗಿ ಸಮಯಹರಣ ಮಾಡುವಂತೆ ಸಾರ್ವಜನಿಕವಾಗಿ ಚರ್ಚಿಸುವುದಿಲ್ಲ.

ಅಂಥ ಯಾವ ಬಸವ ದಳಗಳು, ಬಸವ ದಳಗಳವರು ಸಿಗುತ್ತಾರೋ ಎಂದು ಪಾಪ ಕೆಲವಾರು ಸ್ವಾಮಿಗಳು ಪಿರಿಪಿರಿ ಊರೂರು ತಿರುಗುತ್ತಿದ್ದಾರೆ-ತಮ್ಮ ಸ್ಥಾನಗೌರವ ಮರೆತು. ಅಷ್ಟು ಶ್ರಮಪಟ್ಟು ಅಲೆದಿದ್ದಕ್ಕೆ ಒಂದೆರಡು ಅವರ ಭಿಕ್ಷಾಪಾತ್ರೆಗೆ ಬಿದ್ದರೆ ಕಳವಳಪಡುವ ಕಾರಣವಿಲ್ಲ. ರಾಷ್ಟ್ರೀಯ ಬಸವ ದಳದ ಭದ್ರಕೋಟೆಯನ್ನು ಸಡಿಲಿಸುವಲ್ಲಿ ಅನೇಕರು ನಿರೀಕ್ಷಿಸಿದಷ್ಟು ಯಶಸ್ಸು ಕಂಡಿಲ್ಲ. ಕೋಟೆಯೊಳಗೆ ಸೇರದೆ, ಅರ್ಥಾತ್ ಅದರ ಅವಿಭಾಜ್ಯ ಅಂಗವಾಗದೆ ಅಲ್ಲಲ್ಲೆ ಬಿದ್ದಿದ್ದ ಕೆಲವು ಕಲ್ಲುಗಳನ್ನು ಎತ್ತಿಕೊಂಡಿದ್ದಾರೆ ಅಷ್ಟೆ! ಮೂರು ನೂರು ರಾಷ್ಟ್ರೀಯ ಬಸವ ದಳಗಳ ಶಾಖೆಗಳಲ್ಲಿ ಕೇವಲ ನಾಲ್ಕೈದು ಪರಾಶ್ರಯಕ್ಕೆ ಹೋಗಿವೆ. ಅವುಗಳಲ್ಲೂ ಅರ್ಧಜನ ಮಾತೃಸಂಸ್ಥೆಗೆ ದ್ರೋಹಬಗೆಯಲಾರೆವೆಂದು ದೃಢವಾಗಿದ್ದಾರೆ. ರಾಷ್ಟ್ರೀಯ ಬಸವ ದಳಗಳವರ ತತ್ತ್ವನಿಷ್ಠೆ, ವಿಚಾರಪ್ರೌಢಿಮೆ ನನಗೆ ಅಪಾರ ಆನಂದ-ಆಶ್ಚರ್ಯ ಉಂಟುಮಾಡಿವೆ ಮತ್ತು ಈ 'ಲಿಂಗದೇವನ' ದಿವ್ಯ ಪ್ರಸಂಗದಲ್ಲಿ, ಕೆಲವು ರಾ.ಬ.ದಳ ಮತ್ತು (ಅವರು ಹೊರಗೆ ಹೋದರೆ ಸಾಕೆಂದು ಉಳಿದವರು ತಪಸ್ಸು ಮಾಡುತ್ತಿದ್ದರು) ಕೆಲವು ಜನರು ದೂರ ಹೋದುದು ಮನೆಯನ್ನು ಸ್ವಚ್ಛ ಮಾಡಿದಂತಾಗಿದೆ; ನಿರುಮ್ಮಳವಾಗಿದೆ. ನಿಷ್ಠಾವಂತ ರಾಷ್ಟ್ರೀಯ ಬಸವ ದಳಗಳವರ ಭಕ್ತಿ-ನಿಷ್ಠೆ ವೃದ್ಧಿಗೊಂಡಿವೆ ಎಂಬುದನ್ನು ತಾವೆಲ್ಲ ಮನಗಾಣಬೇಕು.

-ಮಾತಾಜಿ, ೧೨-೧೨-೧೯೯೭

ಬಸವ ಧರ್ಮದ ಮಹಾಜಗದ್ಗುರು ಪೀಠದ ಪ್ರಥಮ ಪೀಠಾಧೀಶರಾಗಿದ್ದ ಲಿಂ॥ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳವರು



ವಿಶ್ವಗುರು ಬಸವಣ್ಣನವರು ಹುಟ್ಟಿದ ನಾಡಿನಲ್ಲಿ ಮಣಿಗವಳ್ಳಿಯ ಮಾಣಿಕ್ಯವಾಗಿ ೧೫-೯-೧೯೩೧ ರಂದು ಜನಿಸಿ ಬಿ.ಎ.ಆನರ್ಸ್ ಪದವೀಧರರಾಗಿ ಬಸವ ಗುರುವಿನ ಪ್ರೇರಣೆಯಿಂದ ೨೫-೪-೧೯೫೫ ರಂದು ಆಧ್ಯಾತ್ಮಿಕ ಮಾನಸಾಂತರ ಹೊಂದಿ ೧೯-೧೧-೧೯೫೬ ರಂದು ಜ್ಞಾನ ಸನ್ಯಾಸವನ್ನು ಸ್ವೀಕರಿಸಿ ಅಂದಿನಿಂದ ಕೊನೆಯವರೆಗೂ ಒಂದು ದಿನವೂ ಬಿಡದಂತೆ ಪ್ರವಚನದ ಮೂಲಕ ಜ್ಞಾನ ದಾಸೋಹ ಮಾಡುತ್ತಿದ್ದಂತಹ ಪೂಜ್ಯ ಲಿಂಗಾನಂದ ಸ್ವಾಮಿಗಳು ಅಪೂರ್ವ ವಾಗ್ಮಿಗಳು, ಪ್ರತಿಭಾನ್ವಿತ ಚೇತನ, ಪ್ರವಚನ ಪಿತಾಮಹರು.

ವಿಶ್ವಗುರು ಬಸವಣ್ಣನವರು ಬೋಧಿಸಿದ ವಿಶ್ವಧರ್ಮದ ಸಾರವನ್ನು ಪ್ರವಚನಗಳ ಮೂಲಕ ಮಾತ್ರವಲ್ಲ ಸಾಹಿತ್ಯ ಕೃತಿಗಳ ಮೂಲಕ ಪ್ರಚಾರ ಮಾಡಿದ್ದೇ ಅಲ್ಲದೆ, ಹಲವಾರು ಧರ್ಮ ಪ್ರಚಾರಕರನ್ನು ತರಬೇತಿಗೊಳಿಸಿ, ಅನೇಕ ಸಂಸ್ಥೆಗಳನ್ನು ಕಟ್ಟಿದ ಕ್ರಿಯಾಶೀಲ ಮಹಂತರು. ಪ್ರಪ್ರಥಮ ಮಹಿಳಾ ಜಗದ್ಗುರು ಪೀಠವನ್ನು ಧಾರವಾಡದಲ್ಲಿ ಜಗನ್ಮಾತಾ ಅಕ್ಕಮಹಾದೇವಿ ಅನುಭಾವ ಪೀಠ ಎಂಬ ಹೆಸರಿನಿಂದ ಸ್ಥಾಪಿಸಿ, ತಮ್ಮ ಕರಕಮಲ ಸಂಜಾತೆ ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರನ್ನು ಪ್ರಥಮ ಅಧಿಕಾರಿಣಿಯನ್ನಾಗಿ ಮಾಡಿ, ಸ್ತ್ರೀ ಸಮಾನತಾ ತತ್ವವನ್ನು ಎತ್ತಿಹಿಡಿದ ಕ್ರಾಂತಿಕಾರಿಗಳು. ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯನ್ನು ಸ್ಥಾಪಿಸಿ, ಅದರ ಚೇರ್ಮನ್ನರಾಗಿ ಸಂಸ್ಥೆಯನ್ನು ಬೃಹತ್ತಾಗಿ ಬೆಳೆಸಿದುದೇ ಅಲ್ಲದೆ, ಇದೀಗ ಕೂಡಲ ಸಂಗಮದ ಕ್ಷೇತ್ರವನ್ನು ಸರ್ವಾಂಗ ಸುಂದರವಾಗಿ ಕಟ್ಟಲೋಸುಗ ಬಸವ ಧರ್ಮ ಪೀಠ ಟ್ರಸ್ಟನ್ನು ರಚಿಸಿ, ಬೃಹತ್ ಯೋಜನೆಗಳನ್ನು ಹಾಕಿರುವ ಅವಿಶ್ರಾಂತ ಕ್ರಿಯಾಮೂರ್ತಿ. ನಾಡಿನಾದ್ಯಂತ ಸಂಚರಿಸಿ, ಜನಮನದಲ್ಲಿ ಬಸವ ತತ್ವದ ಬೀಜಗಳನ್ನು ಬಿತ್ತಿ; ಎತ್ತೆತ್ತ ನೋಡಿದಡತ್ತತ್ತ ಬಸವನೆಂಬ ಬಳ್ಳಿ, ಎತ್ತಿ ನೋಡಿದರೆ ಲಿಂಗವೆಂಬ ಗೊಂಚಲು, ಒತ್ತಿ ಹಿಂಡಿದರೆ ಭಕ್ತಿ ಎಂಬ ರಸ ' ಎಂಬ ವಾತಾವರಣವನ್ನು ನಿರ್ಮಾಣ ಮಾಡಿ, ಬಸವ ಯುಗಕ್ಕೆ ನಾಂದಿ ಹಾಡಿದ ಜಂಗಮ ಜ್ಯೋತಿ. ಇಂತಹ ಪೂಜ್ಯರು ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ೧೩-೧-೧೯೯೨ ರಂದು ಏರಿದರು. ಸಾರ್ಥಕದ ಬಾಳನ್ನು ಬಾಳಿ, ದಿನಾಂಕ ೩೦-೬-೧೯೯೫ರಂದು ಲಿಂಗೈಕ್ಯರಾಗಿ ಕ್ರಿಯಾ ವಿಶ್ರಾಂತಿಯನ್ನೈದಿದರು.

ನಿಸ್ವಾರ್ಥ ದಾಸೋಹಿ, ಬಸವ ಗುರು ಸುತೆ ಶರಣೆ. ಟಿ.ಎಲ್.ಶಾರದಮ್ಮ

''ಕಾಯಕದಿಂದ ಗಳಿಸಿದ ಪವಿತ್ರ ಹಣವನ್ನು ಶ್ರೀ ಗುರು ಬಸವಣ್ಣನವರ ಸನ್ನಿಧಿಗೆ ಸಲ್ಲಿಸಬೇಕು. ಅದು ಪವಿತ್ರ ಕಾರ್ಯಕ್ಕೆ ವಿನಿಯೋಗವಾಗಬೇಕೇ ವಿನಾ ಯಾರದೋ ಪಾಲಾಗಬಾರದು. ಆದ್ದರಿಂದ ಗುರು ಬಸವಣ್ಣನವರ ತತ್ವ ಪ್ರಚಾರ ಮಾಡುತ್ತಿರುವ ಪೂಜ್ಯ ಮಾತಾಜಿಯವರ ಬಳಿಗೆ ಕರೆದೊಯ್ಯಿರಿ. ನಮಗೂ ವಯಸ್ಸಾಯಿತು.'' ಎಂದು ೭೦ ವರ್ಷ ವಯಸ್ಸಿನ ಶರಣೆ. ಟಿ.ಎಲ್.ಶಾರದಮ್ಮನವರು ಮತ್ತು ಅವರ ಹಿರಿಯ ಸೋದರಿ ೭೬ ವಯಸ್ಸಿನ ಬಸಮ್ಮನವರು ಒತ್ತಾಯಿಸತೊಡಗಿದಾಗ ಶರಣ. ಗಂಗಯ್ಯ ತಹಸೀಲ್ದಾರ್ ಅವರು ಮತ್ತು ಅವರ ಪತ್ನಿ ಶರಣೆ. ರೇಖಾ ಕರೆದುಕೊಂಡು ಬಂದು ದರ್ಶನ ಮಾಡಿಸಿದರು. ಶರಣೆ. ಶಾರದಮ್ಮನವರ ನಿರ್ಮಲ ಭಕ್ತಿ, ನಿಸ್ವಾರ್ಥ ತ್ಯಾಗ, ಧನ ದಾಸೋಹದ ಉತ್ಕಟತೆ ಕಂಡು ನನಗೆ ಅಚ್ಚರಿಯಾಯಿತು ''ಅಪ್ಪನ ಸೊತ್ತು ಅಪ್ಪನಿಗೆ ಸಲ್ಲಿಸುವ ತನಕ ನಮಗೆ ಸಮಾಧಾನವಿಲ್ಲ'' ಎಂದು ಒಂದು ಲಕ್ಷ ರೂಪಾಯಿಗಳ ದೇಣಿಗೆ ಕೊಟ್ಟುದಲ್ಲದೆ; ತಮ್ಮಲ್ಲಿದ್ದ ಬೆಲೆ ಬಾಳುವ ಸುಮಾರು ೫೫೭೪೫-೦೦ ರೂ.ಗಳ ಒಡವೆಯನ್ನು ಅರ್ಪಿಸಿದರು. ಅವರಿಗೆ ಬರಬೇಕಾಗಿದ್ದ ಒಂದು ಮೊತ್ತ ೩೦,೦೦೦ (ಮೂವತ್ತು ಸಾವಿರ) ರೂ.ಗಳನ್ನು ಸಮರ್ಪಿಸಿ, ಉಭಯ ಶರಣೆಯರೂ ಬಸವ ಧರ್ಮ ಪೀಠದ ಮಹಾಮನೆ ಮಹಾಮಠದಲ್ಲಿ ಬಸವ ಸನ್ನಿಧಿಯಲ್ಲಿದ್ದಾರೆ.

ಒಂದು ಲಕ್ಷದ ಎಂಬತ್ತಾರು ಸಾವಿರ ರೂ.ಗಳನ್ನು ಗುರುಕಾಣಿಕೆಯಾಗಿ ಸಮರ್ಪಿಸಿದ್ದಲ್ಲದೆ ಶರಣೆ. ಶಾರದಮ್ಮನವರು ತಮ್ಮ ೭೦ನೆಯ ವಯಸ್ಸಿನಲ್ಲಿ, ಶರಣೆ. ಬಸಮ್ಮನವರು ೭೬ನೆಯ ವಯಸ್ಸಿನಲ್ಲಿ ಬಸವೇಶ್ವರ ವಿಶ್ವವಿದ್ಯಾಲಯ ನಾಮಕರಣ ಚಳುವಳಿಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಆಮರಣ ಉಪವಾಸ ಸತ್ಯಾಗ್ರಹ ಕೈಗೊಂಡು ಜೈಲಿಗೂ ಹೋಗಿದ್ದರು. ಹಿಂದೆ ಸ್ವಾತಂತ್ರ್ಯ ಚಳುವಳಿಯಲ್ಲೂ ರಾಷ್ಟ್ರಾಭಿಮಾನ ಪ್ರೇರಿತರಾಗಿ ಚಳುವಳಿಯಲ್ಲಿ ಜೈಲಿಗೆ ಹೋಗಿ ಬಂದಿದ್ದ ಇವರು ಅಚಲ ನಿಷ್ಠೆಯಿಂದ ಗುಲಬರ್ಗಾದಲ್ಲಿ ಆಮರಣ ಉಪವಾಸದಲ್ಲಿ ಭಾಗಿಗಳಾಗಿದ್ದರು. ವೃದ್ಧಾಪ್ಯದಲ್ಲಿ ಸಹ ಆಹಾರ ಸ್ವೀಕರಿಸಲು ಸಿದ್ಧರಿರದೆ, ಇನ್ನಿತರ ಗುಲಬರ್ಗಾ-ಗಡಹಿಂಗ್ಲಾಜ್ ಶರಣ-ಶರಣೆಯರೊಡನೆ ಇವರು ಪ್ರಾಮಾಣಿಕವಾಗಿ ನಿರಾಹಾರದಿಂದ ಇದ್ದುದು ಎಲ್ಲರನ್ನೂ ಬೆರಗುಗೊಳಿಸಿತ್ತು.

ಶರಣೆ. ಟಿ.ಎಲ್.ಶಾರದಮ್ಮ ಪ್ರೈಮರಿ ಸ್ಕೂಲ್ ಶಿಕ್ಷಕಿಯಾಗಿದ್ದು ನಿವೃತ್ತರಾಗಿದ್ದಾರೆ. ಅವರ ಯಜಮಾನರು ಟಿ.ವಿ.ಆಂಜನಪ್ಪ ಉರುಫ್ ರಾಜಣ್ಣನವರು ಮುನಿಸಿಪಲ್ ಆಫೀಸ್‌ನಲ್ಲಿ ಆಕ್ಟ್ರಾಯ್ ಇನ್ಸ್‌ಪೆಕ್ಟರ್ ಆಗಿದ್ದರು. ಮೂಲತಃ ತುಮಕೂರಿನವರಾದ ಅವರು ಅಲ್ಲಿಯೇ ನೆಲೆಸಿದ್ದರು. ಶರಣ. ಆಂಜನಪ್ಪನವರು ಈಗ ೧೨ ವರ್ಷಗಳ ಹಿಂದೆ ಲಿಂಗೈಕ್ಯರಾದರು. ಮಕ್ಕಳಿರಲಿಲ್ಲವಾದರೂ ಯಾರನ್ನೂ ದತ್ತು ತೆಗೆದುಕೊಳ್ಳಹೋಗದೆ ತಮ್ಮ ಕಾಯಕದ ಪ್ರತಿಫಲವನ್ನು ಬಸವ ಗುರು ಚರಣಕ್ಕೆ ಅರ್ಪಿಸಲೆಂದು ಕಾಯುತ್ತಿದ್ದರಂತೆ. ಶಾರದಮ್ಮನವರ ಅಕ್ಕ ಬಸಮ್ಮನವರು ತಮ್ಮಯ್ಯಶೆಟ್ಟಿ ಅವರನ್ನು ತಮ್ಮ ೧೫ನೆಯ ವಯಸ್ಸಿನಲ್ಲೇ ವಿವಾಹವಾಗಿ, ೧೮ನೆಯ ವಯಸ್ಸಿಗೇ ತಮ್ಮ ಪತಿಯನ್ನು ಕಳೆದುಕೊಂಡು ತಂಗಿಯ ಆಶ್ರಯಕ್ಕೆ ಬಂದರು. ಶರಣ ಸಂಸ್ಕಾರದಲ್ಲೇ ಬೆಳೆದು ಬಂದ ಈ ಉಭಯ ಸೋದರಿಯರು ವಿನಯದ ಸಾಕಾರ ಮೂರ್ತಿಗಳು. ಪೂಜಾನಿಷ್ಠೆ, ಬಸವ ಭಕ್ತಿಯನ್ನು ಸರ್ವಾಂಗದಲ್ಲೂ ತುಂಬಿಕೊಂಡು ಹಿರಿಯ ಚೇತನಗಳಾಗಿ ಬಸವ ಧರ್ಮ ಪೀಠದ ಮಹಾಮನೆ ಮಹಾಮಠಕ್ಕೆ ಹೆಚ್ಚಿನ ಕಳೆಯನ್ನು ಶಾರದಮ್ಮ-ಬಸಮ್ಮನವರು ತಂದುಕೊಟ್ಟು ಎಲ್ಲರ ಪ್ರೀತಿ-ಆದರ-ಗೌರವಗಳಿಗೆ ಪಾತ್ರರಾಗಿದ್ದಾರೆ. ಅವರ ಈ ಸಜ್ಜನಿಕೆ ಔದಾರ್ಯಗಳಿಗಾಗಿ ಬಸವ ಗುರು ಕೃಪೆ ಸದಾ ಇರಲೆಂದು ಹಾರೈಸುವೆ.

--ಮಾತಾಜಿ

೧. ಜಯತು ಮಾತೆ ಮಹಾದೇವಿ

ಜಯತು ಮಾತೆ ಮಹಾದೇವಿ ಜಗದ್ಗುರುವೇ ವಂದಿಪೆ
ಜಯತು ಜಯತು ಬಸವಾತ್ಮಜೆ ಜ್ಞಾನ ನಿಧಿ ಕರುಣಿಸು ॥ ಪ॥
ಪೂಜ್ಯ ಲಿಂಗಾನಂದರಿಗೆ ಶಿಷ್ಯೆಯಾಗಿ ಬಂದಿರಿ
ಬಸವವಾಣಿ ಸಾರುತಲಿ ಜನ-ಮನವ ಗೆಲಿದಿರಿ
ತನ್ನ ತನವನೆಲ್ಲ ಬಿಟ್ಟು ತತ್ತ್ವಕ್ಕಾಗಿ ದುಡಿದಿರಿ
ಗುರು ಮೆಚ್ಚಿದ ಶಿಷ್ಯೆಯಾಗಿ ಜ್ಞಾನ ಜಗದಿ ಮೆರೆದಿರಿ ॥೧॥
ಸ್ತ್ರೀ ಪೀಠವ ಆರೋಹಿಸಿ ಪ್ರಥಮ ಗುರು ತಾವಾದಿರಿ
ಆತ್ಮ ಬಲದಿ ಮುನ್ನಡೆದು ಸ್ತ್ರೀಗೆ ಸ್ಪೂರ್ತಿ ನೀಡಿದಿರಿ
ಬಸವ ತತ್ತ್ವ ಕಹಳೆಯೂದಿ ಲೋಕ ಜಾಗೃತಿ ಗೈದಿರಿ
ಗುರುಮುಟ್ಟಿ ಗುರುವಾಗುವ ಸಾಧನೆಯನೆ ತೋರ್ದಿರಿ ॥೨॥
ತಮ್ಮ ಶ್ರಮದ ಕುರುಹಾಗಿ ಶರಣಮೇಳ ನಡೆದಿದೆ
ಶರಣ ಮೇಳ ಒಂದುಗೂಡಿ ಬಸವಗೀತೆ ಹಾಡಿದೆ
ಬಸವ ಧರ್ಮ ಪೀಠಕಿಂದು ಗುರುವು ತಾವಾದಿರಿ
ಧನ್ಯವಿಂದು ನಿಮ್ಮ ಪಡೆದು ಎಮ್ಮ ಶರಣ ಸಂತತಿ ॥೩॥
ಗುರು ಬಸವ ಸಂಕಲ್ಪವ ಪೂರೈಸಲು ಬಂದಿಹಿರಿ
ಶಿರಬಾಗಿ ನಮಿಸುವೆವು ತಮ್ಮ ಚರಣ ಕಮಲಕೆ
ಬಸವ ಪಥದಿ ನಡೆಯಲೆಮಗೆ ಮಾರ್ಗದರ್ಶಿಯಾದಿರಿ
ಜಯತು ಮಾತೆ ಮಹಾದೇವಿ ಸಚ್ಚಿದಾನಂದ ಸತಿ ॥೪॥

೨. ಬಸವ ಬಾನಿನ ತಾರೆ ಗಂಗಾ ಮಾತಾಜಿ

ಬಸವ ಬಾನಿನ ತಾರೆ ಜಯ ಗಂಗಾ ಮಾತಾಜಿ
ಬಸವ ತತ್ತ್ವದ ಜ್ಞಾನ ವಾಹಿನಿಯು ನೀವಾಗಿ ॥ ಪ॥
ಪೂಜ್ಯ ಲಿಂಗಾನಂದರ ಆಧ್ಯಾತ್ಮ ಸುತೆಯಾಗಿ
ಅಡಿ ಇಟ್ಟ ನೆಲದಲ್ಲಿ ದೀವಿಗೆಯ ಹಚ್ಚುತಾ
ಪ್ರವಚನದ ನಿಮ್ಮ ನುಡಿ ಮನಕಾಗಿ ಚೆನ್ನುಡಿಯು
ಬಸವಾ ಬಸವಾ ಎನುತ ಬಸವ ತತ್ತ್ವವ ಸಾರಿ ॥೧॥
ಪೂಜ್ಯ ಮಾತಾಜಿಯ ಕರಕಮಲ ಸಂಜಾತೆ
ಮಾತೆಯಂತೆಯೆ ಶ್ರೇಷ್ಠ ವಾಗ್ಮಿಯು ನೀವಾಗಿ
ಪೂಜ್ಯರೀರ್ವರ ಮನದ ಹೊಂಗಿರಣದ ಬೆಳಕೆ
ಅಕ್ಕಮಹಾದೇವಿಯ ಪೀಠವೇರುತಲಿಂದು ॥೨॥
ಒಮ್ಮನದಿ ಮುನ್ನಡೆದು ಜಗದ್ಗುರುವು ಆಗಿಹಿರಿ
ಗುರುವರ್ಯರಾಣತಿ ಶಿರದಿ ಮೆರೆಸುತಲಿ
ಬೇಡುವೆವು ನಾವಿಂದು ಶ್ರೀಗುರು ಬಸವನಾ
ಹಾರಿಸಲಿ ನೀವೆಂದು ಎಲ್ಲೆಡೆಯು ಬಸವ ಧ್ವಜ ॥೩॥

– ಶರಣೆ ಭಾರತಿ ಕೆಂಪಯ್ಯ, ಬೆಂಗಳೂರು

ಶರಣ ಮೇಳಕ್ಕೆ ಕಾರ್ಯಕರ್ತರನ್ನು ಕಳಿಸುವ ಬಗ್ಗೆ ರಾಷ್ಟ್ರೀಯ ಬಸವ ದಳದವರಿಗೆ ಸೂಚನೆ

ಶರಣ ಮೇಳ ಉತ್ಸವವು ವರ್ಷದಿಂದ ವರ್ಷಕ್ಕೆ ಹೆಚ್ಚು ಹೆಚ್ಚು ಜನರನ್ನು ಆಕರ್ಷಿಸುತ್ತಿರುವುದು ಸರಿಯಷ್ಟೆ. ಕಳೆದ ವರ್ಷ ೩.೧/೨ ಲಕ್ಷಕ್ಕೂ ಮೀರಿ ಜನರು ಸಮಾವೇಶಗೊಂಡು ಶರಣ ಮೇಳಕ್ಕೆ ಮೆರಗು ನೀಡಿದರು. ರಾಷ್ಟ್ರೀಯ ಬಸವ ದಳಗಳ ಕಾರ್ಯಕರ್ತರು/ಸ್ವಯಂ ಸೇವಕರು ನಿಷ್ಠಾವಂತರಾಗಿ ಹಗಲಿರುಳು ದುಡಿದು, ಶರಣ ಮೇಳದ ಯಶಸ್ಸಿಗೆ ಕಾರಣರಾದರು. ಪ್ರತಿವರ್ಷದಂತೆ ಈ ವರ್ಷವೂ ಸಹ ರಾಷ್ಟ್ರೀಯ ಬಸವ ದಳದವರು ಕಡ್ಡಾಯವಾಗಿ ತಮ್ಮ ಸ್ಥಳೀಯ ಘಟಕದಿಂದ ಕಾರ್ಯಕರ್ತರನ್ನು ಕಳಿಸುವ ವ್ಯವಸ್ಥೆ ಮಾಡಬೇಕು. ಸ್ವಯಂ ಸೇವಕರಿಗೆ ಊಟ ವಸತಿಗಳನ್ನು 'ಶರಣ ಮೇಳ' ಉತ್ಸವ ಸಮಿತಿ'ಯು ನೋಡಿಕೊಳ್ಳುವುದು. ಆದರೆ ಅವರಿಗೆ ಕೂಡಲಸಂಗಮಕ್ಕೆ ಹೋಗಿ ಬರುವ ಖರ್ಚನ್ನು (ಅವರು ಬಡತನದಲ್ಲಿದ್ದು ಅಪೇಕ್ಷಿಸಿದರೆ) ಆಯಾ ರಾಷ್ಟ್ರೀಯ ಬಸವದಳದವರೇ ಭರಿಸತಕ್ಕದ್ದು. ಸ್ವಯಂ ಸೇವಕರು ಕೂಡಲಸಂಗಮಕ್ಕೆ ದಿನಾಂಕ ೪-೧-೯೭ರ ಒಳಗೇ ಬರತಕ್ಕದ್ದು. ಪ್ರತಿವರ್ಷ ತಪ್ಪದೇ ಬರುವ ಕಾರ್ಯಕರ್ತರು ಅಥವಾ ಹೊಸದಾಗಿ ಸ್ವಯಂ ಸೇವಕರಾಗಿ ಬರುವವರು ತಮ್ಮ ಊರಿನ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರು/ಕಾರ್ಯದರ್ಶಿಯವರಿಂದ ಅಧಿಕೃತ ಪತ್ರವನ್ನು ಕಡ್ಡಾಯವಾಗಿ ತರತಕ್ಕದ್ದು.

ಬಸವ ಭಕ್ತರಿಂದ ಸೇವೆಗೆ ಕರೆ

ಕಾರ್ಯಕರ್ತರು/ಸ್ವಯಂ ಸೇವಕರನ್ನು ಹೊರತುಪಡಿಸಿ ಪ್ರತಿಯೊಂದು ರಾಷ್ಟ್ರೀಯ ಬಸವದಳದಿಂದ ಶರಣಮೇಳಕ್ಕೆ ಬರುವ ಎಲ್ಲಾ ಬಸವ ಭಕ್ತರು ಪವಿತ್ರ ಶರಣ ಮೇಳದಲ್ಲಿ ಕಿಂಚಿತ್ ಆದರೂ ಸೇವೆಯನ್ನು ಮಾಡಿಯೇ ತಮ್ಮ ಊರಿಗೆ ತೆರಳಬೇಕೆಂಬ ನಿಲುವನ್ನು ತಳೆಯಬೇಕು. ಕಳೆದ ವರ್ಷ ಧಾರವಾಡ ರಾಷ್ಟ್ರೀಯ ಬಸವದಳದ ಶರಣ ಶರಣೆಯರು ಈ ನಿಲುವು ತಳೆದು ಒಂದು ಹೊತ್ತಿನ ಪ್ರಸಾದವನ್ನು ಲಕ್ಷಾಂತರ ಜನಕ್ಕೆ ನೀಡಿ ಸೇವೆ ಸಲ್ಲಿಸಿದರು. ಇದರಂತೆ ಎಲ್ಲ ರಾಷ್ಟ್ರೀಯ ಬಸವ ದಳದವರೂ ತಮ್ಮ ಕರ್ತವ್ಯವೆಂಬಂತೆ ಸ್ವಲ್ಪವಾದರೂ ತನುವಿನ ಸೇವೆ ಸಲ್ಲಿಸಬೇಕು. ಅದಕ್ಕಾಗಿ ಈ ಬಾರಿ ಶರಣ ಮೇಳದಲ್ಲಿ ಸೇವೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಅದೇನೆಂದರೆ,

ಶರಣ ಮೇಳದ ಪ್ರಸಾದವನ್ನು ನೀಡುವ ಕಾರ್ಯ ದಿನಾಂಕ ೧೨ರಿಂದ ೧೫ರವರೆಗೆ ನಿರಂತರವಾಗಿ ನಡೆಯುತ್ತಲಿರುವುದು ಸರಿಯಷ್ಟೆ. ಪ್ರತಿದಿನ ಬೆಳಿಗ್ಗೆ ೭ರಿಂದ ೧೨ರವರೆಗೆ, ಮಧ್ಯಾಹ್ನ ೧೨ರಿಂದ ೫ರವರೆಗೆ ಸಂಜೆ ೫ರಿಂದ ರಾತ್ರಿ ೧೨ರವರೆಗೆ ಹೀಗೆ ಪ್ರಸಾದದ ವ್ಯವಸ್ಥೆ ನಡೆಯುವುದು.

ಈ ಸಂದರ್ಭದಲ್ಲಿ ಮೇಲೆ ಸೂಚಿಸಿದಂತೆ, ಬಸವ ಭಕ್ತರು ೪ ದಿನದ ಕಾರ್ಯಕ್ರಮದಲ್ಲಿ ಯಾವುದಾದರೂ ಒಂದು ದಿನ, ಒಂದು ಅವಧಿಗೆ ತಮ್ಮ ಸೇವೆಯನ್ನು ಸಲ್ಲಿಸಲು ಅನುವು ಮಾಡಿ ಕೊಡಲಾಗುವುದು. ಈ ರೀತಿ ಲಕ್ಷಾಂತರ ಬಸವ ಭಕ್ತರಿಗೆ ಪ್ರಸಾದ ನೀಡಿ ಸೇವೆ ಸಲ್ಲಿಸುವ ಅಪೂರ್ವ ಅವಕಾಶವನ್ನು ಈ ವರ್ಷದಿಂದ ಕಲ್ಪಿಸಿದ್ದೇವೆ. ಇದನ್ನು ಪ್ರತಿಯೊಂದು ರಾಷ್ಟ್ರೀಯ ಬಸವ ದಳದವರು ಒಪ್ಪಿಕೊಂಡು ಕೂಡಲೇ ತಮ್ಮ ಒಪ್ಪಿಗೆಯನ್ನು ಹಾಗೂ ಶರಣ ಮೇಳಕ್ಕೆ ಎಷ್ಟು ಜನ ಸೇವೆಗಾಗಿ ಬರುತ್ತಿದ್ದೀರಿ ಎಂಬುದನ್ನು ಬೇಗನೇ ನಮಗೆ ತಿಳಿಸತಕ್ಕದ್ದು. ಆಗ ನಾವು ತಮ್ಮ ಸೇವಾವಧಿ ಯಾವ ದಿನ ಹಾಗೂ ಯಾವ ಅವಧಿಯಲ್ಲಿ ಮಾಡಬೇಕೆಂದು ಮೊದಲೇ ಪತ್ರ ಬರೆದು ತಿಳಿಸುವೆವು. ಇದಕ್ಕೆ ಹೆಚ್ಚಿನ ಆಸಕ್ತಿ ತೋರುವಿರಾಗಿ ನಂಬುವೆವು.

ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮಿಗಳು
ಪ್ರಧಾನ ಸಂಚಾಲಕರು , ಶರಣ ಮೇಳ ಉತ್ಸವ ಸಮಿತಿ
ಕೂಡಲಸಂಗಮ-೫೮೭೧೧೫, ಜಿಲ್ಲಾ-ಬಿಜಾಪುರ

೧೯೯೭ನೇ ಸಾಲಿನ ಲಿಂಗವಂತ (ಬಸವ) ಧರ್ಮಿಯರ ಹಬ್ಬ-ಹುಣ್ಣಿಮೆ-ಉತ್ಸವಗಳು

೧. ಶರಣ ಮೇಳ	ಜನವರಿ ೧೨ ರಿಂದ ೧೫
೨. ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ಶರಣ ಸಮಾಗಮ★	ಜನವರಿ ೧೪
೩. ಸಿದ್ಧರಾಮೇಶ್ವರ ಜಯಂತಿ ★	ಜನವರಿ ೧೪
೪. ಗಣರಾಜ್ಯೋತ್ಸವ ★	ಜನವರಿ ೨೬
೫. ಚನ್ನ ಹುಣ್ಣಿಮೆ (ಉಳಿವೆಯಲ್ಲಿ ರಥೋತ್ಸವ)	ಫೆಬ್ರುವರಿ ೨೨
ಪವಿತ್ರ ಗಣ ಭೋಜನ	ಫೆಬ್ರುವರಿ ೨೨
೬. ಕೂಡಲ ಸಂಗಮದಲ್ಲಿ ಶರಣ ಜ್ಯೋತಿ ದರ್ಶನ-ಮಾಘ ಹುಣ್ಣಿಮೆ	
೭. ಸರ್ವ ಶರಣರ ದಿನಾಚರಣೆ - ಮಹಾ ಶಿವರಾತ್ರಿ	ಮಾರ್ಚ ೭
೮. ಪೂಜ್ಯ ಮಾತಾಜಿಯವರ ವರ್ಧಂತಿ	ಮಾರ್ಚ ೧೩
೯. ಕಲ್ಯಾಣ ಕ್ರಾಂತಿ ಸಂಸ್ಮರಣಾ ಕಾರ್ಯಕ್ರಮ	
ಫಾಲ್ಗುಣ ಮಾಸದ ದ್ವಾದಶಿ - ಧರ್ಮಪಿತರ ಗಡಿಪಾರು	ಮಾರ್ಚ್ ೧೯
ತ್ರಯೋದಶಿ - ಹರಳಯ್ಯ ಮಧುವರಸರ ಬಂಧನ	ಮಾರ್ಚ್ ೨೦
ಚತುರ್ದಶಿ - ಶರಣರ ವಧೆ	ಮಾರ್ಚ್ ೨೧
ಹೋಳಿ ಹುಣ್ಣಿಮೆ - ಬಿಜ್ಜಳನ ವಧೆ	ಮಾರ್ಚ್ ೨೨
ಪಾಡ್ಯ- ಚನ್ನಬಸವಣ್ಣನವರ ಕಲ್ಯಾಣ ನಿರ್ಗಮನ	ಮಾರ್ಚ್ ೨೩
೧೦. ಶೂನ್ಯ ಪೀಠ ಸ್ಥಾಪನೆ, ಅಲ್ಲಮ ಪ್ರಭು ಜಯಂತಿ ★	ಎಪ್ರಿಲ್ ೮
೧೧. ಅಕ್ಕಮಹಾದೇವಿ ಜಯಂತಿ - ಚೈತ್ರ ಹುಣ್ಣಿಮೆ (ದವನದ)	ಎಪ್ರಿಲ್ ೨೨
೧೨. ಮಡಿವಾಳ ಮಾಚಿದೇವ ಜಯಂತಿ ★ - ಕಾಯಕ ದಿನ.	ಮೇ ೧
೧೩. ಬಸವ ಜಯಂತಿ ★	ಮೇ ೯
೧೪. ಪೂಜ್ಯ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ಲಿಂಗೈಕ್ಯ ದಿನ ಕೂಡಲ ಸಂಗಮದಲ್ಲಿ ಸಂಸ್ಮರಣೆ, ಗಣ ದಾಸೋಹ	ಜೂನ್ ೩೦
೧೫. ಬಸವ ಪಂಚಮಿ (ಲಿಂಗೈಕ್ಯ ದಿನಾಚರಣೆ-ಶ್ರಾವಣ ಶುದ್ಧ ಪಂಚಮಿ)	ಆಗಸ್ಟ್ ೮
೧೬. ನೀಲಮ್ಮ ಷಷ್ಠಿ	೯
೧೭. ಸ್ವಾತಂತ್ರ್ಯೋತ್ಸವ ★	ಆಗಸ್ಟ್ ೧೫
೧೮. ಪೂಜ್ಯ ಲಿಂಗಾನಂದ ಸ್ವಾಮಿಗಳ ಜಯಂತಿ ★	ಸಪ್ಟೆಂಬರ್ ೫
೧೯. ರಾಷ್ಟ್ರೀಯ ಬಸವ ದಳದ ಹುಟ್ಟುಹಬ್ಬ	ಸಪ್ಟೆಂಬರ್ ೫
೨೦. ಬಸವ ಧರ್ಮ ವಿಜಯೋತ್ಸವ, ವಿಜಯದಶಮಿ,★ (ಅಕ್ಕ ನಾಗಲಾಂಬಿಕಾ ಸಂಸ್ಮರಣಾ ದಿನ) ಸಾಮೂಹಿಕ ಇಷ್ಟಲಿಂಗಾರ್ಚನೆ	ಅಕ್ಟೋಬರ ೧೧
೨೧. ಕನ್ನಡ ರಾಜ್ಯೋತ್ಸವ ★	ನವಂಬರ ೧
೨೨. ಚನ್ನಬಸವ ಜಯಂತಿ ವಚನ ದೀಪೋತ್ಸವ	ನವೆಂಬರ್ ೧
೨೩. ಚನ್ನಬಸವ ಲಿಂಗೈಕ್ಯ ದಿನ ಕಾರ್ತಿಕ ಹುಣ್ಣಿಮೆ	ನವೆಂಬರ್ ೧೪

★ ಸಾರ್ವತ್ರಿಕ ರಜಾದಿನ

ಸಂಕಲ್ಪ ಗೀತೆ

ಷಟ್ಕೋನ ಧ್ವಜಾರೋಹಣಕ್ಕೆ ಮೊದಲು ಹಾಡುವ ಗೀತೆ

ಕರ್ತನ ಸೃಷ್ಟಿಯೊಳ್ ಹುಟ್ಟಿಹ ನಾನು
ಕರ್ತಗೆ ನಿಷ್ಠೆಯಿಂ ವಂದಿಪೆನು ॥ ಪ॥
ಬಸವನ ಸ್ಮರಿಸಿ ಲೋಕದ ಲೇಸಿಗೆ
ಪೈಜೆಯ ತೊಟ್ಟು ದುಡಿಯುವೆನು ॥ ಅ.ಪ॥
ಭಕ್ತಿಯ ಜಲದೊಳು ಮೈ ತೊಳೆಯುವೆನು
ಜ್ಞಾನದ ವಸ್ತ್ರವ ಧರಿಸುವೆನು।
ದೀನದಲಿತರ ಸೇವೆಯ ಗೈಯಲು
ಗಂಧದೊಲ್ ಬಾಳನು ಸವೆಸುವೆನು ॥ ೧॥
ಮಾನವರೆಲ್ಲರೂ ದೇವನ ಮಕ್ಕಳು
ಎನ್ನುತ ಧ್ವಜವನು ಹಾರಿಪೆನು।
ಗುರು ಬಸವಣ್ಣನ ವಚನದ ಸೌರಭ
ಹರಡಲು ಕಂಕಣ ಕಟ್ಟುವೆನು ॥ ೨॥
ಧರ್ಮದ ಕವಚವ ಧರಿಸುವೆನು
ತತ್ತ್ವದ ಖಡ್ಗವ ಹಿಡಿಯುವೆನು
ಕರ್ತನ ಕಮ್ಮಟವಾದೀ ಜಗದೊಳು
ಕಲ್ಯಾಣ ರಾಜ್ಯವ ಕಟ್ಟುವೆನು ॥ ೩॥

ರಚನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಗಣ ಧ್ವಜಾರೋಹಣ ಸನ್ನಿವೇಶದಲ್ಲಿ ಹಾಡಲಾಗುವ ಧ್ವಜ ಗೀತೆ

ಹೇ ಶರಣ ಬಂಧುಗಳೇ, ಬಸವ ಧ್ವಜವು ಹಾರುತಿದೆ
ಶಾಂತಿಧ್ವನಿ ಮೊಳಗುತಿದೆ । ಬನ್ನಿ ಬನ್ನಿ ಬನ್ನಿರೆಲ್ಲ ಭೇದಭಾವ ತೊಡೆದೀಗ ॥ ಪ ॥
ಜಾತಿಯತೆಯ ತಿಮಿರ ತೊಡೆದು ಧಾರ್ಮಿಕತೆಯ ತತ್ತ್ವ ಹಿಡಿದು
ಬಸವ ಪತಾಕೆಯ ಸಮತೆಯೊಡನೆ ಮೆರೆಸುತ॥
ಧರ್ಮವೆಮದು ಸದ್ಧರ್ಮ ಧರ್ಮವೆಮದು ಮಾನವ ಧರ್ಮ
ಧರ್ಮವೆಮದು ರಾಷ್ಟ್ರಧರ್ಮ ಧರ್ಮವೆಮದು ವಿಶ್ವಧರ್ಮ ॥ ೧॥
ಬಸವಾದಿ ಪ್ರಮಥರ ದಿವ್ಯ ಪರಂಪರೆಯವರು
ಮನುಕುಲದ ಸ್ವಾತಂತ್ರ್ಯಕೆ ದುಡಿವೆವೆಂಬ ಛಲದವರು
ಎಮ್ಮ ಬಾಳ ಕಣಕಣವು ಬಸವ ಪಾದಕರ್ಪಣ
ಎಮ್ಮ ಚೆನ್ನ ತನುಮನವು ನಾಡಗುಡಿಗೆ ತರ್ಪಣ ॥ ೨॥
ಜಾತಿ ಮತ ಪಂಥಗಳ ಕೀಳು ಭಾವ ಅಳಿಸುವಾ
ಭಿನ್ನಭೇದ ಮರೆತು ಬಾಳ್ವ ಪ್ರೇಮಭಾವ ಬೆಳೆಸುವಾ
ಶಾಂತಿ ಸ್ನೇಹ ಪ್ರೇಮ ಸಮತೆ ಅಂಗವಿಸಿ ಬಾಳುವಾ
ಬಸವ ಧರ್ಮ ಪ್ರಣತೆಯುರಿಗೆ ಬಾಳ ತೈಲವೆರೆಯುವಾ ॥ ೩॥

ರಚನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಬಸವ ಭಕ್ತರ ಪ್ರತಿಜ್ಞೆ

ಬಸವ ಭಕ್ತರು ನಾವು ಬಸವ ಭಕ್ತರು
ತತ್ತ್ವನಿಷ್ಠರು ನಾವು ತತ್ತ್ವನಿಷ್ಠರು ॥ಪ॥
"ಧರ್ಮಗುರು ಬಸವಣ್ಣ" ಎಂದು ಸಾರಿ ನುಡಿವೆವು
"ವಚನ ಶಾಸ್ತ್ರ ಸಂವಿಧಾನ" ಎಂದು ತಿಳಿದು ನಡೆವೆವು
"ಇಷ್ಟಲಿಂಗ ದೇವ ಕುರುಹು" ಎಂದು ನಂಬಿ ಪೂಜಿಪೆವು
"ಸಂಗಮವು ಧರ್ಮ ಕ್ಷೇತ್ರ" ಎಂದು ತಿಳಿದು ಬರುವೆವು ॥೧॥
"ಷಟ್ಕೋನ ಬಸವ ಧ್ವಜವ" ಹಿಗ್ಗಿನಿಂದ ಹಾರಿಪೆವು
"ದಿವ್ಯ ಗಣಲಿಂಗದ ದರ್ಶನ"ವ ಪಡೆವೆವು
"ಶರಣ ಮೇಳ"ದಲ್ಲಿ ಕೂಡಿ, ಹಾಡಿ ಪಾಡಿ ನಲಿವೆವು
"ಬಸವ ಧರ್ಮ ಪೀಠದ ಆದೇಶದಂತೆ" ನಡೆವೆವು ॥೨॥
"ಅಷ್ಟಾವರಣ ಅಂಗ"ವೆಂದು ನಾವು ನಿತ್ಯ ಧರಿಪೆವು
"ಷಡಾಚಾರ" ಪ್ರಾಣವೆಂದು ಅನುಷ್ಠಾನ ಗೈವೆವು
"ಷಟಸ್ಥಲ" ಶಿವಪಥದಿ ಶ್ರದ್ಧೆಯಿಂದ ಸಾಗುವೆವು
ಗುರುಬಸವ ತಂದೆಯು ಮೆಚ್ಚುವಂತೆ ಬಾಳುವೆವು ॥೩॥
ಜಾತಿವಾದ ಮನುಜಗೈದ ತಂತ್ರವೆಂದು ಸಾರುವೆವು
ನೀತಿ ಸಿರಿಯು ಒಂದೆ ಶ್ರೇಷ್ಠ ಸೂತ್ರವೆಂದು ತಿಳಿವೆವು
ದೇವನೊಬ್ಬ ನಮ್ಮ ತಂದೆ ಮನುಜರೆಲ್ಲರೊಂದೆ ಎಂದು
ವಿಶ್ವಸೋದರತ್ವ ಸಾರಿ ಕಲ್ಯಾಣ ರಾಜ್ಯ ಕಟ್ಟುವೆವು ॥೪॥

ರಚನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ನೀವು ತಿಳಿಯಬೇಕಾದ ಸಂಗತಿಗಳು

೧. ಬಸವ ತತ್ವಾನುಯಾಯಿಗಳ ಪವಿತ್ರ ಸಮಾವೇಶ "ಶರಣ ಮೇಳ" ಪ್ರತಿವರ್ಷವೂ ಬಸವ ಕ್ರಾಂತಿ (ಮಕರ ಸಂಕ್ರಾಂತಿ) ದಿನದಂದು (ಜನವರಿ ೧೪) ಕೂಡಲ ಸಂಗಮದಲ್ಲಿ ನಡೆಯುವುದು.
೨. ಬಸವ ಜಯಂತಿಯನ್ನು ವೈಶಾಖ ಮಾಸದ ರೋಹಿಣಿ ನಕ್ಷತ್ರದಲ್ಲಿ ಆಚರಿಸಬೇಕು.
೩. ಬಸವ ಶಕೆಯನ್ನು ಪೂಜ್ಯ ಗುರು ಬಸವಣ್ಣನವರು ಹುಟ್ಟಿದ ವರ್ಷ ೧೧೩೪ ರಿಂದ ಲೆಕ್ಕ ಹಾಕಬೇಕು. ಇದನ್ನು ಆಮಂತ್ರಣ ಪತ್ರಿಕೆಗಳಲ್ಲಿ ಹಾಕಬೇಕು.
೪. ಶ್ರೀ ಗುರು ಬಸವಣ್ಣನವರು ಲಿಂಗೈಕ್ಯರಾದುದು ಶ್ರಾವಣ ಶುದ್ಧ ಪಂಚಮಿಯಂದು, ೧೧೯೬ರಲ್ಲಿ. ಅದನ್ನು "ಬಸವ ಪಂಚಮಿ" ಎಂದು ಕರೆಯಬೇಕು. ಮನೆಮನೆಯಲ್ಲಿ ಆಚರಿಸಬೇಕು.
೫. ಪರಸ್ಪರ ಸಂಧಿಸಿದಾಗ ಕೈ ಮುಗಿದು "ಶರಣು ಶರಣಾರ್ಥಿ" ಎಂದೆನ್ನಿ.
೬. ಹರ್ಷದಿಂದ ಕಳಿಸುವಾಗ "ಜೈ ಜೈ" ಎಂದು ಕೈ ಬೀಸಿರಿ.
೭. ಸಾಮೂಹಿಕ ಜಯಘೋಷ ಮಾಡುವಾಗ "ಜಯ ಗುರು ಬಸವೇಶ ಹರಹರ ಮಹಾದೇವ" ಎನ್ನಿರಿ.
೯. ಯಾವುದೇ ಆಮಂತ್ರಣ ಪತ್ರಿಕೆ ಮುದ್ರಿಸುವಾಗ ಅದರಲ್ಲಿ "ಓಂ ಶ್ರೀ ಗುರು ಬಸವ ಲಿಂಗಾಯ ನಮಃ" ಎಂಬ ಮಂತ್ರವನ್ನು ಆರಂಭದಲ್ಲಿ ಮುದ್ರಿಸಬೇಕು.
೧೦. ಯಾವುದೇ ಕಾರ್ಯಗಳನ್ನು ಮಾಡುವಾಗ ಆದಿ ಪ್ರಮಥ ಗುರು ಬಸವಣ್ಣನವರನ್ನು ಪೂಜಿಸಿ, ಸ್ತುತಿಸಿ, ಧ್ಯಾನಿಸಿ ಕಾರ್ಯಾರಂಭ ಮಾಡಬೇಕು.
೧೧. ವಿಶೇಷ ದಿನಗಳಂದು, ಶರಣರ ಜಯಂತಿಗಳಂದು ಮನೆಗಳ ಮೇಲೆ ಗಣ ಧ್ವಜವನ್ನು ಹಾರಿಸಿರಬೇಕು.

ರಾಷ್ಟ್ರೀಯ ಬಸವ ದಳಗಳವರಿಂದ
ಗುರು ವಂದನ ಮತ್ತು ಪಥ ಸಂಚಲನ

ಬಸವ ಕ್ರಾಂತಿ ದಿನದಂದು ದಿನಾಂಕ ೧೪-೧-೧೯೯೬ ಬೆಳಿಗ್ಗೆ ಧ್ವಜವಂದನ ಮತ್ತು ಪಥ ಸಂಚಲನ ಕಾರ್ಯಕ್ರಮವಿರುತ್ತದೆ. ಬಸವ ಧರ್ಮದ ಮಹಾಜಗದ್ಗುರು ಪೀಠಾಧೀಶರಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು ಧ್ವಜಾರೋಹಣ ನಂತರ ಬಸವ ಜ್ಯೋತಿ ಉದ್ದಿಪನವನ್ನು ಮಾಡಲಿದ್ದಾರೆ. ಬಸವ ಜ್ಯೋತಿ ದರ್ಶನದ ನಂತರ ಗುರುವಂದನ ಕಾರ್ಯಕ್ರಮವಿರುತ್ತದೆ. ಇದು ಶಿಸ್ತು ಮತ್ತು ಸಂಘಟನೆಗಳನ್ನು ಪ್ರದರ್ಶಿಸುವ ಮಹತ್ವದ ಸ್ಫೂರ್ತಿದಾಯಕ ಕಾರ್ಯಕ್ರಮ. ಆದ್ದರಿಂದ ಎಲ್ಲಾ ರಾಷ್ಟ್ರೀಯ ಬಸವ ದಳಗಳವರು ಸಾಲಾಗಿ ಬಿಳಿವಸ್ತ್ರವನ್ನುಟ್ಟು ಮೇಲೆ ಕಾವಿಯ ಸ್ಕಾರ್ಫ್‌ನ್ನು ಹೊದ್ದು ಈ ಗುರುವಂದನ ಮತ್ತು ಪಥಸಂಚಲನದಲ್ಲಿ ಭಾಗವಹಿಸಬೇಕು. ಪ್ರತಿ ರಾಷ್ಟ್ರೀಯ ಬಸವ ದಳದವರು ತಮ್ಮ ತಮ್ಮ ರಾಷ್ಟ್ರೀಯ ಬಸವ ದಳದ ಬ್ಯಾನರ್ ಸಿದ್ಧಪಡಿಸಿಕೊಂಡು ಬರಬೇಕು. ಇದನ್ನು ಸರಿಯಾಗಿ ಕಾಯ್ದಿಟ್ಟುಕೊಂಡು ಬೇರೆ ಕಾರ್ಯಕ್ರಮಗಳಲ್ಲಿಯೂ ಉಪಯೋಗಿಸಬಹುದು. ಬ್ಯಾನರಿನಲ್ಲಿ ಬರೆಸಬೇಕಾದ ವಿಷಯ ಹೀಗಿದೆ.



॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
ರಾಷ್ಟ್ರೀಯ ಬಸವ ದಳ,
ಶಿವಮೊಗ್ಗ
ಶರಣ ಮೇಳಕ್ಕೆ ಜಯವಾಗಲಿ



ಒಳ್ಳೆಯ ಕಲಾವಿದರು ಇದ್ದರೆ ಬಸವಣ್ಣನವರ ಭಾವಚಿತ್ರ ಒಂದು ಬದಿಗೆ, ಬಸವೇಶ್ವರ ಐಕ್ಯಮಂಟಪ ಇನ್ನೊಂದು ಬದಿಗೆ ಬರೆಸಬಹುದು. ಅಂಥ ಒಳ್ಳೆಯ ಕಲಾವಿದರು ಸಿಕ್ಕದೆ ಇದ್ದರೆ ಕೇವಲ ಅಕ್ಷರಗಳನ್ನು ಬಟ್ಟೆಯ ಬ್ಯಾನರಿನಲ್ಲಿ ಬರೆಸಿದರೂ ಸಾಕು.

ಪಥ ಸಂಚಲನದಲ್ಲಿ ಭಾಗವಹಿಸುವ ರಾಷ್ಟ್ರೀಯ ಬಸವ ದಳಗಳವರು ದಿನಾಂಕ ೧೨ ಮತ್ತು ೧೩ ರಂದು ನಮ್ಮ ಬಳಿ ಹೆಸರನ್ನು ಬರೆಸಿ ವಿವರಗಳನ್ನು ಪಡೆದುಕೊಳ್ಳಬಹುದು. ಯಾವುದೇ ಸಂಕೋಚವಿಲ್ಲದೆ ದೊಡ್ಡವರು-ಸಣ್ಣವರು ಎಲ್ಲರೂ ಸಹೋದರ ಭಾವನೆಯಿಂದ ಗುರುವಂದನ ಮತ್ತು ಪಥಸಂಚಲನದಲ್ಲಿ ಭಾಗವಹಿಸಬೇಕೆಂದು ಕೋರುವೆವು.

ಸ್ವಯಂ ಸೇವಕರ ಸೇವೆ

ಧರ್ಮಗುರುವಿನ ಸೇವೆಯನ್ನು ತನು-ಮನ-ಧನಗಳಿಂದ ಮಾಡಬೇಕಾದುದು ಅತ್ಯಂತ ಅಗತ್ಯ. ಆದ್ದರಿಂದ ತನು ದಾಸೋಹ ಮಾಡಲು ರಾಷ್ಟ್ರೀಯ ಬಸವ ದಳಗಳವರು ಹೆಚ್ಚು ಹೆಚ್ಚು ಸ್ವಯಂ ಸೇವಕರನ್ನು ಕಳಿಸುವುದು ಅಗತ್ಯವಿದೆ. ಈಗಾಗಲೇ ಶರಣ ಮೇಳದ ಅಚ್ಚುಕಟ್ಟು ಒಳ್ಳೆಯ ಹೆಸರು ಪಡೆಯಲು ನಿಸ್ವಾರ್ಥಿಗಳಾದ ತನು ದಾಸೋಹಿಗಳ 'ಕಾಯಸೇವೆ' ಯೇ ಕಾರಣ. ಆದ್ದರಿಂದ ಹೆಚ್ಚು ಹೆಚ್ಚು ಕಾರ್ಯಕರ್ತರನ್ನು ಕಳಿಸಲು ರಾಷ್ಟ್ರೀಯ ಬಸವ ದಳದವರು ಸಿದ್ಧತೆ ಮಾಡಿಕೊಳ್ಳಬೇಕೆಂದು ಕೋರುತ್ತೇವೆ.

ಕಲ್ಯಾಣ ಕಿರಣ KRNB/312 BGW 92 ಡಿಸೆಂಬರ-೧೯೯೬

